ಸಂಧಿ ೧೩ – ನಾಮಸ್ಮರಣೆ ಸಂಧಿ

ಈ ಕಲಿಯುಗದಲ್ಲಿ ಎಲ್ಲಾ ಸಾಧನಕ್ಕಿಂತಲೂ ನಾಮೋಚ್ಚಾರಣವನ್ನು ಮಾತ್ರ ಭಕ್ತಿಯಿಂದ ಮಾಡಿದರೆ ಅದಕ್ಕೆ ಸಮವಾದುದು ಯಾವುದೂ ಇಲ್ಲವೆಂದು "ನಾಮ್ನಾಸ್ತಿ ಯಾವತೀ ಶಕ್ತಿಃ ಪಾಪ ನಿರ್ಹರಣೇಹರೇಃ॥ ತಾವತ್ಕರ್ತುಂ ನಶಕ್ನೋತಿ ಪಾತಕಂ ಪಾತಕೀಜನಃ" ಪರಮಾತ್ಮನ ನಾಮವನ್ನು ಭಕ್ತಿಯಿಂದ ಉಚ್ಚರಿಸಿದರೆ ಅದು ಎಷ್ಟು ಪಾಪಗಳನ್ನು ಪರಿಹಾರ ಮಾಡುವುದೋ ಅಷ್ಟು ಪಾಪಗಳನ್ನು ಮಹಾಪಾಪಿಯಾದ ಒಬ್ಬ ಮನುಷ್ಯನು ಅವನ ಆಯುಷ್ಯದಲ್ಲಿ ಮಾಡಲು ಸಾಧ್ಯವಾಗುವುದಿಲ್ಲವೆಂದು ಶ್ರೀಮದಾಚಾರ್ಯರ ವಾಕ್ಯವೇ ಇರುವುದು. ಆದ್ದರಿಂದ ದಾಸರಾಯರು ನಾಮಸ್ಮರಣೆಯ ಮಹಿಮೆಯನ್ನೂ ಅದನ್ನು ಮಾಡುವರೀತಿಯನ್ನೂ ಹೇಳುತ್ತಾ ಪ್ರಸಕ್ತಿಯಿಂದ ಸತ್ಸಾಧನೆಗೆ ಮುಖ್ಯಕಾರಣವಾದ ಭಗವದ್ಭಕ್ತರ ಮಹಿಮೆ ಎಂತಹುದೆಂಬ ವಿಚಾರವನ್ನೂ, ಪುಣ್ಯಪಾಪಗಳ ವಿಚಾರವನ್ನೂ, ಪಾಂಚಭೂತಿಕರಾದ ಜೀವರ ಭೋಜ್ಯ ಪದಾರ್ಥಗಳಲ್ಲಿ ಮಾಡಬೇಕಾದ ಅನುಸಂಧಾನಕ್ರಮವನ್ನೂ, ಶ್ರೀಪರಮಾತ್ಮನನ್ನು, ಹೊಂದುವ ರೀತಿಯನ್ನೂ ಸಹ ಈ ಸಂಧಿಯಲ್ಲಿ ಹೇಳುತ್ತಾರೆ:– ಅದರಲ್ಲಿ ಪ್ರಥಮ ಪದ್ಯದಿಂದ ಸಂಧಿಸೂಚನೆಯನ್ನು ಮಾಡುತ್ತ ಯಾವರೀತಿಯಿಂದ ನಾಮಸ್ಮರಣೆ ಮಾಡಿದರೂ ಮಹಾಫಲ ಉಂಟೆಂದು ಹೇಳುತ್ತಾರೆ:–

ಹರಿಕಥಾಮೃತಸಾರ ಗುರುಗಳ॥ ಪ ॥

ಮಕ್ಕಳಾಡಿಸುವಾಗ ಮಡದಿಯೊ
ಳಕ್ಕರದಿ ನಲಿವಾಗ ಹಯ ಪ
ಲ್ಲಕ್ಕಿ ಗಜ ಮೊದಲಾದ ವಾಹನಗಳೇರಿ ಮೆರೆವಾಗ ॥
ಬಿಕ್ಕುವಾಗಾಕಳಿಸುತಲಿ ದೇ
ವಕ್ಕಿ ತನಯನ ಸ್ಮರಿಸುತಿಹ ನರ
ಸಿಕ್ಕುವನೆ ಯಮದೂತರಿಗೆ ಆವಲ್ಲಿ ನೋಡಿದರು ॥ ೧ ॥

ಪದ್ಯಾರ್ಥ:–ಮಕ್ಕಳಾಡಿಸುವಾಗ, ಮಕ್ಕಳನ್ನು ಎತ್ತಿಕೊಂಡು ಮುದ್ದಿಟ್ಟು ಲಾಲಿಸುವಾಗಲೂ, ಅವುಗಳ ಆಟಪಾಟಗಳನ್ನು ನೋಡಿ ಸಂತೋಷ ಪಡುವಾಗಲೂ, ಆಟವನ್ನು ಆಡಿಸುವಾಗಲೂ, ಮಡದಿಯೋಳ್=ಹೆಂಡತಿಯೊಂದಿಗೆ, ಅಕ್ಕರದಿ=ಪ್ರೀತಿಯಿಂದ, ನಲಿವಾಗ=ಭೋಗಿಸುವ ಕಾಲದಲ್ಲಿಯೂ, ಹಯ= ಕುದುರೆ, ಪಲ್ಲಕ್ಕಿ, ಗಜ=ಆನೆ, ಮೊದಲಾದ ವಾಹನಗಳ, ಏರಿ=ಹತ್ತಿಕೊಂಡು ಮೆರೆವಾಗ, ಬಿಕ್ಕುವಾಗ, ಆಕಳಿಸುತಲಿ, ದೇವಕ್ಕಿತನಯನ, ಶ್ರೀಕೃಷ್ಣನ, ತದಾತ್ಮಕ ಶ್ರೀಹರಿಯನ್ನು, ಸ್ಮರಿಸುತಿಹ, ಸ್ಮರಣೆಮಾಡುತ್ತಿರುವ, ನರ=ಮನುಷ್ಯನು, ಆವಲ್ಲಿ ನೋಡಿದರು, ಎಲ್ಲಿ ಹುಡುಕಿದರೂ, ಯಮದೂತರಿಗೆ, ಶಿಕ್ಕುವನೆ?

ತಾತ್ಪರ್ಯ:– ಶ್ರೀಪರಮಾತ್ಮನ ನಾಮಸ್ಮರಣೆ ಮಾಡುವುದಕ್ಕೆ ಸ್ನಾನಾದಿಗಳನ್ನು ಮಾಡಿ ಜಪಾದಿಗಳನ್ನು ಜಪಿಸುವಂತೆ ಇಂತಹ ಕಾಲಗಳಲ್ಲೇ ಮಾಡಬೇಕು. ಮಿಕ್ಕ ಕಾಲದಲ್ಲಿ ಮಾಡಬಾರದೆಂತಿಲ್ಲ. ಸ್ಮರಣೆ ಮಾಡುವುದಕ್ಕೆ ಸರ್ವದಾ ಕಾಲವೆ. ಗರುಡ ಪುರಾಣದಲ್ಲಿ 'ಪುತ್ರಾದೀನಾಂ ಚುಂಬನೇಚೈವ ಕಾಲೆ ಸವೇಣು ಹಸ್ತಂ ಸಸ್ಮರೇತ್ಕೃಷ್ಣಮೇವ॥ ಸುಸಂಗಕಾಲೆ ಸ್ವಸ್ತಿಯಶ್ಚೈವ ನಿತ್ಯಂ ಗೋಪ ಸ್ತ್ರೀಣಾಂ ಪೀನಪಯೋಧರಂ ಧೃತಂ' ಮಕ್ಕಳನ್ನು ಚುಂಬನಾದಿಗಳನ್ನು ಮಾಡುವಾಗ ವೇಣಗೋಪಾಲಕೃಷ್ಣನನ್ನು ಸ್ಮರಿಸಬೇಕು. ತನ್ನ ಭಾರ್ಯಳಲ್ಲಿ ಭೋಗಿಸುವ ಕಾಲದಲ್ಲಿ ಗೋಪಿಕಾಸ್ತ್ರೀಯರ ಪೀನವಾದ ಕುಚಗಳನ್ನು ಧರಿಸಿರುವ ಶ್ರೀಕೃಷ್ಣನನ್ನು ಸ್ಮರಿಸಬೇಕು. ಎಂದು ಹೇಳಿರುವರು. ಇದೇ ಅರ್ಥವನ್ನೇ ದಾಸರಾಯರು ಈ ಪದ್ಯದಿಂದ ಹೇಳಿರುವರು. ಮಕ್ಕಳಾಡಿಸುವಾಗ, ಅವು ವಿಚಿತ್ರವಾದ ಆಟಗಳನ್ನಾಡುತ್ತಿದ್ದರೆ ಅದನ್ನು ನೋಡಿ ಭಗವಂತನು ಶಿಶುರೂಪಿಯಾಗಿ ಅಲ್ಲಿದ್ದು ಹೀಗೆ ಆಟವಾಡುತ್ತಿರುವನೆಂದು ಚಿಂತಿಸಬೇಕು. ಸ್ತ್ರೀಯಾದಿ ಭೋಗ ಕಾಲದಲ್ಲಿಯೂ ದಂಪತಿಗಳಲ್ಲಿ ದಂಪತಿ ರೂಪಿಯಾಗಿ ಪರಮಾತ್ಮನಿದ್ದು ಕ್ರೀಡಿಸುತ್ತಿರುವನೆಂದು ಪರಮಾತ್ಮನನ್ನು ಸ್ಮರಿಸಬೇಕು. 'ಆಸೀನಃ ಸಂವಿಶಂಸ್ತಿಷ್ಠನ್ ಭುಂಜಾನಃ ಪರ್ಯಟನ್ ಪಿಬನ್॥ ಚಿಂತಯಾನೋ ಹೃಷೀಕೇಶಮಪಶ್ಯತ್ತನ್ಮಯಂ ಜಗತ್' ಎಂಬ ಭಾಗವತ ದಶಮ ಸ್ಕಂಧದ ವಾಕ್ಯದಂತೆ ಕೂಡುವಾಗಲೂ, ಮಲಗುವಾಗಲೂ, ನಿಲ್ಲುವಾಗಲೂ, ಭುಂಜಿಸುವಾಗಲೂ, ಸಂಚರಿಸುವಾಗಲೂ, ಪಾನಮಾಡುವಾಗಲೂ, ಪರಮಾತ್ಮನನ್ನು ಚಿಂತಿಸುತ್ತಾ ಜಗತ್ತೆಲ್ಲ ತನ್ಮಯವಾಗಿಯೇ ಕಂಡನೆಂದು ಹೇಳಿರುವರು. ಇದೊಂದು ಸ್ಮರಣೆಗೆ ಸಾಧನವೆಂದರ್ಥ. ಮತ್ತು ಷಷ್ಠ ಸ್ಕಂಧದಲ್ಲಿ "ಪತಿತಃಸ್ಖಲಿತೋ ಭಗ್ನಃ ಸಂದಷ್ಟಸ್ತಪ್ತ ಆಹತಃ॥ ಹರಿರಿತ್ಯವಶೇನಾಹ ಪುಮಾನ್ನಾರ್ಹಸತಿ ಯಾತನಾಂ" ಬೀಳುವಾಗಲೂ, ಎಡುವವಾಗಲೂ, ಯಾವುದಾದರು ಗಾಯ ಮೊದಲಾದವು ತಗಲಿದಾಗಲು, ತುಟಿಯನ್ನು ಕಚ್ಚಿಕೊಂಡಾಗಲು, ಸಂತಪ್ತನಾಗಿರುವಾಗಲು ಏಟು ತಿಂದಕಾಲದಲ್ಲೂ ಸಹ, ಅಯ್ಯೋ ಅಪ್ಪ, ಅನ್ನದೆ ಹರೆ ಹರೆ ಅಂದರೆ ಸಾಕು. ಅವನು ಯಮಯಾತನೆಯನ್ನು ಹೊಂದನು, ಎಂದು ಹೇಳಿರುವರು. ಅಂದರೆ 'ಅಭಕ್ತ್ಯೋದಾಹೃತಂ ನೈವಫಲದಾತೃ

ಭವಿಷ್ಯತಿ' ಎಂಬ ಷಷ್ಟ ಸ್ಕಂಧದ ತಾತ್ಪರ್ಯಾನುಸಾರವಾಗಿ, ಭಕ್ತಿಯಿಲ್ಲದೆ ನಾಮೋಚ್ಚಾರಣೆ ಮಾಡಿದರೆ ಏನೂ ಫಲವಾಗುವುದಿಲ್ಲ. ಎಂದು ಸ್ಪಷ್ಟವಾಗಿರುವುದರಿಂದ ಭಕ್ತಿಯಿಂದ ಮಾತ್ರ ಮೇಲೆ ಹೇಳಿದಂತೆ ನಾಮೋಚ್ಚಾರಣೆ ಮಾಡಿದರೆ ಯಮದೂತರನ್ನು ಕಾಣುವುದಿಲ್ಲ.

ಅದರಂತೆಯೇ ದಾಸರಾಯರು ಕುದುರೆಯ ಮೇಲೂ, ಪಲ್ಲಕ್ಕಿಯ ಒಳಗೂ, ಆನೆ ಮೊದಲಾದ ವಾಹನಗಳ ಮೇಲೆ ಕೂತು ಮೆರೆಯುವಾಗಲೂ, ಪರಮಾತ್ಮನನ್ನು ಭಕ್ತಿಯಿಂದ ಸ್ಮರಿಸಿದ ಮನುಷ್ಯನು ಯಮದೂತರಿಗೆ ಸಿಕ್ಕನು. ಎಂದು ಹೇಳಿರುವರು. ಇದೇ ಪ್ರಕಾರ ಭಾಗವತ ಷಷ್ಟ ಸ್ಕಂಧದಲ್ಲಿ 'ಸಕೃನ್ಮನಃ ಕೃಷ್ಣ ಪದಾರವಿಂದ ಯೋರ್ನಿವೇಶಿತಂ ತದ್ಗುಣರಾಗಿಯೈರಿಹ॥ ನತೇ ಯಮಂ ಪಾಶಭೃತಶ್ಚ ತದ್ಭಟಾ್ಸ್ವಪ್ನೇಪಿ ಪಶ್ಯಂತಿ ಹಿಚೀರ್ಣ ನಿಷ್ಕೃತಾಃ' ಪರಮಾತ್ಮನ ಪಾದಾರವಿಂದದಲ್ಲಿ ಚೆನ್ನಾಗಿ ಮನಸ್ಸನ್ನಿಟ್ಟು ಒಂದಾವರ್ತಿಯಾದರೂ ಪರಮಾತ್ಮನ, ಗುಣನಾಮ ಕರ್ಮನಾಮಗಳನ್ನು ಅರ್ಥಜ್ಞಾನ ಪೂರ್ವಕವಾಗಿ ಉಚ್ಚರಿಸಿದರೆ ಅವರು ಯಮನನ್ನೇ ಆಗಲಿ, ಪಾಶಗಳನ್ನು ಧರಿಸಿದ ಯಮಭಟರನ್ನಾಗಲಿ ಸ್ವಪ್ನದಲ್ಲೂ ಕೂಡ ಕಾಣುವುದಿಲ್ಲ. ಏಕೆಂದರೆ, ಇದರಿಂದ ಮಾಡಲ್ಪಟ್ಟ ಪ್ರಾಯಶ್ಚಿತ್ತ ಉಳ್ಳವರಾಗಿರುವರು ಎಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ 'ಶಿಕ್ಕುವನೇ ಯಮದೂತರಿಗೆ ಆವಲ್ಲಿ ನೋಡಿದರು' ಎಂದು ದಾಸರಾಯರು ಹೇಳಿರುವರು.

ಮೇಲೆ ಹೇಳಿದುದನ್ನೇ ಪುನಃ ವಿವರಿಸುತ್ತಾರೆ.

ಸರಿತ್ತ್ರವಹಗಳಲ್ಲಿ ದಿವ್ಯಾಂ
ಬರದಿ ಪತ್ರಾದಿಯಲಿ ಹರ್ಷಾ
ಮರುಷ ವಿಸ್ಮೃತಿಯಿಂದಲಾಗಲಿ ಒಮ್ಮೆ ಬಾಯ್ದೆರೆದು ॥
ಹರಿ ಹರೀ ಹರಿ ಎಂಬ ಎರಡ
ಕ್ಷರ ನುಡಿದ ಮಾತ್ರದಲಿ ದುರಿತಗ
ಳಿರದೆಪೋಪವು ತೂಲರಾಶಿಯೊಳನಲಪೊಕ್ಕಂತೆ ॥ ೨ ॥

ಪದ್ಯಾರ್ಥ:– ಸರಿತ್ತ್ರವಹಗಳಲ್ಲಿ=ನದಿಗಳು ಪ್ರವಹಿಸುತ್ತಿರುವಲ್ಲಿಯೂ, ದಿವ್ಯಾಂಬರದಿ=ದಿವ್ಯವಸ್ತ್ರದ ಜೊತೆಯನ್ನು ಹರಿಯುವಾಗಾಗಲಿ, ಪತ್ರಾದಿಯಲಿ=ಎಲೆ ಮೊದಲಾದವುಗಳನ್ನು ಹರಿಯುವಾಗಲಿ, ಹರ್ಷಾಮರುಷ ವಿಸ್ಮೃತಿಯಿಂದಲಾಗಲಿ= ಹರ್ಷದಿಂದಾಗಲಿ ಕೋಪದಿಂದಾಗಲಿ ಯಾವದಾದರೂ ಒಂದು ಕಾರಣದಿಂದ, ಒಮ್ಮೆ=ಒಂದು ಸಲ, ಬಾಯಿ ತೆರೆದು, ಹರಿ ಹರೀ ಹರಿ ಎಂಬ ಎರಡಕ್ಷರ, ನುಡಿದ ಮಾತ್ರದಿ, ತೂಲರಾಶಿಯೊಳು= ಹಂಜಿಯ (ಹತ್ತಿಯ) ರಾಶಿಯಲ್ಲಿ, ಅನಲ ಪೊಕ್ಕಂತೆ=ಬೆಂಕಿ ಪ್ರವೇಶಿಸಿದಂತೆ, ದುರಿತಗಳು=ಪಾಪಗಳು, ಇರದೆ ಪೋಪವು=ಸುಟ್ಟು ಹೋಗುವುವು.

ತಾತ್ಪರ್ಯ:– ನದಿಯಲ್ಲಿ ನೀರು ಹರಿಯುತ್ತಿರುವಾಗ ಅದನ್ನು ನೋಡಿ ನೀರು ಹರಿಯುತ್ತದೆ ಎಂದು ಹೇಳುವಾಗ ಬರುವ ಹರಿ ಶಬ್ದವು, ವಸ್ತ್ರವನ್ನು ಹರಿಯೆಂದು ಹೇಳುವಾಗ ಬರುವ ಹರಿ ಶಬ್ದವು, ಎಲೆಯನ್ನು ಹರಿಯೆಂದು ಹೇಳುವಾಗ ಬರುವ ಹರಿ ಶಬ್ದವು, ಇವೇ ಮೊದಲಾದವುಗಳಲ್ಲಿ ನಮ್ಮ ಪ್ರಯತ್ನವಿಲ್ಲದೆ ತಾನಾಗಿ ಹೊರಡುವ ಹರಿಶಬ್ದವೂ ಕೂಡ ಮಹಾ ಫಲಪ್ರದವಾಗುವುದು. ಮತ್ತೂ ಹರ್ಷದಿಂದಾಗಲಿ, ಕೋಪದಿಂದಾಗಲಿ, ಯಾವದೋ ಕಾರಣದಿಂದ ವಿಸ್ಮೃತಿ ಬಂದಿರುವಾಗಾಗಲಿ, ಒಂದು ಸಲ ಬಾಯಿ ತೆರೆದು ಅಂದರೆ ಗಟ್ಟಿಯಾಗಿ ಹರಿ, ಹರೀ, ಹರಿ ಎಂದು ಉಚ್ಚರಿಸಿದರೂ ಹಂಜಿಯ ರಾಶಿಯಲ್ಲಿ ಬೆಂಕಿಯ ಕಿಡಿ ಸೋಕಿದಂತೆ ಪಾಪ ರಾಶಿಯು ಸುಟ್ಟುಹೋಗುವುದು. ಎಂದು ಹೇಳಿರುವರು. ಇದರಲ್ಲಿ ಒಂದು ವಿಶೇಷವನ್ನು ಗ್ರಹಿಸಬೇಕು. ನಾವು ಮಾಡುವುದು ಹರಿಸ್ಮರಣೆಯೆಂಬ ಜ್ಞಾನವೇ ನಮಗಿಲ್ಲದೆ ಎಲೆಯನ್ನು ಹರಿ, ಆ ಧೋತ್ರವನ್ನು ಹರಿ ಎಂದು ಹೇಳಿದ ಮಾತ್ರದಿಂದಲೆ ಪಾಪರಾಶಿ ಎಲ್ಲವು ಸುಟ್ಟು ಹೋಗುವುದೆಂದು ಇದರರ್ಥವಲ್ಲ. ಎಲೆಯನ್ನು ಹರಿಯೆಂದು ಹೇಳುವಾಗ, ಹರಿಶಬ್ದವನ್ನು ಅರ್ಥಜ್ಞಾನ ಪೂರ್ವಕ, ಪಾಪಹರಣ ಮಾಡುವುದರಿಂದ ಹರಿಯೆಂದು ಪರಮಾತ್ಮನಿಗೆ ಹೆಸರು ಬಂದಿತು, ಎಂಬ ಜ್ಞಾನವನ್ನು ತಕ್ಷಣ ತಂದುಕ್ಕೊಂಡು ಆ ಹರಿಶಬ್ದವು ಇಲ್ಲಿಯೂ ಪ್ರತಿಪಾದ್ಯವಾಗಿರುವುದೆಂದು ಭಾವಿಸಬೇಕು. ಅಂದರೆ ವಸ್ತ್ರಾದಿಗಳನ್ನು ಹರಿ ಎಂದು ಹೇಳುವಕಾಲದಲ್ಲಿ ತಾನಾಗಿ ಹೊರಡುವ ಹರಿಶಬ್ದವು ಹರಿಯನ್ನು ನೆನಪು ಮಾಡಿಕೊಡಲು ಅನುಕೂಲಿಸುವುದೆಂಬುದೇ ಈ ಪದ್ಯಾರ್ಥ. ಹೀಗೆ ಹೇಳಿದರೆ ದಾಸರಾಯರ ಅಭಿಪ್ರಾಯಕ್ಕೆ ವಿರುದ್ಧವೆಂದು ಭಾವಿಸಬಾರದು. ಇದೇ ಅಭಿಪ್ರಾಯವನ್ನು ಇಟ್ಟುಕ್ಕೊಂಡೇ ದಾಸರಾಯರು ಈ ಪದ್ಯವನ್ನು ರಚಿಸಿರುತ್ತಾರೆಂದು ನಿಶ್ಚಯ. ಹೇಗೆಂದರೆ ಭಾಗವತ ಷಷ್ಟ ಸ್ಕಂಧದ ಅಜಾಮಿಳನ ಚರಿತ್ರೆಯ ಸಂದರ್ಭದಲ್ಲಿ 'ಸಾಂಕೇತ್ಯಂ ಪಾರಿಹಾಸ್ಯಂ ವಾಸ್ತೋಭಂ ಹೇಳನಮೇವವಾ॥ ವೈಕುಂಠನಾಮ ಗ್ರಹಣಮಶೇಷಾಘಹರಂವಿದುಃ' ಎಂದು ಭಾಗವತ ಮೂಲದಲ್ಲಿ ಹೇಳಿರುವರು. ಇದರರ್ಥವನ್ನು ಸಾಮಾನ್ಯವಾಗಿ ಯೋಚಿಸಿದರೆ, ಯಾರಿಗಾದರೂ ಇವನು ಇಂಥವನೆಂದು ತಿಳಿದುಕೊಳ್ಳುವುದಕ್ಕಾಗಿ ರಾಮ, ಕೃಷ್ಣ ಎಂಬ ಹೆಸರನ್ನು ಇಟ್ಟಿರುತ್ತಾರೆ. ಆ ಸಂಕೇತ ಉಳ್ಳ ಹೆಸರು ಹಿಡಿದು ಯಾವನನ್ನಾದರೂ

ಕರೆಯುವಾಗ ಎಲೈ ರಾಮ! ಕೃಷ್ಣ! ಎಂದು ಕರೆದರೂ ಸರೆ, ರಾಮಾದಿ ಹೆಸರುಳ್ಳ ಒಬ್ಬನನ್ನು ಪರಿಹಾಸ ಮಾಡುವಾಗಾಗಲಿ, ಕೋಪವನ್ನು ಹುಟ್ಟಿಸುವುದಕ್ಕಾಗಲಿ, ದೂಷಿಸುವಾಗಾಗಲಿ, ಯಾವದಾದರೂ ನಿಮಿತ್ತದಿಂದ ಶ್ರೀಪರಮಾತ್ಮನ ನಾಮವು ಬಾಯಿಯಿಂದ ಬಂದರೆ ಸಾಕು, ಎಲ್ಲಾ ಪಾಪಗಳು ಸುಟ್ಟುಹೋಗುವುವು ಎಂದು ಭಾಗವತ ಕರ್ತರಾದ ವೇದವ್ಯಾಸದೇವರು ಹೇಳಿರುವರು. ಅದಕ್ಕೆ ಶ್ರೀಮದಾಚಾರ್ಯರು ಮಾಡಿರುವ ತಾತ್ಪರ್ಯವನ್ನು ಅನುಸರಿಸಿ ಮಾಡಿರುವ ವಿಜಯಧ್ವಜೀಯ ವ್ಯಾಖ್ಯಾನದಲ್ಲಿ ಇದರ ಅರ್ಥವನ್ನು ಹೇಳಿರುವರು.

ಅದೆಂತೆನೆ, ತನ್ನ ಮಕ್ಕಳು ಮೊದಲಾದವರನ್ನು ರಾಮ! ಕೃಷ್ಣ! ಎಂಬ ಹೆಸರು ಹಿಡಿದು ಕರೆದರೆ ಸಾಕು. ಅಷ್ಟಕ್ಕೆ ಪಾಪ ಪರಿಹಾರವಾಗುವುದೆಂಬ ತಾತ್ಪರ್ಯವಲ್ಲ. ಸಾಂಕೇತ್ಯಂ ಅಂದರೆ ಮಕ್ಕಳನ್ನು ರಾಮ ಎಂದು ಕರೆದ ಕಾಲದಲ್ಲಿ ಹೀಗೆ ಯೋಚಿಸಬೇಕು. ಮಕ್ಕಳಿಗೆ ಹೆಸರಿಡುವಾಗಲೆ ರಾಮಾದಿ ದೇವರ ಹೆಸರನ್ನು ಇಡುವ ಉದ್ದೇಶ್ಯವೇನು? ನಾವು ಸಂಸಾರದಲ್ಲಿ ಮೈಮರೆತು ಗೃಹಕೃತ್ಯ ಲೋಲುಪರಾಗಿರುತ್ತೇವೆ.

ಅಂತಹ ಕಾಲದಲ್ಲಿ ಮಕ್ಕಳನ್ನು ಕರೆಯುವಾಗಾದರೂ ಈ ಹೆಸರು ನೆನಪಿಗೆ ಬರಲಿ ಎಂಬ ಉದ್ದೇಶವಾಗಿ ದೇವರ ಹೆಸರನ್ನು ಇಟ್ಟಿರುವರು. ಆದ್ದರಿಂದ ರಾಮ! ಎಂದು ಮಗನನ್ನು ಕರೆವಾಗ 'ರಮಯತೀತಿ ರಾಮಃ' ಲೋಕದಲ್ಲೆಲ್ಲರಿಗೂ ಸಂತೋಷ ಪಡಿಸುವ ಗುಣವು ಇವನಲ್ಲಿರುವುದರಿಂದ ರಾಮನೆಂದು ಪರಮಾತ್ಮನಿಗೆ ಹೆಸರೆಂದು ಚಿಂತಿಸುತ್ತಾ ಯಾವಯಾವ ಕಾಲದಲ್ಲಿ ಮಗನನ್ನು ಕರೆದರೂ ಆಯಾ ಕಾಲದಲ್ಲೆಲ್ಲಾ ಹೀಗೆ ಪರಮಾತ್ಮನನ್ನು ಚಿಂತಿಸಬೇಕೆಂಬ ತಾತ್ಪರ್ಯ. ಹಾಗಾದರೆ ಅಜಾಮಿಳನು ಅಂತ್ಯಕಾಲದಲ್ಲಿ ಮಗನನ್ನು ನಾರಾಯಣನೆಂದು ಕರೆದ ಮಾತ್ರದಲ್ಲಿ ವಿಷ್ಣುದೂತರು ಕರೆದೊಯ್ದರಲ್ಲವೆ? ಅವನಿಗೆ ಹೇಗೆ ಗತಿಯಾಯಿತು! ಅಂದರೆ ಅವನಾದರೂ ತನ್ನ ಮಗನನ್ನೇ ಕರೆಯಲಿಲ್ಲ. ಯಮದೂತರನ್ನು ಕಣ್ಣಲ್ಲಿ ನೋಡಿದ ಮಾತ್ರದಿಂದ ಮಗನಲ್ಲಿ ವಾತ್ಸಲ್ಯ ಹುಟ್ಟಿ 'ದೂರೇ ಕ್ರೀಡನಕಾಸಕ್ತಂ ಪುತ್ರಂ ನಾರಾಯಣಾಹ್ವಯಂ॥ ಪ್ಲಾವಿತೇನ ಸ್ವರೇನೋಚ್ಚೈ ರಾಜುಹಾವಾಕುಲೇಂದ್ರಿಯಃ' ದೂರದಲ್ಲಿ ಆಟವಾಡುತ್ತಿದ್ದ ತನ್ನ ಮಗನಾದ ನಾರಾಯಣನನ್ನು ಗದ್ಗದ ಕಂಠದಿಂದ ವ್ಯಾಕುಲಚಿತ್ತನಾಗಿ ನಾರಾಯಣಾ ಎಂದು ಕರೆದನು ಎಂದು ಶ್ಲೋಕಾರ್ಥ ತೋರುವುದು. ಇದರಂತೆಯೇ ಇದರ ಹಿಂದಿನ ಶ್ಲೋಕದಲ್ಲಿ 'ಮತಿಂಚಕಾರತನಯೇ ಬಾಲೇನಾರಾಯಣಾಹ್ವಯೇ' ಪಾಶಹಸ್ತರಾದ, ಭಯಂಕರರಾದ ಮೂರು ಮಂದಿ ಯಮಭಟರನ್ನು ಕಣ್ಣಿನಿಂದ ನೋಡಿದ ಕೂಡಲೆ ಬಾಲಕನಾದ ನಾರಾಯಣ ಶಬ್ದವಾಚ್ಯನಾದ ತನ್ನ ಮಗನಲ್ಲಿ ಮನಸ್ಸು ಮಾಡಿದನು. ಎಂದು ಅರ್ಥವಾಗುವುದು, ಇದರ ತಾತ್ಪರ್ಯವೇನೆಂದರೆ, ಯಮದೂತರನ್ನು ಕಣ್ಣಿನಲ್ಲಿ ಕಂಡಕೂಡಲೇ ಭಯದಿಂದ ಪುತ್ರ ವಾತ್ಸಲ್ಯದಿಂದ ಮಗನನ್ನು ಕರೆಯಲು ಉದ್ದೇಶ್ಯವನ್ನು ಮಾಡಿದನು. ಅಷ್ಟರಲ್ಲಿ ಇವನ ಪ್ರಾರಬ್ಧ ಪರಿಹಾರವಾಗಿ ಯೋಗ್ಯ ಜೀವನಾದುದರಿಂದ ನಾರಾಯಣನೆಂಬ ಮಗನನ್ನು ಕರೆಯಲು ಯಾವಾಗ ಪ್ರಯತ್ನಪಟ್ಟನೋ ಆ ತಕ್ಷಣ ಪರಮಾತ್ಮನ ಜ್ಞಾಪಕವೇ ಬಂದಿತು; ಆದ್ದರಿಂದ 'ಮತಿಂಚ ಕಾರತನಯೇ ಬಾಲೇ ನಾರಾಯಣಾಹ್ವಯೇ' ತನಯ ಅಂದರೆ 'ತನುವಿಸ್ತಾರೆ, ಯೇತಿಜ್ಞಾನಂ ಸಮುದ್ದಿಷ್ಟಂ' ಅಂದರೆ ಜ್ಞಾನ, ತನುವಿಸ್ತಾರ, ವಿಸ್ತಾರವಾದ ಜ್ಞಾನ ಉಳ್ಳವನೆಂದರ್ಥ. ಬಾಲ ಅಂದರೆ ಪ್ರಾದೇಶ ಮಾತ್ರನಾಗಿ ೫ ವರ್ಷದ ಹುಡುಗನಂತೆ ನಮ್ಮ ಹೃದಯಾಕಾಶದಲ್ಲಿ ಶೋಭಿಸುವುದರಿಂದ ಬಾಲನೆಂದು ಪರಮಾತ್ಮನಿಗೆ ಹೆಸರು. ಇಂತಹಾ ಬಾಲ ನಾಮಕನಾದ, ವಿಸ್ತಾರವಾದ ಜ್ಞಾನ ಉಳ್ಳ ನಾರಾಯಣನಲ್ಲಿ ಮನಸ್ಸನ್ನಿಟ್ಟನು. 'ದೂರೇಕ್ರೀಡನಕಾಸಕ್ತಂ' ದೂರದಲ್ಲಿ ಅಂದರೆ ಬ್ರಹ್ಮಾಂಡದ ಹೊರಭಾಗದಲ್ಲಿ ಆಟವಾಡುವನು, ಯಾವ ಆಟ? ಸೃಷ್ಟಿಮಾಡುವುದು, ಸ್ಥಿತಿಮಾಡುವುದು; ಇಂತಹ ಕ್ರೀಡಾಸಕ್ತನಾದವನು. ಪುತ್ರಶಬ್ದವಾಚ್ಯನು "ಪುನ್ನಾಮ್ನೋ ನರಕಾತ್ತ್ರಾತಾ ಪುತ್ರ ಇತ್ಯಾಭಿ ಶಬ್ದ್ಯತೆ" ಪುತ್ ಎಂಬ ನರಕದಿಂದ ಬಿಡಿಸಿಬಿಡುವುದರಿಂದ ಪುತ್ರನೆಂದು ಪರಮಾತ್ಮನಿಗೆ ಹೆಸರು. ಇಂತಹಾ ಪುತ್ರನಾದ ನಾರಾಯಣನನ್ನು ಉಚ್ಚ ಧ್ವನಿಯಿಂದ ಕೂಗಿದನು. ಆಗ ವಿಷ್ಣುದೂತರು ಬಂದರೆಂದು ವ್ಯಾಖ್ಯಾನ ಮಾಡಿರುವರು. ಆದ್ದರಿಂದ 'ಸಾಂಕೇತ್ಯಾಂ' ಅಂದರೂ ಪರಮಾತ್ಮನ ನಾಮವು ಜ್ಞಾಪಕಕ್ಕೆ ಬರುವುದಕ್ಕಾಗಿ ಈ ಹೆಸರೆಂದು ಭಾವಿಸಿ ಮಕ್ಕಳನ್ನು ರಾಮಾದಿ ಹೆಸರಿನಿಂದ ಕೂಗುವಾಗ ಪರಮಾತ್ಮನ ನಾಮವನ್ನು ಸ್ಮರಣೆಗೆ ತರಬೇಕೆಂದು ಅರ್ಥ. 'ಪಾರಿಹಾಸ್ಯಂವಾ' ಅಂದರೆ ಪರಮಾತ್ಮನ ಹೆಸರುಳ್ಳ ಒಬ್ಬನನ್ನು ಹಾಸ್ಯಮಾಡುವಾಗ ಅವನ ಹೆಸರು ಹೇಳಿದರೂ ಸಾಕೆಂದು ಅರ್ಥವಲ್ಲ. ನಾರಾಯಣ ಎಂದು ಹೆಸರುಳ್ಳ ಒಬ್ಬನನ್ನು ಹಾಸ್ಯಮಾಡುವಾಗ 'ಓಹೋ! ನಾರಾಯಣನು ಇವನು! ಕ್ಷೀರಸಾಗರಭಟ್ಟ ಇವನೇ! ಬಡ್ಡಿಮಗನೆ! ಮನೆಯಲ್ಲಿ ನೀರು ಮಜ್ಜಿಗೆಗೆ ಗತಿಯಿಲ್ಲ. ನಾರಾಯಣನಂತೆ ಇವನು. ಆ ಸ್ವಾಮಿಯು ಕ್ಷೀರಸಮುದ್ರ ಶಾಯಿ, ಮುಕ್ತಾಶ್ರಯ, ದೋಷದೂರ, ಇವನೂ ನಾರಾಯಣನೇ? ಎಂದು ಹಾಸ್ಯ ಮಾಡುವಾಗಲು ನಾರಾಯಣನು ಮುಕ್ತಾಶ್ರಯ, ಇತ್ಯಾದಿ ನಾರಾಯಣನ ಗುಣೋಚ್ಚಾರಣ ಪೂರ್ವಕ ಸ್ಮರಣೆ ಮಾಡಿದಂತಾಯಿತು. ಇದರಿಂದ ಪಾಪ ಪರಿಹಾರವೆಂದರ್ಥ. ಸ್ತೋಭಂ ಅಂದರೆ ಕೋಪ ಉಂಟುಮಾಡಿಸುವುದು, ಅಥವಾ ದೂಷಿಸುವುದು ಅಂದರೆ ಮಧುಸೂದನ ಎಂಬ ಹೆಸರುಳ್ಳ ಒಬ್ಬನನ್ನು ದೂಷಿಸಿ ಅವನಿಗೆ ಕೋಪಬರುವಂತೆ ಮಾಡುತ್ತಾನೆ, ಆವಾಗಾದರೂ ನಮ್ಮ ಸ್ವಾಮಿಯು ಮಧು ಎಂಬ ದೈತ್ಯನನ್ನು ಸಂಹರಿಸಿದನು, ಅವನಿಗೆ ಮಧುಸೂದನನೆಂದು ಹೆಸರು ಬಂದಿತು. ಎಲೈ ಪಾಪಿ! ನೀನೆಂತಹಾ ಮಧುಸೂದನ! ಮಧು ಅಂದರೆ (ಮಧುಮಕ್ಷಿಕ) ಜೇನುಹುಳ, ಅದನ್ನು ಕೊಲ್ಲುವ ಯೋಗ್ಯತೆಯೂ ಕೂಡ ನಿನ್ನಲ್ಲಿಲ್ಲ. ಹೀಗಿರಲು ನೀನು ಮಧುಸೂದನನೆ? ಎಂದು ಒಬ್ಬನನ್ನು ದೂಷಿಸುವಾಗಲಾದರೂ

ಪರಮಾತ್ಮನ ಕರ್ಮನಾಮಾರ್ಥ ಜ್ಞಾನಪೂರ್ವಕ ಸ್ಮರಣೆ ಮಾಡಲು ಅಶೇಷಪಾಪವು ಪರಿಹಾರವೆಂದು ಅರ್ಥವೇ ಹೊರತು ನಾರಾಯಣಾದಿ ಹೆಸರುಳ್ಳ ಒಬ್ಬನನ್ನು ದೂಷಿಸುತ್ತಿರುವಾಗ ಆ ಹೆಸರು ಬಂದರೆ ಸಾಕು, ಪಾಪ ಪರಿಹಾರವೆಂದು ತಿಳಿದರೆ ಜಗತ್ತಿನಲ್ಲಿ ಪಾಪಿಯೇ ಇಲ್ಲ. ದುರ್ಯೋಧನಾದಿಗಳು ಎಷ್ಟೋಸಲ ಕೃಷ್ಣನ ಹೆಸರನ್ನು ಹೇಳುತ್ತಿದ್ದರು. ಸಾಯುವ ಕಾಲದಲ್ಲಿ ಕೃಷ್ಣನ ಸಮೀಪದಲ್ಲೇ ಸತ್ತನು, ಆದರೂ ಅವನಿಗೆ ಮುಕ್ತಿಯಾಗಲಿಲ್ಲ, ಆದ್ದರಿಂದ ಅಭಕ್ತಿಯಿಂದ ಉಚ್ಚರಿಸಿದ ನಾಮಕ್ಕೆ ಫಲವಿಲ್ಲೆಂದು ಹೇಳಿರುವರು. ಹಾಗಿರಲು ಎಲೆಯನ್ನು ಹರಿ! ಧೋತ್ರವನ್ನು ಹರಿ! ಎಂದು ಹೇಳಿದ ಮಾತ್ರದಿಂದಲೇ ಇವನಿಗೆ ಗತಿ ಆಗುವದೆಂದು ದಾಸರಾಯರ ಅಭಿಪ್ರಾಯವೆಂದು ಎಂದೂ ಹೇಳಲು ಸಾಧ್ಯವಲ್ಲ. ವ್ಯಾಸವಾಕ್ಯವನ್ನು ನೋಡಿದ ಶ್ರೀಮದಾಚಾರ್ಯರಿಗೆ ತೋರುವ ಅರ್ಥವನ್ನು ಬಿಟ್ಟು ಪ್ರಕಾರಾಂತರ ಅರ್ಥವನ್ನು ಅಂದರೆ ವ್ಯಾಸವಾಕ್ಯಕ್ಕೆ ತೋರದ ವಿರೋದಾರ್ಥವನ್ನು ಕಲ್ಪಿಸಿದರೆಂದು ಹೇಳಲು ಹೇಗೆ ಸಾಧ್ಯವಿಲ್ಲವೊ, ಅಂದರೆ ವೇದವ್ಯಾಸರ ಅಭಿಪ್ರಾಯವನ್ನು ತಿಳಿದೆ ಅದರ ವ್ಯಾಖ್ಯಾನ ಮಾಡಿರುವರೆಂಬ ಅಭಿಪ್ರಾಯವು. ಹಾಗೆಯೇ ಆಚಾರ್ಯರ ವಾಕ್ಯಕ್ಕೆ ವಿರುದ್ಧವಾಗಿ ದಾಸರಾಯರು ಎಂದಿಗೂ ಹೇಳುವುದಿಲ್ಲವಾದುದರಿಂದ ಧೋತ್ರವನ್ನು ಹರಿ! ಇತ್ಯಾದಿಗಳಲ್ಲಿ ಬರುವ ಹರಿ ಶಬ್ದವು ಭಕ್ತರಾಗಿದ್ದು ಸಂಸಾರದಲ್ಲಿ ನಿರತರಾಗಿ ಮೈಮರತ ಕಾಲದಲ್ಲಿ ಈ ನಿಮಿತ್ತ ಹರಿಶಬ್ದ ಬಂದರೂ ತಕ್ಷಣ ಹರಿಯನ್ನು ನೆನಪಿಗೆ ತಂದು ಹರಿಯನ್ನು ಸ್ಮರಿಸಿದರೆ ಪಾಪ ಪರಿಹಾರವೆಂದೇ ಅವರ ಅಂತರಭಿಪ್ರಾಯವು ಎಂದು ನಿಶ್ಚಯಿಸಬೇಕು.

ಮಲಗುವಾಗಲು ಏಳುವಾಗಲು
ಕುಳಿತು ಮಾತಾಡುತಲೆ ಮನೆಯೊಳು
ಕೆಲಸಗಳ ಮಾಡುತಲೆ ಮೈದೊಳೆವಾಗ ಮೆಲುವಾಗ ॥
ಕಲುಷದೂರನ ಸಕಲಠಾವಿಲಿ
ತಿಳಿಯೆ ತತ್ತನ್ನಾಮರೂಪವ
ಬಳಿಯೊಳಿಪ್ಪನು ಒಂದರಕ್ಷಣ ಬಿಟ್ಟಗಲನವರ ॥ ೩ ॥

ಪದ್ಯಾರ್ಥ:–ಮಲಗುವಾಗಲು, ಏಳುವಾಗಲು, ಕುಳಿತು ಮಾತಾಡುತಲೆ, ಮನೆಯೊಳು ಕೆಲಸಗಳ ಮಾಡುತಲೆ, ಮೈದೊಳೆವಾಗ= ಸ್ನಾನ ಮಾಡುವಾಗ, ಮೆಲುವಾಗ=ಭೋಜನ ಮಾಡುವಾಗ, ಕಲುಷದೂರನ=ನಿರ್ದೋಷಿಯಾದ ಶ್ರೀಹರಿಯ, ತತ್ತನ್ನಾಮರೂಪವ= ಅಲ್ಲಲ್ಲಿ ಆಯಾನಾಮಗಳಿಂದಲೂ, ಆಯಾ ರೂಪಗಳಿಂದಲೂ, ವಾಸವಾಗಿರುವ, ಆ ನಾಮರೂಪಗಳನ್ನು ಸಕಲಠಾವಿಲಿ=ಎಲ್ಲಾ ಸ್ಥಳಗಳಲ್ಲಿಯೂ, ತಿಳಿಯೆ=ಸ್ಮರಿಸಲು, ಬಳಿಯೊಳಿಪ್ಪನು= ಅವರ ಸಮೀಪದಲೆ, ವಾಸಮಾಡುವನು. ಒಂದರಕ್ಷಣ, ಅವರ=ಆ ಭಕ್ತರನ್ನು, ಬಿಟ್ಟಗಲ=ಬಿಟ್ಟುಹೋಗನು.

ತಾತ್ಪರ್ಯ:– ಮಲಗುವದು ಮೊದಲಾದ ಕಾಲದಲ್ಲಿಯೂ, ಸಕಲ ಸ್ಥಳಗಳಲ್ಲಿಯೂ, ತತ್ತನ್ನಾಮರೂಪವ ತಿಳಿಯಬೇಕೆಂದು ಈ ಪದ್ಯದಲ್ಲಿ ಹೇಳಿರುವರು. ತತ್ತನ್ನಾಮ ರೂಪವೆಂದರೇನು? ಅಂದರೆ ನಾವು ಮಲಗುವಾಗ, ನಮ್ಮ ಹಾಶಿಗೆಯಲ್ಲಿ ಶೇಷನು ಶ್ರೀಪರಮಾತ್ಮನಿಗೆ ಶಯ್ಯಾರೂಪನಾಗಿರುವಂತೆ ಈ ಶಯ್ಯಾದಲ್ಲಿ ಶ್ರೀಪರಮಾತ್ಮನಿರುವನು. ಇದರ ಮೇಲೆ ನನ್ನೊಳಗೆ ಪರಮಾತ್ಮನು ನನ್ನ ರೂಪದಿಂದಲೂ, ನನ್ನ ಹೆಂಡತಿಯಲ್ಲಿ ಲಕ್ಷ್ಮೀದೇವಿಯವರು ನನ್ನ ಸತಿಯ ರೂಪದಿಂದಲೂ ಇದ್ದು ಇಲ್ಲಿ ಮಲಗಿ ಭೋಗಾದಿಗಳನ್ನು ಅನುಭವಿಸಿ ನಿದ್ರೆ ಮಾಡುವರು. ಅವರ ಅನುಗ್ರಹದಿಂದ ಆ ಸುಖವನ್ನು ಯತ್ಕಿಂಚಿತ್ ನಮ್ಮ ಯೋಗ್ಯತಾನುಸಾರವಾಗಿ ನಮಗೆ ಕೊಡುತ್ತಿರುವರು, ಎಂದು ನಮ್ಮೊಳಗೂ, ಹಾಸಿಗೆಯೊಳಗೂ, ಸತಿಯೊಳಗೂ ಸಹ ಲಕ್ಷ್ಮೀನಾರಾಯಣರನ್ನೆ ಚಿಂತಿಸಬೇಕೆಂಬ ಭಾವ. ಅಥವಾ ತನ್ನ ಹಾಸಿಗೆಯಲ್ಲಿ ಶೇಷ ಪರ್ಯಂಕ ರೂಪಿಯಾಗಿಯೂ ತನ್ನಲ್ಲಿ ಪುರುಷ ರೂಪದಿಂದಲೂ, ತನ್ನ ಹೆಂಡತಿಯಲ್ಲಿ ಸ್ತ್ರೀರೂಪದಿಂದಲೂ, ಅದೇ ಆಕಾರ, ಅದೇ ನಾಮದಿಂದ ಒಂದೊಂದು ಸ್ಥಳದಲ್ಲಿಯೂ ಶ್ರೀಪರಮಾತ್ಮನು ಲಕ್ಷ್ಮೀಸಮೇತನಾಗಿರುವನೆಂದು ಭಾವಿಸಬೇಕು. ಇದರಂತೆ ಏಳುವಾಗಲೂ ಲಕ್ಷ್ಮೀನಾರಾಯಣರು ನಮ್ಮೊಳಗಿದ್ದು ಹಾಶಿಗೆ ಬಿಟ್ಟೆದ್ದರು ಎಂದು ತಿಳಿಯಬೇಕು. ಎದ್ದಮೇಲೆ ಸುತ್ತಮುತ್ತಲೂ ಯಾವ ವಸ್ತುಗಳನ್ನು ಕಾಣುವೆವೊ, ಮಲಗುವಾಗ ಶಯ್ಯಾ ಗೃಹದಲ್ಲಿ ಯಾವ ಪದಾರ್ಥಗಳನ್ನು ಕಾಣುವೆವೊ ಆ ವಸ್ತುಗಳಲ್ಲಿಯೂ ತದ್ರೂಪ ತದಾಕಾರನಾಗಿ ಭಗವಂತನಿರುವನೆಂದು ತಿಳಿಯಬೇಕು. ಕುಳಿತು ಮಾತಾಡುವಾಗ, ನಮ್ಮ ಬಾಯಿಯಿಂದ ಹೊರಡುವ ಎಲ್ಲಾ ಅಕ್ಷರ ಶಬ್ದ ವಾಚ್ಯನು ಪರಮಾತ್ಮನು. ಆಡಿದ ಮಾತುಗಳೇ ಭಗವಂತನ ಸ್ತೋತ್ರವು ಎಂದು ಭಾವಿಸಬೇಕು. ಮನೆಯಲ್ಲಿ ಯಾವ ಕೆಲಸವನ್ನು ಮಾಡುತ್ತಿದ್ದರೂ ಇವೆಲ್ಲವೂ ಭಗವತ್ಸೇವೆಯೆಂದು ಭಾವಿಸಿ ಅಲ್ಲಿ ಕಾಣುವ ಸಕಲ ಪದಾರ್ಥಗಳಲ್ಲಿಯೂ ತದಾಕಾರನಾಗಿ ತನ್ನಾಮಗಳಿಂದ ಪರಮಾತ್ಮನಿರುವನೆಂದು ತಿಳಿಯಬೇಕು. ಸ್ನಾನ ಮಾಡುವಾಗ, ಈ ನನ್ನ ದೇಹವು ಪರಮಾತ್ಮನಿಗೆ ಪ್ರತಿಮಾ ರೂಪವು. ಈ ಪ್ರತಿಮಾಕ್ಕೆ ಅಭಿಷೇಕವೆಂದು ಭಾವಿಸಿ ಸ್ನಾನಮಾಡಬೇಕು. ಅಥವಾ ಪರಮಾತ್ಮನಿಗೆ ನನ್ನ ದೇಹವು ರಥ. ಇದರೊಳಗೆ ಪರಮಾತ್ಮನನ್ನು ಚಿಂತಿಸಲು ಶುದ್ಧಿಗೋಸ್ಕರ ರಥವನ್ನು ತೊಳೆಯುವಂತೆ ಈ ದೇಹ ರಥವನ್ನು ತೊಳೆಯುವೆನು ಎಂದು ಭಾವಿಸಬೇಕು. ದೇಹದಲ್ಲಿ ವಸ್ತ್ರಾಭರಣಗಳನ್ನು ಧರಿಸುವಾಗಲು ಪ್ರತಿಮಾ ಭೂತವಾದ

ಈ ಶರೀರಕ್ಕೆ ಅಲಂಕರಿಸುವೆನು, ಅಥವಾ ಈ ರಥವನ್ನು ಅಲಂಕರಿಸುವೆನು, ಎಂದು ಚಿಂತಿಸಬೇಕು. ಭೋಜನ ಮಾಡುವಾಗ, ಅನ್ನರೂಪಿಯಾದ ಪರಮಾತ್ಮನನ್ನು ನನ್ನೊಳಗಿರುವ ಪರಮಾತ್ಮನಲ್ಲಿ ಶೇರಿಸುವೆನು ಎಂದು ಚಿಂತಿಸಬೇಕು ಎಂಬ ಅರ್ಥವನ್ನೇ 'ಸರ್ವಠಾವಿಲಿ ದುರಿತದೂರನ ತತ್ತನ್ನಾಮರೂಪವ ತಿಳಿಯೇ' ಎಂದು ಹೇಳಿರುವರೆಂದು ತಿಳಿಯಬೇಕು. ಇದಲ್ಲದೆ ಮಲಗುವಾಗಲು, ಕೂಡುವಾಗಲು, ಏಳುವಾಗಲು, ಕೆಲಸ ಮಾಡುತ್ತಲೂ, ಭೋಜನ ಮಾಡುತ್ತಲೂ ಸಹ ಸರ್ವಕಾಲದಲ್ಲಿಯೂ ಹರಿನಾಮ ಸ್ಮರಣೆಯನ್ನು ಮಾಡುತ್ತಿರಬೇಕೆಂಬ ಭಾವ. ಅಲ್ಲಲ್ಲಿ ತತ್ತನ್ನಾಮ ರೂಪವ ತಿಳಿಯುವುದು ಉಪಾಸನೆಯ ಕ್ರಮವು. ಸರ್ವಕಾಲದಲ್ಲಿಯೂ ಹರಿನಾಮ ಸ್ಮರಣೆಯನ್ನು ಮಾಡುತ್ತಿರಬೇಕೆಂಬ ಭಾವ. ಅಲ್ಲಲ್ಲಿ ತತ್ತನ್ನಾಮ ರೂಪವ ತಿಳಿಯುವುದು ಉಪಾಸನೆಯ ಕ್ರಮವು. ಸರ್ವ ಕಾಲದಲ್ಲಿಯೂ ನಾರಾಯಣ ಕೃಷ್ಣ ಎಂದು ಅನ್ನುವುದು ಭಕ್ತಿಪ್ರದರ್ಶಕ ಉಪಾಸನೆಯು, ಮನಸ್ಸಿನ ಕಾರ್ಯವು, ನಾಮೋಚ್ಚಾರಣೆಯು ಬಾಹ್ಯ ವ್ಯಾಪಾರವು. ಎರಡೂ ಇರಬೇಕೆಂಬ ತಾತ್ಪರ್ಯ.

ಆವ ಕುಲದವನಾದಡೇನಿ
ನ್ನಾವ ದೇಶದೊಳಿದ್ದಡೇ ನಿ
ನ್ನಾವ ಕರ್ಮವಮಾಡಲೇನಿನ್ನಾವಕಾಲದಲಿ ॥
ಶ್ರೀವರನ ಸರ್ವತ್ರದಲಿ ಸಂ
ಭಾವಿಸುತ ಪೂಜಿಸುತ ಮೋದಿಪ
ಕೋವಿದರಿಗುಂಟೇನೋ ಭವದುಃಖಾದಿ ದೋಷಗಳು ॥ ೪ ॥

ಪದ್ಯಾರ್ಥ:– ಆವ ಕುಲದವನಾದಡೇನು=ಯಾವ ಕುಲದವನಾದರೇನು, ಇನ್ನು, ಆವ ದೇಶದೊಳಿದ್ದಡೇನು= ಯಾವ ದೇಶದಲ್ಲಿದ್ದರೇನು, ಇನ್ನು, ಆವ ಕಾಲದಲಿ=ಮತ್ತು ಯಾವ ಕಾಲದಲ್ಲೇ ಆಗಲಿ, ಇನ್ನು ಆವ ಕರ್ಮವ ಮಾಡಲೇನು=ಮತ್ತೆ ಯಾವ ಕರ್ಮಗಳನ್ನು ಮಾಡಿದರೇನು, ಶ್ರೀವರನ=ಲಕ್ಷ್ಮೀಪತಿಯಾದ ಶ್ರೀಪರಮಾತ್ಮನ, ಸರ್ವತ್ರದಲಿ, ಸಂಭಾವಿಸುತ, ಪೂಜಿಸುತ, ಮೋದಿಪ=ಸಂತೋಷ ಪಡುವ, ಕೋವಿದರಿಗೆ=ಜ್ಞಾನಿಗಳಿಗೆ, ಭವ ದುಃಖಾದಿ ದೋಷಗಳು, ಉಂಟೇನೋ? ಇಲ್ಲ.

ತಾತ್ಪರ್ಯ:– ಪರಮಾತ್ಮನನ್ನು ಭಜಿಸಬೇಕಾದರೆ ಇಂತಹ ಕುಲದವನೇ ಆಗಬೇಕೆಂಬುವುದಿಲ್ಲ. ಇಂತಹ ದೇಶದಲ್ಲಿ ಭಜಿಸಬೇಕು, ಇಂತಹಾ ಕಾಲದಲ್ಲೆ ಇಂತಹ ಕರ್ಮವನ್ನೆ ಮಾಡಬೇಕೆಂಬುದೇನೂ ಇಲ್ಲ, ಯಾವ ದೇಶದಲ್ಲಾಗಲಿ, ಯಾವ ಕಾಲದಲ್ಲೇ ಆಗಲಿ, ಯಾವ ಕುಲದವನಾದರೂ ಪರಮಾತ್ಮನಲ್ಲಿ ಭಕ್ತಿ ಒಂದಿದ್ದರೆ ಸಾಕು. ಪರಮಾತ್ಮನು ಇವನ ಭವ ದುಃಖಾದಿಗಳನ್ನು ಪರಿಹರಿಸುವನು. ಭಾಗವತ ಸಪ್ತಮ ಸ್ಕಂಧ ೭ನೆಯ ಅಧ್ಯಾಯದಲ್ಲಿ, "ದೇವೋಽಸುರೊ ಮನುಷ್ಯೋವಾ ಎಕ್ಷೋ ಗಂಧರ್ವ ಏವಚ॥ ಭಜನ್ಮುಕುಂದ ಚರಣಂ ಸ್ವಸ್ತಿಮಾನ್ ಸ್ಯಾದ್ಯಥಾವಯಂ॥೫೨॥ ನಾಲಂ ದ್ವಿಜತ್ವಂ ದೇವತ್ವಂ ಋಷಿತ್ವಂ ವಾಽಸುರಾತ್ಮಜಾಃ॥ ಪ್ರೀಣನಾಯ ಮುಕುಂದಸ್ಯ ನವೃತ್ತಂ ನಬಹುಜ್ಞತಾ॥೫೩॥ ನದಾನಂ ನತಪೋನೇಜ್ಯಾ ನಶೌಚಂ ನವ್ರತಾನಿಚ॥ ಪ್ರೀಯತೇಽಮಲಯಾಭಕ್ತ್ಯಾ ಹರಿರನ್ಯ ದ್ವಿಡಂಬನಂ॥೫೪॥" ಪ್ರಹ್ಲಾದನು ದೈತ್ಯ ಬಾಲಕರಿಗೆ ಉಪದೇಶ ಮಾಡುವ ಪ್ರಕರಣ; ಪ್ರಹ್ಲಾದನು ಹೇಳಿದುದು:– ಎಲೈ ದೈತ್ಯ ಬಾಲಕರುಗಳಿರಾ! ದೇವತೆಯೇ ಆಗಲಿ, ದೈತ್ಯನೇ ಆಗಲಿ, ಮನುಷ್ಯನೇ ಆಗಲಿ, ಯಕ್ಷನಾಗಲಿ, ಗಂಧರ್ವನಾಗಲಿ, ಮೋಕ್ಷ ಪ್ರದನಾದ ಶ್ರೀಪರಮಾತ್ಮನನ್ನು ಭಜಿಸಿದರೆ ಯಾರಾದರೂ ನಮ್ಮಂತೆ ಸುಖವನ್ನು ಹೊಂದುವರು.॥೫೨॥ ಬ್ರಾಹ್ಮಣನಾಗಿ ಹುಟ್ಟೋಣ ಮಾತ್ರದಿಂದಲೇ ಆಗಲಿ, ದೇವತೆಯಾಗಿ ಹುಟ್ಟುವುದರಿಂದಲಾಗಲಿ, ಋಷಿತ್ವವೇ ಆಗಲಿ, ಪರಮಾತ್ಮನನ್ನು ಪ್ರೀತಿಪಡಿಸುವುದಕ್ಕೆ ಕಾರಣವಲ್ಲ, ಎಲೈ ದೈತ್ಯ ಬಾಲಕರಿರಾ! ಸದಾಚಾರ ಸಂಪನ್ನನಾಗಿರುವುದೂ ಕಾರಣವಲ್ಲ. ಬಹಳ ತಿಳಿದಿರೋಣವೂ ಕಾರಣವಲ್ಲ.॥೫೩॥ ದಾನವೂ ಕಾರಣವಲ್ಲ. ವ್ರತಗಳು ಕಾರಣವಲ್ಲ. ಶ್ರೀಹರಿಯು ನಿರ್ಮಲವಾದ (ನಿಷ್ಕಲ್ಮಷವಾದ) ಅಂದರೆ ದ್ವೇಷಾದಿ ಸಂಬಂಧವಿಲ್ಲದ ಭಕ್ತಿಯೊಂದಕ್ಕೆ ಮೆಚ್ಚುವನು. ಮಿಕ್ಕವೆಲ್ಲ ಬರೇ ಡಾಂಭಿಕವು ಎಂದು ಹೇಳಿರುವನು. ಇದೇ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ಹೇಳಿರುವರು.

ಪರಮಾತ್ಮನನ್ನು ಸದಾ ಸ್ಮರಿಸುತ್ತಿರುವವನು ಸಂಸಾರ ಸಮುದ್ರವನ್ನು ದಾಟುವನು. ಸದಾ ದುರ್ವಿಷಯಾಸಕ್ತನು ಸಂಸಾರದಲ್ಲಿ ಕ್ಲೇಶವನ್ನನುಭವಿಸುತ್ತಿರುವನೆಂದು ಹೇಳುತ್ತಾರೆ.

ವಾಸುದೇವನ ಗುಣಸಮುದ್ರದೊ
ಳೀಸಬಲ್ಲವ ಭವಸಮುದ್ರಾ
ಯಾಸವಿಲ್ಲದೆ ದಾಟುವನು ಶೀಘ್ರದಲಿ ಜಗದೊಳಗೆ ॥
ಬೇಸರದೆ ದುರ್ವಿಷಯಗಳ ನಭಿ
ಲಾಷೆಯಲಿ ಬಳಲುವವ ನಾನಾ
ಕ್ಲೇಶಗಳನನುಭವಿಪ ಭಕ್ತಿಸುಮಾರ್ಗ ಕಾಣದಲೆ ॥ ೫ ॥

ಪದ್ಯಾರ್ಥ:– ವಾಸುದೇವನ, ಗುಣಸಮುದ್ರದೊಳು=ಗುಣಗಳೆಂಬ ಸಮುದ್ರದೊಳಗೆ, ಈಸಬಲ್ಲವ, ಭವಸಮುದ್ರ=ಸಂಸಾರವೆಂಬ ಸಮುದ್ರವನ್ನು, ಜಗದೊಳಗೆ=ಈ ಜಗತ್ತಿನಲ್ಲಿ, ಶೀಘ್ರದಲಿ, ಆಯಾಸವಿಲ್ಲದೆ, ದಾಟಬಲ್ಲನು. ದುರ್ವಿಷಯಗಳನ=ದುಷ್ಟವಾದ ವಿಷಯ ಸುಖಗಳ ಅಭಿಲಾಷೆಯಲಿ, ಬೇಸರದೆ, ಬಳಲುವವ=ಲೋಲಾಡುತ್ತಿರುವವನು, ಭಕ್ತಿ ಸುಮಾರ್ಗ ಕಾಣದಲೆ=ಭಕ್ತಿಯೆಂಬ ಉತ್ತಮವಾದ ಮಾರ್ಗವನ್ನು ಕಾಣದಲೆ, ಕ್ಲೇಶಗಳನ್ನು, ಅನುಭವಿಪ.

ತಾತ್ಪರ್ಯ:– ಈ ಜಗತ್ತಿನಲ್ಲಿ ಯಾವ ಪುರುಷನು, ವಾಸುದೇವನ ಗುಣ ಸಮುದ್ರದಲ್ಲಿ ಈಸಲು ತಿಳಿದವನೋ ಅಂದರೆ ಸರ್ವದಾ ಪರಮಾತ್ಮನ ಗುಣಗಳನ್ನೇ ಕೊಂಡಾಡುತ್ತ ಸ್ಮರಿಸುತ್ತಾ, ನಾಮಗಳನ್ನುಚ್ಚರಿಸುತ್ತಾ ಕಾಲವನ್ನು ಕಳೆಯುವನೊ, ಆ ಪುರುಷನು, ಆಯಾಸವಿಲ್ಲದೆ ಸಮುದ್ರದಂತೆ ದಾಟಲಶಕ್ಯವಾದ ಸಂಸಾರದಿಂದ ಪಾರಾಗುವನು. ಹಾಗಿಲ್ಲದೆ ಯಾವಾಗಲು ಹೆಂಡತಿ, ಮಕ್ಕಳು ಮನೆಬಾಗಿಲೆಂದು ಇದರಲ್ಲೇ ಸ್ವಲ್ಪವಾದರೂ ಬೇಸರವಿಲ್ಲದೆ ಆಸಕ್ತನಾಗಿರುವನೋ, ಅವನು ಭಕ್ತಿ ಮಾರ್ಗವನ್ನೇ ಕಾಣದೆ ಸಂಸಾರದಲ್ಲಿ ಅನೇಕ ಪ್ರಕಾರ ಕಷ್ಟಗಳನ್ನನುವಭಿಸುತ್ತಿರುವನು.

ತಾನು ಮಾಡುವ ಕರ್ಮಗಳೆಲ್ಲವೂ ಭಗವತ್ಸೇವೆಯೆಂದು ಭಾವಿಸದೇ ಇರುವ ಮನುಷ್ಯನು ಮಾಡುವ ಸತ್ಕರ್ಮಗಳು ಸಹ ನಿರರ್ಥಕವಾಗುವವೆಂದು ಹೇಳುತ್ತಾರೆ.

ಸ್ನಾನ ಜಪ ದೇವಾರ್ಚನೆಯು ವ್ಯಾ
ಖ್ಯಾನ ಭಾರತಮುಖ ಮಹೋಪ ಪು
ರಾಣ ಕಥೆಗಳ ಪೇಳಿ ಕೇಳಿದರೇನು ದಿನದಿನದಿ ॥
ಜ್ಞಾನ ಕರ್ಮೇಂದ್ರಿಯಗಳಿಂದೇ
ನೇನು ಮಾಡುವ ಕರ್ಮಗಳು ಲಕು
ಮೀನಿವಾಸನ ಪೂಜೆಯೆಂದರ್ಪಿಸದ ಮಾನವನು ॥ ೬ ॥

ಪದ್ಯಾರ್ಥ:– ಜ್ಞಾನ ಕರ್ಮೇಂದ್ರಿಯಗಳಿಂದ=ಕಣ್ಣು ಕಿವಿ ಮೊದಲಾದ ಜ್ಞಾನೇಂದ್ರಿಯಗಳಿಂದಲೂ, ಕರಚರಣಾದಿ ಕರ್ಮೇಂದ್ರಿಯಗಳಿಂದಲೂ, ಏನೇನು ಮಾಡುವ ಕರ್ಮಗಳು=ಯಾವ ಯಾವ ಕರ್ಮಗಳನ್ನು ಮಾಡುವನೋ ಅವುಗಳನ್ನು, ಲಕುಮೀನಿವಾಸನ= ಶ್ರೀನಿವಾಸನ, ಪೂಜೆಯೆಂದು ಅರ್ಪಿಸದ=ಪರಮಾತ್ಮನಿಗೆ ಅರ್ಪಣ ಮಾಡದ, ಮಾನವನು= ಮನುಷ್ಯನು, ಸ್ನಾನ, ಜಪ, ದೇವತಾರ್ಚನೆಯು, ಇವುಗಳನ್ನು ಮಾಡುತ್ತಿದ್ದರೂ, ವ್ಯಾಖ್ಯಾನ= ಪರರಿಗೆ ಆ ಅರ್ಥಗಳನ್ನು ವಿವರಿಸುತ್ತಿದ್ದರೂ, ಭಾರತಮುಖ=ಭಾರತ ಮೊದಲಾದ, ಮಹೋಪ ಪುರಾಣ ಕಥೆಗಳ=ಭಾರತವೆಂಬ ಇತಿಹಾಸವನ್ನು ಮೊದಲು ಮಾಡಿ, ಭಾಗವತ ಮೊದಲಾದ ಮಹಾ ಪುರಾಣಗಳು, ಬ್ರಹ್ಮವೈವರ್ತ, ವಿಷ್ಣು ರಹಸ್ಯ ಮೊದಲಾದ ಉಪ ಪುರಾಣಗಳು ಇಂತಹಾ ಕಥೆಗಳನ್ನು, ದಿನದಿನದಿ, ಪೇಳಿ ಕೇಳಿದರೇನು=ಸ್ವಯಂ ಹೇಳಿದರೇನು? ಒಬ್ಬರ ಮುಖದಿಂದ ಕೇಳಿದರೂ ಪ್ರಯೋಜನವೇನು? ಫಲಕಾರಿಯಾಗುವುದಿಲ್ಲ.

ತಾತ್ಪರ್ಯ:– ಭಾಗವತ ಪ್ರಥಮಸ್ಕಂಧ ೫ ನೆಯ ಅಧ್ಯಾಯ ಶ್ಲೋಕ ೧೨ 'ನೈಷ್ಕರ್ಮ್ಯ ಮಪ್ಯಚ್ಯುತ ಭಾವವರ್ಜಿತಂ ನಶೋಭತೇ ಜ್ಞಾನಮಲಂ ನಿರಂಜನಂ॥ ಕುತಃ ಪುನಃ ಶಶ್ವದ ಭದ್ರಮೀಶ್ವರೆ ನಚಾರ್ಪಿತಂ ಕರ್ಮಯದಪ್ಯಕಾರಣಂ' ನೈಷ್ಕರ್ಮ್ಯವೆಂದರೆ ಫಲಾಪೇಕ್ಷೆ ಇಲ್ಲದೆ ಮಾಡುವ ಕರ್ಮಗಳು, ಇವು ಮುಕ್ತಿ ಸಾಧನೆವೆಂದು ಪ್ರಸಿದ್ಧಿಯಾಗಿರುವುದು. ಇಂತಹ ನೈಷ್ಕರ್ಮ್ಯವೆನಿಸುವ, 'ನಿರಂಜನಂ' ವಿಷಯಾದಿ ಕಲ್ಮಷ ರಹಿತವಾಗಿ ಶುದ್ಧವಾದ ವೈರಾಗ್ಯದಿಂದ ಕೂಡಿದ, ಅಲಂ=ಮುಕ್ತಿ ಸಾಧನಕ್ಕೆ ಸಾಧಕವಾಗುವ ಜ್ಞಾನವಿದ್ದರೂ ಭಗವದ್ಭಕ್ತಿ ಮಾತ್ರ ಇಲ್ಲದಿದ್ದರೆ, ಆ ಅಧಿಕಾರಿಗೆ ಸಂಪೂರ್ಣ ಫಲವು ಬರುವುದಿಲ್ಲ. ಅಥವಾ ಅವಿಚ್ಛಿನ್ನವಾಗಿ ಪರಮಾತ್ಮನ ಪಾದಾರವಿಂದದಲ್ಲಿ ಮನಸ್ಸನ್ನು ನಿಲ್ಲಿಸದಿದ್ದರೆ ಸಂಪೂರ್ಣ ಫಲಪ್ರಾಪ್ತಿಯಾಗುವುದಿಲ್ಲ. ಹೀಗಿರಲು ವಿಷಯಾದಿಗಳಲ್ಲಿ ಆಸಕ್ತನಾಗಿ, ಬಂಧಕ ಶಕ್ತಿಯುಳ್ಳ, ಸರ್ವದಾ ಅಮಂಗಳವೆನಿಸುವ, ಭಗವಂತನಿಗರ್ಪಿಸದ ಕರ್ಮಗಳನ್ನು ಫಲಾಪೇಕ್ಷೆ ಇಲ್ಲದೆ ಮಾಡಿದರೂ ಕೂಡ ಫಲಕಾರಿಯಲ್ಲವೆಂದು ಹೇಳಲೂ ಬೇಕೆ? ಎಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ಹೇಳಿರುತ್ತಾರೆ.

ತನ್ನ ಜ್ಞಾನೇಂದ್ರಿಯಗಳಿಂದಲೂ ಕರ್ಮೇಂದ್ರಿಯಗಳಿಂದಲೂ ಮಾಡುವ ಕರ್ಮ ಗಳನ್ನು ಭಗವಂತನ ಪೂಜೆಯೆಂದು ಭಾವಿಸಿ ಎಲ್ಲಾ ಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸಿದರೆ ಮಾಡಿದುದೆಲ್ಲ ಸಾರ್ಥಕವೇ ಆಗುವವು. ಹಾಗಿಲ್ಲದಿದ್ದರೆ, ಇವನು ಬೇಕಾದ ನದಿಗಳಲ್ಲಿ ಸ್ನಾನ ಮಾಡಿ ಜಪಾದಿಗಳನ್ನು ಜಪಿಸುತ್ತಿರಲಿ, ಜನಮೆಚ್ಚುವಂತೆ ದೇವರ ಪೂಜೆಯನ್ನು ಆಡಂಬರದಿಂದ ಮಾಡುತ್ತಿರಲಿ, ಭಾರತಾದಿಗಳನ್ನು ಉಪನ್ಯಾಸ ಮಾಡಲಿ; ಭಾರತ, ಭಾಗವತ ಮೊದಲಾದ ಪುರಾಣಗಳು, ಬ್ರಹ್ಮವೈವರ್ತ ಮೊದಲಾದ ಪುರಾಣಗಳನ್ನು ಹೇಳಲಿ, ಕೇಳಲಿ ಪರಮಾತ್ಮನನ್ನು ಮನಸ್ಸಿನಲ್ಲಿ ಸರ್ವದಾ ನಿಲ್ಲಿಸದಿದ್ದರೆ, ಇವುಗಳಾವುವೂ ಫಲಕಾರಿಗಳಾಗುವುದಿಲ್ಲ.

ಸರ್ವಕರ್ತನು ಪರಮಾತ್ಮನೆಂದರಿತು ಕರ್ಮಗಳನ್ನು ಮಾಡುವವನು ದೈವ ಸಂಕಲ್ಪದಿಂದ ಅಕಸ್ಮಾತ್ತಾಗಿ ಪಾಪಕರ್ಮಗಳನ್ನು ಮಾಡಿದರೂ ಆ ಪಾಪವು ಇವನನ್ನು ಭಾಧಿಸುವುದಿಲ್ಲವೆಂದು ಎರಡು ದೃಷ್ಟಾಂತಗಳಿಂದ ತೋರಿಸುತ್ತಾರೆ.

ದೇವಗಂಗೆಯೊಳುಳ್ಳವಗೆ ದುರಿ
ತಾವಳಿಗಳುಂಟೆ ವಿಚಾರಿಸೆ
ಪಾವುಗಳ ಭಯಉಂಟೆ ವಿಹಗಾಧಿಪನ ಮಂದಿರದಿ ॥
ಜೀವಕರ್ತೃತ್ವವನು ಮರೆದು ಪ
ರಾವರೇಶನ ಕರ್ತುಯಂದರಿ
ದಾವಕರ್ಮವ ಮಾಡಿದರು ಲೇಪಿಸವು ಕರ್ಮಗಳು ॥ ೭ ॥

ಪದ್ಯಾರ್ಥ:– ದೇವಗಂಗೆಯೊಳುಳ್ಳವಗೆ=ದೇವಗಂಗೆಯೆಂದರೆ ಆಕಾಶ ಗಂಗೆ, ಅಥವಾ ದೇವನದೀ ಎಂದು ಪ್ರಸಿದ್ಧಿಯನ್ನು ಪಡೆದ ಗಂಗೆಯಲ್ಲಿ, ಉಳ್ಳವಗೆ=ಇರುವವನಿಗೆ, ಅಂದರೆ ಅದರ ಮಹಾತ್ಮ್ಯಜ್ಞಾನ ಪೂರ್ವಕ ಸ್ನಾನಾದಿಗಳನ್ನು ಮಾಡುತ್ತ ಅಲ್ಲೇ ಇರುವವನಿಗೆ, ವಿಚಾರಿಸೆ=ವಿಚಾರಿಸಿ ನೋಡಲು, ದುರಿತಾವಳಿಗಳುಂಟೆ=ಪಾಪ ಪಜ್ಜೆಗಳು(ರಾಶಿಗಳು) ಇರುವುವೆ, ವಿಹಗಾಧಿಪನ=ಪಕ್ಷಿಶ್ರೇಷ್ಠನಾದ ಗರುಡನ, ಮಂದಿರದಿ=ಮನೆಯಲ್ಲಿ, ಪಾವುಗಳ ಭಯವುಂಟೆ? ಹಾಗೆಯೇ, ಜೀವ ಕರ್ತೃತ್ವವನು=ಜೀವನು ಸ್ವತಂತ್ರದಿಂದ ಕರ್ಮಗಳನ್ನು ಮಾಡುವನೆಂಬ ಬುದ್ಧಿಯನ್ನು, ಮರೆದು=(ಮರೆತು) ತೊರೆದು, ಪರಾವರೇಶನ=ಬ್ರಹ್ಮ ಮೊದಲು ಸ್ಥಾವರಾಂತವಾದ ಸರ್ವಪ್ರಾಣಿಗಳಿಗೂ, ಈಶ್ವರನಾದ ಶ್ರೀಹರಿಯೇ, ಕರ್ತು=ಸ್ವತಂತ್ರದಿಂದ ಮಾಡಿ ಮಾಡಿಸುವವನು, ಎಂದರಿತು, ಆವಕರ್ಮವ ಮಾಡಿದರು, ಕರ್ಮಗಳು=ಆ ಕರ್ಮಗಳು ಅಂದರೆ ಅವುಗಳಿಂದುಂಟಾಗುವ ಪಾಪ ಪುಣ್ಯಗಳು, ಲೇಪಿಸವು.

ತಾತ್ಪರ್ಯ:– ಗಂಗೆಯ ಮಹಾತ್ಮ್ಯ ಜ್ಞಾನವಿಲ್ಲದೆ ಅದರಲ್ಲಿ ಕಾಗೆ ಮುಳುಗುವಂತೆ ಮುಳುಗಿದರೆ ಫಲವಿಲ್ಲ. ಭಗವದ್ಭಕ್ತಿಯಿಂದ ಅದರ ಮಹಾತ್ಮ್ಯ ಜ್ಞಾನಪೂರ್ವಕ, 'ಸಏವದ್ರವರೂಪೇಣ ಗಂಗಾಂಭೋ ನಾತ್ರಸಂಶಯಃ' ಶ್ರೀಹರಿಯೇ ದ್ರವ (ಉದಕ) ರೂಪನಾಗಿ ಗಂಗೆಯ ಉದಕದಲ್ಲಿರುವನು, ಈ ವಿಷಯದಲ್ಲಿ ಸಂಶಯವೇ ಇಲ್ಲ. ಎಂದು ತಿಳಿದು ಸ್ನಾನಪಾನಾದಿಗಳನ್ನು ಮಾಡುತ್ತ ಅಲ್ಲೇ ವಾಸ ಮಾಡುತ್ತಿದ್ದರೆ ಅವನಿಗೆ ಪಾಪಲೇಪವು ಹೇಗಿಲ್ಲವೊ, ಗರುಡ ಮಂತ್ರವನ್ನು ಜಪಿಸಿ ಗರುಡನನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವನ ಮನೆಯಲ್ಲಾಗಲಿ, ಗರುಡನು ವಾಸಮಾಡುವ ಸ್ಥಳದಲ್ಲೇ ಆಗಲಿ ಸರ್ಪದ ಭಯವು ಹೇಗಿರುವುದಿಲ್ಲವೊ ಹಾಗೆ 'ನಾಹಂಕರ್ತಾ ಹರಿಃ ಕರ್ತಾ' ಎಂದು ತಿಳಿದು, ಜೀವರು ಸ್ವತಂತ್ರದಿಂದ ಯಾವ ವಿಧವಾದ ಕರ್ಮಗಳನ್ನು ಮಾಡುವುದಕ್ಕೂ ಶಕ್ತರಲ್ಲ. 'ತೇನವಿನಾ ತೃಣಮಪಿ ನಚಲತಿ' ಪರಮಾತ್ಮನ ಹೊರತು ತೃಣಗಳೂ ಸಹ ಚಲಿಸುವಂತಿಲ್ಲ. ಅಂದರೆ ಅಲ್ಪಕಾರ್ಯವೂ ಸಹ ಆಗುವಂತಿಲ್ಲವೆಂದು ತಿಳಿದು, ಪರಮಾತ್ಮನು ಮಾಡಿಸಿದಂತೆ ಅಸ್ವತಂತ್ರದಿಂದ ಮಾಡುವವನು ನಾನು, ಸ್ವತಂತ್ರ ಕರ್ತಾ ಪರಮಾತ್ಮನೆಂದು ಭಾವಿಸಿ ಉಪಾಸನೆ ಮಾಡುವವನು ಪ್ರಾಯಶಃ ಪಾಪಗಳನ್ನು ಮಾಡುವುದೇ ಇಲ್ಲ. ಒಂದು ವೇಳೆ ಆಕಸ್ಮಿಕವಾಗಿ ಮಾಡಿದರೂ ಅವು ಅವನನ್ನು ಬಾಧಿಸುವುದಿಲ್ಲವೆಂದು ತಾತ್ಪರ್ಯ.

ಏನು ಮಾಡಿದರೂ ಅಂದರೆ ಮನಃ ಪೂರ್ವಕವಾಗಿ ನಿಷಿದ್ಧವಾದ ಬ್ರಹ್ಮ ಹತ್ಯಾದಿಗಳನ್ನು ಮಾಡಿ ದೇವರು ಮಾಡಿಸಿದನೆಂದು ಹೇಳುವುದೆಂದರ್ಥವಲ್ಲ. ಏಕೆಂದರೆ, ಯಾವನು ಬ್ರಹ್ಮಹತ್ಯಾದಿ ಮಹಾ ಪಾಪಗಳನ್ನು ಮಾಡಲು ಹೆದರುವುದಿಲ್ಲವೊ ಅವನಿಗೆ ಭಗವದ್ಭಕ್ತಿ ಇರುವುದೇ ಇಲ್ಲ. ಯಾವನು ಸರ್ವತ್ರ ಭಗವಂತನನ್ನು ಚಿಂತಿಸುತ್ತಿರುವನೋ ಅವನು ಇರುವು, ತಗಣಿ ಮೊದಲಾದವುಗಳಲ್ಲಿಯೂ ಸಹ ತದ್ರೂಪಿಯಾಗಿ ಪರಮಾತ್ಮನೇ ಇರುವನೆಂದು ತಿಳಿದಿರುವನು. ಅಂತಹವನು ಅವುಗಳನ್ನು ಹಿಂಸಿಸುವುದೆಂತು? ಆದ್ದರಿಂದ ಪಾಪಕೃತ್ಯಕ್ಕೆ ಭಕ್ತರು ಪ್ರವರ್ತಿಸುವುದೇ ಇಲ್ಲ. ಪ್ರಾರಬ್ಧ ಕರ್ಮವಶದಿಂದಲೂ ದೈವೇಚ್ಛೆಯಿಂದಲೂ ಆಕಸ್ಮಿಕವಾಗಿ ಪಾಪ ಕೃತ್ಯಗಳು ನಡದರೆ ಅದಕ್ಕೆ ಪಶ್ಚಾತ್ತಾಪ ಹುಟ್ಟುತ್ತದೆ. ಪಶ್ಚಾತ್ತಾಪದಿಂದ ಪರಮಾತ್ಮನನ್ನು ಚಿಂತಿಸಿ, ಪರಮಾತ್ಮನೇ ಮಾಡಿಸಿದನೆಂದು ತಿಳಿದು ಅವನಿಗೆ ಅದನ್ನು ಸಮರ್ಪಿಸಿದರೆ ಆ ಪಾಪಗಳೆಲ್ಲವೂ ಭಸ್ಮವಾಗುವವು. ಭಾಗವತ ಷಷ್ಠ ಸ್ಕಂಧ ಅಜಾಮಿಳನ ಚರಿತ್ರೆಯಲ್ಲಿ "ಪ್ರಾಯಶ್ಚಿತ್ತಾನಿ ಚೀರ್ಣಾನಿ ನಾರಾಯಣ ಪರಾಙ್ಮುಖೈಃ॥ ನವೈ ಪುನಂತಿ ರಾಜೇಂದ್ರ ಸುರಾಕುಂಭ ಮಿವಾಪಗಾಃ" ಮದ್ಯದಿಂದ ತುಂಬಿದ ಮಣ್ಣಿನ ಕೊಡವನ್ನು ಯಾವ ನದಿಯಲ್ಲಿ ತೊಳೆದರೂ ಹೇಗೆ ಶುದ್ಧಿಯಾಗದೋ, ಹಾಗೆ ನಾರಾಯಣನಲ್ಲಿ ವಿಮುಖರಾದವರು ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೂ ಪಾಪ ಪರಿಹಾರವಾಗುವುದಿಲ್ಲ ಎಂದು ಹೇಳಿ, ಮತ್ತು, 'ಸ್ತೇನಸ್ಸುರಾಪೋ ಮಿತ್ರಧ್ರುಕ್ ಬ್ರಹ್ಮಹಾ ಗುರುತಲ್ಪಗಃ॥ ಸ್ತ್ರೀ ರಾಜ ಪಿತೃಗೋಹಂತಾ ಯೇಚಪಾತಕಿ ನೋಽಪರೆ॥ ಸರ್ವೇಽಷಾಮಪ್ಯಘವತಾಮಿದಮೇವ ಸುನಿಷ್ಕೃತಂ' ಸ್ವರ್ಣಸ್ತೇಯ, ಸುರಾಪಾನ, ಮಿತ್ರದ್ರೋಹ, ಬ್ರಹ್ಮಹತ್ಯ, ಗುರುಸ್ತ್ರೀ ಗಮನ, ಸ್ತ್ರೀಹತ್ಯ, ರಾಜಹತ್ಯ, ಪಿತೃಹತ್ಯಾ, ಗೋಹತ್ಯಾ ಇನ್ನು ಇತರವಾದ ಪಾಪಗಳನ್ನು ಮಾಡಿದವರಿಗೂ ಹೆಚ್ಚಿಗೇಕೆ ಎಲ್ಲಾ ಪಾಪಗಳಿಗೂ ಪಶ್ಚಾತ್ತಾಪದಿಂದ ಭಕ್ತಿ ಪೂರ್ವಕವಾಗಿ ಮಾಡುವ ಪರಮಾತ್ಮನ ಸ್ಮರಣೆಯೇ ಪ್ರಾಯಶ್ಚಿತ್ತವೆಂದು ಹೇಳಿರುವರು. ಇದರಲ್ಲಿ ಮುಖ್ಯ ಸಾಧನವು ಭಕ್ತಿ ಮತ್ತು ಪ್ರಾಯಶ್ಚಿತ್ತ; ಇವೆರಡು ಹುಟ್ಟಬೇಕಾದರೆ ಮನಃ ಪೂರ್ವಕ ಪಾಪ ಮಾಡುವ ಪಾಪಿಗಳಿಗೆ ಹುಟ್ಟುವುದೇ ಇಲ್ಲ. ಮಾರ್ಗಸ್ಥರನ್ನು ಹೊಡೆದು ದ್ರವ್ಯವನ್ನಪಹರಿಸುವ

ದಂಗೇ ಕೋರರಿಗೂ ಕುರಿ ಮೇಕೆಗಳನ್ನು ನಿರ್ದಯವಾಗಿ ಕಡಿಯುವ ಕಟುಕರಿಗೂ ಪಶ್ಚಾತ್ತಾಪ ಹುಟ್ಟುವುದುಂಟೆ? ಎಂದಿಗೂ ಇಲ್ಲ. ಆದ್ದರಿಂದ ಆಕಸ್ಮಿಕವಾಗಿ ನಡೆದ ಪಾಪಗಳು ಮಾತ್ರ ಲೇಪಿಸುವುದಿಲ್ಲವೆಂದೇ ಈ ಪದ್ಯಾರ್ಥವು.

ಏನುಮಾಡುವ ಪುಣ್ಯಪಾಪ ಗ
ಳಾನೆ ಮಾಡುವೆನೆಂಬವಧಮನು
ಹೀನಕರ್ಮಕೆ ಪಾತ್ರನಾಪುಣ್ಯಕ್ಕೆ ಹರಿಯಂಬ ॥
ಮಾನವನು ಮಧ್ಯಮನು ದ್ವಂದ್ವಕೆ
ಶ್ರೀನಿವಾಸನೆ ಕರ್ತನೆಂದು ಸ
ದಾನುರಾಗದಿ ನೆನದು ಸುಖಿಸುವನೆ ನರೋತ್ತಮನು ॥ ೮ ॥

ಪದ್ಯಾರ್ಥ:– ಏನು ಮಾಡುವ ಪುಣ್ಯಪಾಪಗಳ=ಮನುಷ್ಯರು ಮಾಡುವ ಎಲ್ಲಾ ಪುಣ್ಯಪಾಪಗಳನ್ನು, ಆನೆ ಮಾಡುವೆನೆಂಬುವ=ನಾನೇ ಮಾಡಿದೆನು ಎಂಬುವನು, ಅಧಮನು, ಹೀನ ಕರ್ಮಕೆ, ಪಾಪ ಕರ್ಮಗಳಿಗೆ, ನಾ=ನಾನು, ಪಾತ್ರ=ಪಾತ್ರನು, ಪುಣ್ಯಕ್ಕೆ ಹರಿಯಂಬ, ಮಾನವನು, ಮಧ್ಯಮನು, ದ್ವಂದ್ವಕೆ=ಪುಣ್ಯಪಾಪ ಕರ್ಮಗಳಿಗೆ, ಶ್ರೀನಿವಾಸನೇ ಕರ್ತನೆಂದು, ಸದಾ, ಅನುರಾಗದಿ=ಭಕ್ತಿಯಿಂದ, ನೆನದು, ಸುಖಿಸುವನೆ ನರೋತ್ತಮನು.

ತಾತ್ಪರ್ಯ:– ತಾನು ಮಾಡಿದ ಪುಣ್ಯ ಪಾಪಗಳನ್ನು ಸ್ವತಂತ್ರದಿಂದ ತಾನೆ ಮಾಡಿದೆನೆಂದು ತಿಳಿದುಕೊಳ್ಳುವವನು ಮನುಷ್ಯರಲ್ಲಿ ಅಧಮನು, ಪಾಪ ಮಾಡುವವನು ನಾನು, ಪುಣ್ಯ ಮಾಡಿಸುವವನು ಪರಮಾತ್ಮನೆಂಬುವನು ಮಧ್ಯಮನು, ಏಕೆಂದರೆ ಸ್ವತಂತ್ರ ಕರ್ತೃತ್ವವು ಜೀವರಿಗೆ ಇಲ್ಲದೆ ಮೇಲೆ ಪಾಪಗಳನ್ನು ಮಾತ್ರ ಮಾಡುವುದೆಂತು? ಆದ್ದರಿಂದ ಪುಣ್ಯಮಾಡಲಿ ಪಾಪ ಮಾಡಲಿ! ಸಕಲಕ್ಕೂ ಕರ್ತನು ಪರಮಾತ್ಮನೆ ಎಂದು ಎಲ್ಲವನ್ನು ಪರಮಾತ್ಮನಿಗೆ ಒಪ್ಪಿಸಿ ಪರಮಾತ್ಮನನ್ನು ಸ್ಮರಿಸುತ್ತ ಸುಖಪಡುವವನೇ ಮನುಷ್ಯೋತ್ತಮನು.

ಮೇಲಿನ ಪದ್ಯದಲ್ಲಿ ಹೇಳಿದಂತೆ ಸರ್ವಕರ್ತ ಪರಮಾತ್ಮನೆಂದು ಉಪಾಸನೆ ಮಾಡುವವರನ್ನು ಭೂಮಿಯಲ್ಲಿ ಪೂಜಿಸಿದರೆ ಪರಮಾತ್ಮನು ಸುಪ್ರೀತನಾಗುವನೆಂದು ಹೇಳುತ್ತಾರೆ:–

ಈ ಉಪಾಸನೆಗೈವರಿಳೆಯೊಳು
ದೇವತೆಗಳಲ್ಲದಲೆ ನರರ
ಲ್ಲಾವ ಬಗೆಯಿಂದಾದರಿವರರ್ಚನೆಯು ಹರಿಪೂಜೆ ॥
ಕೇವಲ ಪ್ರತಿಮೆಗಳೆನಿಪರು ರ
ಮಾವಿನೋದಿಗೆ ಇವರನುಗ್ರಹವೇ
ದೇವರನುಗ್ರಹವೆನಿಸುವುದು ಮುಕ್ತಿಯೋಗ್ಯರಿಗೆ ॥ ೯ ॥

ಪದ್ಯಾರ್ಥ:– ಈ ಉಪಾಸನೆಗೈವರು ಮೇಲಿನ ಪದ್ಯದಲ್ಲಿ ಹೇಳಿದಂತೆ ಉಪಾಸನೆಯನ್ನು ಮಾಡುವವರು, ಇಳೆಯೊಳು=ಭೂಮಿಯಲ್ಲಿ, ದೇವತೆಗಳಲ್ಲದಲೆ=ದೇವತೆಗಳಿಗೆ ಸಮರಲ್ಲದೆ, ನರರಲ್ಲ=ಸಾಮಾನ್ಯ ಮನುಷ್ಯರಲ್ಲ, ಆವಬಗೆಯಿಂದಾದರೂ=ಯಾವ ಬಗೆಯಿಂದಲಾದರೂ, ಇವರರ್ಚನೆಯು=ಈ ಭಕ್ತರನ್ನು ಪೂಜಿಸುವುದು, ಹರಿಪೂಜೆ, ರಮಾವಿನೋದಿಗೆ=ಲಕ್ಷ್ಮೀ ರಮಣನಿಗೆ, ಇವರು ಕೇವಲ ಪ್ರತಿಮೆಗಳೆನಿಪರು=ಕೇವಲ ಚಲಪ್ರತಿಮೆಯೆನಿಸುವರು. ಮುಕ್ತಿ ಯೋಗ್ಯರಿಗೆ, ಇವರನುಗ್ರಹವೆ, ದೇವರ ಅನುಗ್ರಹವೆನಿಸುವುದು.

ತಾತ್ಪರ್ಯ:– ಸರ್ವಕರ್ತ ಪರಮಾತ್ಮನೆಂದು ಉಪಾಸನೆ ಮಾಡುವವರನ್ನು ಈ ಭೂಮಿಯಲ್ಲಿ ದೇವತೆಗಳೆಂದು ತಿಳಿದು ಸರ್ವ ಪ್ರಕಾರದಿಂದಲೂ ಅವರ ಪೂಜೆಯನ್ನು ಮಾಡಿದರೆ ಸಾಕ್ಷಾತ್ತಾಗಿ ಪರಮಾತ್ಮನ ಪೂಜೆಮಾಡಿದಂತೆ ಆಗುವುದು. ಇವರನ್ನು ಕೇವಲ ಪರಮಾತ್ಮನ ಚಲಪ್ರತಿಮೆಗಳೆಂದು ಭಾವಿಸಬೇಕು, ಮುಕ್ತಿಯೋಗ್ಯರು ಇವರ ಅನುಗ್ರಹವನ್ನು ಪಡೆದು ಅದೇ ಪರಮಾತ್ಮನ ಅನುಗ್ರಹವೆಂದು ಭಾವಿಸಬೇಕು.

ಅವತಾರಿಕೆ:– ಮೇಲೆ ಹೇಳಿದಂತೆ ಸತ್ಪಾತ್ರದಲ್ಲಿ ಪೂಜೆಯನ್ನು ಬಿಟ್ಟು ಸಜ್ಜನರನ್ನು ಸಾಮಾನ್ಯ ಮನುಷ್ಯರೆಂತಲೂ ಪ್ರತಿಮೆಗಳೇ ದೇವರು, ಗಂಗಾದಿಗಳೇ ತೀರ್ಥಗಳೆಂದು ಭಾವಿಸುವವರನ್ನು ಕತ್ತೆಯೆಂದೇ ತಿಳಿಯಬೇಕೆಂದು ಹೇಳುತ್ತಾರೆ.

ತನುವೆ ನಾನೆಂಬುವವ ಸತಿಸುತ
ಮನೆ ಧನಾದಿಗಳೆನ್ನದೆಂಬುವ
ದ್ಯುನದಿ ಮೊದಲಾದವುಗಳೆ ಸತ್ತೀರ್ಥ ಎಂಬುವನು ॥
ಅನಲಲೋಹಾದಿ ಪ್ರತೀಕಾ
ರ್ಚನವೇ ದೇವರ ಪೂಜೆಸುಜನರೇ
ಮನುಜರಹುದೆಂಬುವನು ಗೋಖರನೆನಿಪ ಬುಧರಿಂದ ॥ ೧೦ ॥

ಪದ್ಯಾರ್ಥ:– ತನುವೆ ನಾನೆಂಬುವ=ದೇಹವೆ ನಾನು(ಜೀವನು) ಅನ್ನುವವನೂ, ಸತಿ=ಹೆಂಡತಿ, ಸುತ= ಮಕ್ಕಳು, ಮನೆ, ಧನಾದಿಗಳು, ಎನ್ನದೆಂಬುವ=ನನ್ನದು ಅನ್ನುವವನೂ, ದ್ಯುನದಿ ಮೊದಲಾದ=ಗಂಗೆ ಮೊದಲಾದ, ಉದಕಗಳೇ, ಸತ್ತೀರ್ಥವೆಂಬುವನು, ಅನಲ=ಅಗ್ನಿ, ಲೋಹಾದಿ=ಬಂಗಾರ, ಬೆಳ್ಳಿ ಮೊದಲಾದವುಗಳಿಂದ ಮಾಡಲ್ಪಟ್ಟ, ಪ್ರತೀಕಾರ್ಚನವೆ=ಪ್ರತಿಮೆಗಳ ಪೂಜೆಯೇ, ದೇವರ ಪೂಜೆಯನ್ನುವವನು, ಸುಜನರೇ=ಭಗವದ್ಭಕ್ತರಾದ ಸಜ್ಜನರು ಭಗವಂತನ ಪ್ರತಿಮಾಸ್ಥಾನೀಯರೆಂದರಿಯದೇ ಸಾಮಾನ್ಯವಾದ, ಮನುಜರಹುದೆಂಬುವನು= ಸಾಮಾನ್ಯವಾದ ಮನುಷ್ಯರೆಂದು ಭಾವಿಸುವವನೂ, ಬುಧರಿಂದ=ಜ್ಞಾನಿಗಳಿಂದ, ಗೋಖರನೆನಿಪ=ಭೂಮಿಯಲ್ಲಿ ಕತ್ತೆಯೆಂದೆನಿಸಿಕೊಳ್ಳುವನು.

ತಾತ್ಪರ್ಯ:– ದೇಹವು ಅನಿತ್ಯವಾದುದು, ಜಡವು, ಜೀವನು ನಿತ್ಯನು ಚೇತನನು. ಹುಟ್ಟುವುದು, ಬೆಳೆಯುವುದು, ವಿಕಾರ ಹೊಂದುವುದು, ಸಾಯುವುದು, ಸ್ಥೂಲವಾಗಿರುವುದು, ಕೃಶವಾಗಿರುವುದು ಇವೇ ಮೊದಲಾದ ವಿಕಾರಗಳೆಲ್ಲವೂ 'ದೇಹಸ್ಯೈವ ನಚಾತ್ಮನಃ' ಎಂದು ಹೇಳುವುದೆಲ್ಲಾ ದೇಹಕ್ಕೆ ಶೇರಿದುದೇ ಹೊರತು ಜೀವನಿಗಲ್ಲ. ದೇಹವನ್ನೇ ತಾನು ಎಂಬ ಅಭಿಮಾನವನ್ನಿಟ್ಟುಕೊಂಡು ಇರುವುದರಿಂದಲೂ ಅಂತಹ ದೇಹ ಸಂಬಂಧ ಜೀವನಿಗೆ ಇರುವುದರಿಂದಲೂ ದೇಹದ ಛೇದ ಭೇದಾದಿಗಳಿಂದಲೂ ಜನನ ಮರಣಾದಿಗಳಿಂದಲೂ, ಉಂಟಾಗುವ ದುಃಖಾದಿಗಳು ಮಾತ್ರ ಸಂಬಂಧ ಆಗುವವು. ಜೀವನು ಹುಟ್ಟುವವನೂ ಅಲ್ಲ, ಬೆಳೆಯುವವನೂ ಅಲ್ಲ, ಸಾಯುವವನೂ ಅಲ್ಲ. ಜಡವಾದ ದೇಹ ಸಂಬಂಧದಿಂದಾಗುವ ಸುಖದುಃಖಗಳಿಗೆ ಮಾತ್ರವೇ ಬಾಧ್ಯನಾಗಿರುವವನು. ಘಟವು ಚೆನ್ನಾಗಿರುವವರೆಗೂ ಅದರೊಳಗೆ ಆಕಾಶವು ತದಾಕಾರವಾಗಿ ಅಲ್ಲಿ ಕಾಣುವುದು. 'ಘಟೇಭಿನ್ನೇ ಯಥಾಕಾಶ ಆಕಾಶ ಸ್ಯಾದ್ಯಥಾಪುರಾ' ಎಂಬ ಭಾಗವತ ದ್ವಾದಶ ಸ್ಕಂಧದ ವಾಕ್ಯದಂತೆ ಘಟಭಿನ್ನವಾದರೆ ಆಕಾಶವು ಪೂರ್ವದಂತೆ ಆಕಾಶವಾಗಿಯೆ ಇರುವುದು. ಅಂದರೆ ಘಟನಾಶವಾಗುವುದೇ ಹೊರತು ಆಕಾ–ಶವು ನಾಶಹೊಂದುವುದಿಲ್ಲ. ಹಾಗೆಯೇ ದೇಹವು ನಷ್ಟವಾದರೂ ಜೀವನು ಇದ್ದೇ ಇರುವನು. ಹೀಗಿರಲು ಜೀವನಿಗೂ ದೇಹಕ್ಕೂ ಇರುವ ಭೇದವನ್ನರಿಯದೆ ತಾನೇ ದೇಹ ಅಂದರೆ ದೇಹವೇ ಆತ್ಮ (ಜೀವ) ಅನ್ನುವುದು ಭ್ರಾಂತಿಯೇ ಹೊರತು ಮತ್ತೇನೂ ಅಲ್ಲ. ಭಾಗವತ ಏಕಾದಶ ಸ್ಕಂಧ ೨೨ ನೆಯ ಅಧ್ಯಾಯ ಶ್ಲೋಕ ೪೫ 'ಆದ್ಯಃ ಸ್ವಕರ್ಮ ಬೀಜೇನ ಜಾಯತೇ ಸೋವ್ಯಯಃ ಪುಮಾನ್॥ ಮ್ರಿಯತೇ ಚಾಮರೋಭ್ರಾಂತ್ಯಾ ಯಥಾಗ್ನಿರ್ದಾರು ಸಂಯುತಃ' ವಿಜಯಧ್ವಜೀಯ ವ್ಯಾಖ್ಯಾನ 'ನನುದೇಹಸ್ಸೈವ ವಿಕಾರಶ್ಚೇದಹಂ ಜಾತೋಹಂ ಮೃತ ಇತಿ ಪ್ರತೀತಿಃ ಕಥಮತ್ರಾಹ'॥ ವಿಕಾರಗಳು ದೇಹಕ್ಕೇ ಹೊರತು ಜೀವನಿಗಲ್ಲ ಎಂದಮೇಲೆ ನಾನು ಹುಟ್ಟಿದೆನು, ನಾನು ಮೃತನಾಗುವೆನು ಎಂಬ ಪ್ರತೀತಿಯು ಹೇಗೆ ಎಂದರೆ ಹೇಳುತ್ತಾರೆ. ಆದ್ಯ–ಎಂದು–ಆದ್ಯಃ ಉತ್ಪತ್ತಿರಹಿತಃ=ಜೀವನು ಆದ್ಯನು (ಮೊದಲಿಂದಲೂ ಇರುವವನು) ಉತ್ಪತ್ತಿ ಇಲ್ಲದವನು. ಅಮರಃ 'ಮರಣರಹಿತಃ ಆದ್ಯಂತ ಶೂನ್ಯ ಇತ್ಯರ್ಥಃ' ಮರಣರಹಿತನು, ಮೊದಲು ಕೊನೆ ಇಲ್ಲದವನೆಂದರ್ಥ. ಅವ್ಯಯಃ ಶರೀರ ಬರುವುದರಿಂದಲೂ ಹೋಗುವುದರಿಂದಲೂ ಸಹ ವೃದ್ಧಿಕ್ಷಯಾದಿಗಳು ಇಲ್ಲದೆ ಇರುವವನು ಜೀವನು. ತಾನು ಮಾಡಿದ ಕರ್ಮಬೀಜದಿಂದ ಹುಟ್ಟಿದನು ಸತ್ತನು ಎಂಬ ವ್ಯಾವಹಾರವು ಭ್ರಾಂತಿಯಿಂದ, ಅಂದರೆ ವಿವೇಕ ಜ್ಞಾನವಿಲ್ಲದೆ ಬಂದಿರುವುದು. ಹೇಗೆ ಅಗ್ನಿಗೆ ಉತ್ಪತ್ತಿ ನಾಶವಿಲ್ಲದಿದ್ದರೂ ಕಾಷ್ಟವನ್ನು ಮಥನ ಮಾಡಲು ಅಗ್ನಿ ಹುಟ್ಟಿತೆಂತಲೂ, ಕಟ್ಟಿಗೆಯು ಇಲ್ಲದಿದ್ದರೆ ಅಗ್ನಿ ನಾಶವಾಯಿತೆಂತಲೂ ಹೇಳುವರೋ ಹಾಗೆ ಜನನ ಮರಣ ಶೂನ್ಯನಾದ ಜೀವನಿಗೆ ಅವಿವೇಕದಿಂದ ಜನನ ಮರಣಗಳನ್ನು ಕಲ್ಪಿಸುವರು.

'ಸಚಾಯ ಮಿತಿತುಜ್ಞಾನಂ ನಮೃಷಾಯಂ ಸಏವತು॥ ಇತಿಜ್ಞಾನಂ ಮೃಷೈವಸ್ಯಾತ್ ಭೇದಾ ಭೇದೌ ಯತಸ್ತನೋಃ॥ ಅಭೇದ ಏವ ಜೀವಸ್ಯ ನಿತ್ಯಂಪ್ರತ್ಯೇಕಶಃ ಪೃಥಕ್॥ ದೇಹದೀಪ ನದೀವಾರಿ ಫಲಾದೀನಾಂ ಪೃಥಕ್ಕ್ಷತಃ॥ ಭೇದಾಭೇದೌ ಪರಿಜ್ಞೇಯೌ ಕಾರ್ಯ

ಕಾರಣಯೋಪಿ॥ ಗುಣಸ್ಯ ಗುಣನಶ್ಚೈವ ಜಾತಿವ್ಯಕ್ತ್ಯೋಸ್ತಥೈವಚ' ಕಾಲ ಸಂಬಂಧದಿಂದ ಬಾಲ್ಯ ಕೌಮಾರ ಯೌವ್ವನಾದಿಗಳಿಂದ ಶರೀರಕ್ಕೆ ವಿಕಾರ ಬಂದರೂ ಶಿಶುವಾಗಿ ಹುಟ್ಟುವಾಗ ಯಾವ ಶರೀರವಿದ್ದಿತೋ ಅದೇ ಶರೀರವು ಇದು ಎಂದು ಹೇಳುವುದು ಸುಳ್ಳಲ್ಲ. ಸತ್ಯವೇ ಸರಿ. ಮಗುವಾಗಿದ್ದ ಶರೀರವೇ ಬೆಳೆಯುತ್ತಾ ಬಂದು ವಿಕಾರ ಹೊಂದಿದುದರಿಂದ ಆ ಶರೀರದಲ್ಲಿ ಅಭೇದವನ್ನು ಹೇಳುವುದು ನ್ಯಾಯವು. 'ಅಯಮೇವಸಃ' ಆ ದೇಹವೇ ಇವನು ಅಂದರೆ ಈ ಜೀವನು ಎಂದು ಹೇಳುವುದು ಸುಳ್ಳು.

ಜೀವನಿಗೂ ದೇಹಕ್ಕೂ ಭೇದವಿರುವುದರಿಂದ ಅಲ್ಲಿ ಅಭೇದವನ್ನೂ ಹೇಳಲು ಆಗುವುದಿಲ್ಲ. ಮೊದಲು ಮನುಷ್ಯ ದೇಹದಲ್ಲಿ ಹುಟ್ಟಿದ್ದ ಜೀವನೇ ಆ ಜನ್ಮವನ್ನು ಬಿಟ್ಟು ನಾಯಿಯಾಗಿ ಹುಟ್ಟಿರಬಹುದು. ದೇಹವು ಮಾತ್ರ ಬಾಲ್ಯ ಯೌವನಾದಿ ಅವಸ್ಥೆಗಳಲ್ಲಿ ವಿಕಾರ ಹೊಂದಿದರೂ ಶರೀರವು ಬೇರೆ ಆಗಲಿಲ್ಲ. ಆ ಶರೀರವನ್ನು ಬಿಟ್ಟು ಜೀವನಿಗೆ ಬೇರೆ ಶರೀರ ಬಂದರೆ ದೇಹಗಳಲ್ಲಿ ಒಂದೊಂದಕ್ಕೆ ಭೇದ ಉಂಟು. ಜೀವನು ಅವನೆ. ಈ ವಿಷಯದಲ್ಲಿ ಕೆಲವು ದೃಷ್ಟಾಂತವನ್ನು ಹೇಳುತ್ತಾರೆ.

ಹೀಗೆ ಭೇದಾಭೇದಗಳಿಂದ ಕೂಡಿರುವುದು ದೇಹ ಒಂದೇ ಅಲ್ಲ. ದೇಹದೀಪ, ನದೀ ಉದಕ, ಫಲಾದಿಗಳು ಇವೆಲ್ಲವೂ ಭೇದಾಭೇದಗಳಿಂದ ಕೂಡಿರುವವು. ಒಬ್ಬ ಮನುಷ್ಯನೋ ಮೃಗವೋ ಯಾವ ದೇಹವನ್ನು ನೋಡಿದರೂ ಇವನು ಮನುಷ್ಯನು ಇದು ಮೃಗವು ಎಂದು ಹೇಳುವರು. ಆದರೆ ಆ ಮನುಷ್ಯನೇ ಇವನಲ್ಲ. ಇವನು ಬೇರೆ, ಅವನು ಬೇರೆ ಎಂದು ರೂಪಾದಿಗಳಿಂದಲೂ ಗುಣಗಳಿಂದಲೂ, ಭೇದಗಳನ್ನು ಕಾಣುವರು. ಇವನೂ ಮನುಷ್ಯ ಅವನೂ ಮನುಷ್ಯನೆಂಬುವ ವಿಷಯದಲ್ಲಿ ಭೇದವಿಲ್ಲ. ಆದರೂ ರೂಪ ಗುಣಾದಿಗಳಿಂದ ದೇಹ ದೇಹಕ್ಕೂ ಪರಸ್ಪರ ಭೇಧವುಂಟು. ಇದರಂತೆ ದೀಪದಲ್ಲಿ ಇದೂ ದೀಪ, ಅದೂ ದೀಪವೆ, ಆದರೆ ಇಷ್ಟು ಹೊತ್ತು ಉರಿಯುತ್ತಿದ್ದ ದೀಪವು ಇದಲ್ಲ. ಇದೆ ಬೇರೆ ಎಂದು ಹೇಳುವರು. ಗಂಗಾ ಮೊದಲಾದ ನದಿಯ ನೀರು ಹೊಸ ಪ್ರವಾಹ ಬಂದಾಗ ಗಂಗಾಜಲವೆಂಬ ಹೆಸರಿದ್ದರೂ, ಇಷ್ಟು ದಿವಸದ ನೀರು ಇದಲ್ಲ. ಇದು ಹೊಸ ನೀರು ಎನ್ನುವರು. ಹಣ್ಣುಗಳಲ್ಲಿ ಇದೂ ಮಾವಿನ ಹಣ್ಣೆ. ಆದರೆ ನಾನು ತಿಂದ ಹಣ್ಣು ಇದಲ್ಲ. ಹೀಗೆ ಇವುಗಳಿಗೆ ಭೇದಾಭೇದ ವ್ಯವಹಾರಜ್ಞಾನವು ಏರ್ಪಡುವುದು. ಇದರಂತೆ ಈ ಕಾರ್ಯಕಾರಣ ವಸ್ತುಗಳಿಗೂ, ಗುಣಗುಣಿಗಳಿಗೂ ಭೇದಾಭೇದಗಳನ್ನು ಒಪ್ಪಿಕೊಳ್ಳಲೇ ಬೇಕು.

ಈ ಘಟವು ಮಣ್ಣಿನಿಂದಲೆ ಮಾಡಲ್ಪಟ್ಟು ಮಣ್ಣೇ ಘಟವಾಗಿದ್ದರೂ ಇದು ಮಣ್ಣಲ್ಲ. ಇದು ಘಟವು ಎನ್ನುವರು. ಇದರಂತೆ ತಂದೆಯಿಂದಲೇ ಮಗನು ಹುಟ್ಟಿದರೂ ಅವನೇ ಇವನಲ್ಲ. ಎಂದು ಸಿದ್ಧವಾಗುವುದು. ಗುಣವೆಂದರೇನು? ಗುಣಿಯೆಂದರೇನು? ಜನನ ಮರಣಾದಿಗಳೇ ಗುಣಗಳು. ಅವುಗಳಿಂದ ಯುಕ್ತವಾದುದು ಗುಣಿ, ಅಂದರೆ ದೇಹವು. ಅಂದರೆ ಜನನಮರಣಾದಿಗಳೇ ದೇಹವಲ್ಲ. ಜನನ ಮರಣಾದಿಗಳಿಂದ ಕೂಡಿದುದು ದೇಹವೆಂದರ್ಥ. ಇವುಗಳಿಗೆ ಪರಸ್ಪರ ಭೇಧಗಳುಂಟು. ಆದ್ದರಿಂದ ಜೀವನೇ ದೇಹವೆಂದು ಹೇಳಲು ಆಗುವುದಿಲ್ಲ. ಭಾಗವತ ಮೂಲ ಶ್ಲೋಕ ೪೬ 'ನಿಷೇಕ ಗರ್ಭ ಜನ್ಮಾನಿ ಬಾಲ್ಯ ಕೌಮಾರ ಯೌವನಂ॥ ವಯೋಮಧ್ಯಂ ಜರಾಮೃತ್ಯುರಿತ್ಯವಸ್ಥಾತನೋರ್ನವ' ಸ್ತ್ರೀ ಉದರ ಪ್ರವೇಶ, ಗರ್ಭದಲ್ಲಿ ವೃದ್ಧಿ ಹೊಂದುವಿಕೆ ಹುಟ್ಟುವಿಕೆ, ಮಗುವಾಗಿರುವಿಕೆ, ಬಾಲ್ಯ, ಯೌವನ, ಮಧ್ಯವಯಸ್ಸು, ಮುದುಕನಾಗುವಿಕೆ, ಸಾಯುವಿಕೆ ಎಂಬ ಒಂಬತ್ತು ಅವಸ್ಥೆಗಳು ಶರೀರಕ್ಕೇ ಹೊರತು ಜೀವನಿಗಲ್ಲ. ಇತ್ಯಾದಿ ಪ್ರಮಾಣ ಬಲದಿಂದ ಜೀವನಿಗೂ ದೇಹಕ್ಕೂ ಭೇದವಿದ್ದರೂ ಜೀವನೇ ದೇಹವೆಂದು ತಿಳಿದವನು ಕತ್ತೆಯೇ ಸರಿ. ಮತ್ತು ಹೆಂಡತಿ ಮಕ್ಕಳು ನನ್ನವರು ಎಂಬುವರನ್ನು ಕತ್ತೆಯೆಂದೇ ಹೇಳಬೇಕು. ಹೇಗೆಂದರೆ:– ಜೀವನಿಗೆ ಹೆಂಡತಿಯಾಗಲಿ ಮಕ್ಕಳಾಗಲಿ ತಂದೆ ತಾಯಿ ಮೊದಲಾದ ಯಾವ ಸಂಬಂಧವೂ ಇಲ್ಲ. ದೇಹ ಸಂಬಂಧದಿಂದ ತಾಯಿ ತಂದೆ ಗಂಡ ಹೆಂಡತಿ ಮಕ್ಕಳು ಮೊದಲಾದವು ಪ್ರತಿ ದೇಹದಲ್ಲಿಯೂ ಬರುತ್ತಿರುವರು. ಒಂದು ದೇಹವನ್ನು ಬಿಟ್ಟಕೂಡಲೆ ಆ ಸಂಬಂಧವೆಲ್ಲ ಅಲ್ಲೇ ತಪ್ಪಿ ಹೋಗುವದು. ಮತ್ತೊಂದು ಜನ್ಮವನ್ನು (ದೇಹಾಂತರವನ್ನು) ಹೊಂದಿದರೆ ಅಲ್ಲಿ ಬೇರೆ ತಂದೆ ತಾಯಿ ಹೆಂಡರು ಮಕ್ಕಳಾಗುವರು.

ದೇಹವು ಹೇಗೆ ಸ್ಥಿರವಲ್ಲವೋ ಹಾಗೆ ಹೆಂಡರು ಮಕ್ಕಳು ಸ್ಥಿರವಲ್ಲ. ಜೀವಕ್ಕೆ ಜೀವ ಸಂಬಂಧವಿಲ್ಲ. ದೇಹವೋ, ಇವರದೂ ಸ್ಥಿರವಲ್ಲ, ಅವರದೂ ಸ್ಥಿರವಲ್ಲ. ಇಂತಹ ಹೆಂಡತಿ ಮಕ್ಕಳು, ಮನೆ, ಧನಾದಿಗಳಲ್ಲಿ, ನನ್ನ ಹೆಂಡತಿ ನನ್ನ ಮಕ್ಕಳು ಎಂದು ಬರೇ ಅಭಿಮಾನ ಮಾಡುವರು. ದೇಹವನ್ನು ಬಿಟ್ಟು ಜೀವನು ಆಕಾಶದಂತೆ ನಿಲ್ಲುವಾಗ, 'ಕ್ವತದೀಯರತಿರ್ಭಾರ್ಯಾ ಕ್ವೇದಂತುಚ್ಛಂ ಕಳೇವರಂ' ಇವನ ಸುಖ ಎಲ್ಲಿ? ಇವನ ಹೆಂಡತಿ ಎಲ್ಲಿ, ತುಚ್ಛವಾದ ದೇಹವಾದರೂ ಎಲ್ಲಿ? ಯಾವದೂ ತನಗೆ ಅನುಕೂಲಿಸುವಂತಿಲ್ಲ. ಆದ್ದರಿಂದ ದೇಹ ಸಂಬಂಧವಾದ ವಸ್ತುಗಳನ್ನು ತನ್ನವು ಎಂಬುವದೊಂದು ಭ್ರಾಂತಿಯೆ ಹೊರತು ಬೇರಿಲ್ಲ, ಮತ್ತು ಗಂಗಾದಿ ನದಿಗಳೇ ತೀರ್ಥಗಳೆಂದು ಅವುಗಳ ಮಹಾತ್ಮ್ಯ ಜ್ಞಾನವಿಲ್ಲದೆ, ಭಗವತ್ಸನ್ನಿಧಾನದಿಂದಲೇ ಗಂಗಾನದಿಗಳಿಗೆ ಮಹಿಮೆ ಎಂಬ ಜ್ಞಾನವಿಲ್ಲದೇ ಅವುಗಳಲ್ಲಿ ಮುಳಗಿದರೂ ಫಲವಿಲ್ಲ.

'ಯದಿಚ್ಛಸಿ ಮಹಾರಾಜ ಸರ್ವತೀರ್ಥಾವಗಾಹನಂ॥ ವಿಪ್ರಪಾದ ವಿನಿರ್ಮುಕ್ತಂ ತೋಯಂ ಶಿರಸಿಧಾರಯ' ಮೋಕ್ಷಧರ್ಮದ ವಾಕ್ಯದಂತೆ, ಎಲೈ ಧರ್ಮರಾಜನೇ! ನಿನಗೆ ಸರ್ವತೀರ್ಥಗಳಲ್ಲಿಯೂ ಸ್ನಾನ ಮಾಡಬೇಕೆಂಬ ಅಪೇಕ್ಷೆ ಇದ್ದರೆ ಬ್ರಾಹ್ಮಣರ ಪಾದ ಪ್ರಕ್ಷಾಳನೆ ಮಾಡಿ ಆ ಉದಕವನ್ನು ತಲೆಯಮೇಲೆ ಪ್ರೋಕ್ಷಿಸಿಕೊ, ಎಂದು ಭೀಷ್ಮಾಚಾರ್ಯರು ಹೇಳಿರುವರು. ಅದರಂತೆ ಸರ್ವತ್ರ ಪರಮಾತ್ಮನನ್ನು ಚಿಂತಿಸಿ ಸರ್ವಕರ್ತ ಪರಮಾತ್ಮನೆಂದು ತಿಳಿದು ಸ್ವಕರ್ತೃತ್ವವನ್ನು ಲೇಶಮಾತ್ರವೂ ಇಟ್ಟುಕೊಳ್ಳದೆ ಇರುವ ಮಹನೀಯರ ಪಾದೋದಕಕ್ಕಿಂತಲೂ ಗಂಗಾದಿ ಜಲಗಳು ಶುದ್ಧಿಮಾಡುವುವೇ? ಇಲ್ಲ. ಇಂತಹ ಉತ್ತಮರನ್ನು ಸಾಮಾನ್ಯ ಮನುಷ್ಯರೆಂದು ಭಾವಿಸಿ ತಿರಸ್ಕರಿಸಿ ಬೆಳ್ಳಿ ಬಂಗಾರದ ಪ್ರತಿಮೆಗಳನ್ನು ಇಟ್ಟುಕೊಂಡು ಆಡಂಬರ ಪೂಜೆಗಳನ್ನು ಮಾಡಿದರೆ ಪರಮಾತ್ಮನು ಮೆಚ್ಚುವನೇ? ಭಾಗವತ ತೃತೀಯ ಸ್ಕಂಧ ೩೦ ನೇ ಅಧ್ಯಾಯದಲ್ಲಿ ೨೨–೨೩ನೇ ಶ್ಲೋಕಗಳು:– 'ಯೋಮಾಂ ಸರ್ವೇಷು ಭೂತೇಷು ಸಂತಮಾತ್ಮಾನಮೀಶ್ವರಂ॥ ಹಿತ್ವಾರ್ಚಾಂ ಭಜತೇ ಮೌಢ್ಯಾದ್ಭಸ್ಮನ್ಯೇವ ಜುಹೋತಿಸಃ॥ ದ್ವಿಷತಃ ಪರಕಾಯೇಮಾಂ ಮಾನಿನೋ ಭಿನ್ನದರ್ಶನಃ॥ ಭೂತೇಷು ಬದ್ಧವೈರಸ್ಯನ ಮನಃಶಾಂತಿ ಮೃಚ್ಛತಿ' ಯಾವ ಮನುಷ್ಯನು ಸರ್ವ ಪ್ರಾಣಿಗಳಲ್ಲಿಯೂ ವಾಸಮಾಡುತ್ತಿರುವ ಈಶ್ವರನಾದ ನನ್ನನ್ನು ಬಿಟ್ಟು ಮೂಢತನದಿಂದ ಪ್ರತಿಮೆಯಲ್ಲೇ ಪರಮಾತ್ಮನಿರುವನೆಂದು ಭಾವಿಸಿ ಪ್ರತಿಮೆಗಳನ್ನು ಪೂಜಿಸುವನೋ ಅವನು ಬೂದಿಯಲ್ಲಿ ಹೋಮ ಮಾಡಿದವನೆಂದು ತಿಳಿಯಬೇಕು.' ಬೂದಿಯಲ್ಲಿ ಹೋಮ ಮಾಡಿದರೆ ಮಂತ್ರೋಚ್ಚಾರಣದಿಂದಲಾದರೂ ಯತ್ಕಿಂಚಿತ್ಫಲವೇನೋ ಬರುವುದು. ಸಂಪೂರ್ಣ ಫಲವು ಬಾರದು. ಅದರಂತೆ ಪ್ರತಿಮೆಯಲ್ಲಿ ಮಾತ್ರ ಪರಮಾತ್ಮನನ್ನು ಪೂಜೆ ಮಾಡುವವರಿಗೆ ಸಂಪೂರ್ಣ ಫಲವು ಬಾರದು. 'ಭಗವದ್ಭಕ್ತರಲ್ಲಿ ವಿಶೇಷ ಸನ್ನಿಧಾನದಿಂದ ಇರುವ ನನ್ನನ್ನು ತಿಳಿಯದೇ, ಪ್ರತಿಮೆಗಳಲ್ಲಿಯೂ ಭಕ್ತರಲ್ಲೂ ಇರತಕ್ಕ ನನ್ನ ರೂಪದಲ್ಲಿ ಪರಸ್ಪರ ಭೇದವನ್ನು ಚಿಂತಿಸಿ ವಿಷ್ಣು ಭಕ್ತರಲ್ಲಿ ದ್ವೇಷವನ್ನು ಬೆಳಿಸುತ್ತಾ ನನ್ನನ್ನು ಪ್ರತಿಮಾದಿಗಳಲ್ಲಿ ಮಾತ್ರ ಪೂಜಿಸಿದರೆ ಅಂತಹವನ ಮನಸ್ಸು ಎಂದಿಗೂ ನನ್ನಲ್ಲಿ ಸ್ಥಿರವಾಗಿ ನಿಲ್ಲಲಾರದು, ಅಂದರೆ ಅವನು ನನಗೆ ಪ್ರಿಯನಾಗುವದಿಲ್ಲವೆಂಬ ಭಾವ.' ಮೇಲಿನ ಶ್ಲೋಕದಲ್ಲಿರುವ 'ಭೂತೇಷು' ಎಂಬ ಪದಕ್ಕೆ 'ವೈಷ್ಣವೇಷು' ಎಂತಲೂ 'ಶಾಂತಿ' ಎಂಬ ಪದಕ್ಕೆ 'ಮನ್ನಿಷ್ಟತಾ' ಎಂತಲೂ ಅರ್ಥ ಮಾಡಿರುವರು. ಈ ವ್ಯಾಖ್ಯಾನವನ್ನನುಸರಿಸಿಯೇ ಅರ್ಥವನ್ನು ಬರೆದಿದೆ. ಆದ್ದರಿಂದ ದಾಸರಾಯರು ಅಗ್ನಿ, ಪಂಚಲೋಹದ ಪ್ರತಿಮೆಗಳನ್ನೇ ದೇವರೆಂಬುವನು, ಭಗವದ್ಭಕ್ತರನ್ನು ಸಾಮಾನ್ಯ ಮನುಷ್ಯರೆಂದು ಭಾವಿಸುವವನು ಭೂಮಿಯಲ್ಲಿ ಕತ್ತೆ ಎನಿಸುವನು ಎಂದು ಹೇಳಿರುವರು.'

ಪರಮಾತ್ಮನಲ್ಲಿ ಭಕ್ತಿ ಇಲ್ಲದವರು ತತ್ವಾಭಿಮಾನಿ ದೇವತೆಗಳನ್ನು, ಸಾಧು ಜನರನ್ನು ಪೂಜಿಸಿದರೂ ಅವರು ಈ ಭಕ್ತರನ್ನು ಪವಿತ್ರರನ್ನಾಗಿ ಮಾಡುವುದಿಲ್ಲವೆಂದು ಹೇಳುತ್ತಾರೆ:–

ಅನಲ ಸೋಮಾರ್ಕೇಂದುತಾರಾ
ವನಿಸುರಾಪಗ ಮುಖ್ಯ ತೀರ್ಥಗ
ಳನಿಲ ಗಗನಮನಾದಿ ಇಂದ್ರಿಯಗಳಿಗೆ ಅಭಿಮಾನಿ ॥
ಎನಿಪಸುರರು ವಿಪಶ್ಚಿತರು ಸ
ನ್ಮನದಿ ಭಜಿಸದಲಿಪ್ಪವರ ಪಾ
ವನವ ಮಾಡರು ತಮ್ಮ ಪೂಜೆಯ ಮಾಡಿದರು ಸರಿಯೆ ॥ ೧೧ ॥

ಪದ್ಯಾರ್ಥ:– ಅನಲ=ಅಗ್ನಿ, ಸೋಮ=ಉಮಾಸಮೇತರಾದ ರುದ್ರದೇವರು, ಅರ್ಕ=ಸೂರ್ಯ, ಇಂದು=ಚಂದ್ರ, ತಾರಾ=ನಕ್ಷತ್ರಗಳು, ಅವನಿ=ಭೂಮಿ, ಸುರಾಪಗಾ= ಗಂಗಾ, ಮುಖ=ಮೊದಲಾದ ತೀರ್ಥಗಳು, ಅನಿಲ=ವಾಯು, ಗಗನ=ಆಕಾಶ, ಮನಾದಿ=ಮನಸ್ಸು ಮೊದಲಾದ ಇಂದ್ರಿಯಗಳಿಗೆ, ಅಭಿಮಾನಿಯೆನಿಪ= ಸುರರು=ದೇವತೆಗಳು, ವಿಪಶ್ಚಿತರು = ಜ್ಞಾನಿಗಳು, ತಮ್ಮ ಪೂಜೆಯ ಮಾಡಿದರು ಸರಿಯೆ, ಸನ್ಮನದಿ=ಪರಮಾತ್ಮನಲ್ಲಿ ದೃಢವಾದ ಮನಸ್ಸನ್ನಿಟ್ಟು, ಭಜಿಸದಲಿಪ್ಪವರ=ಭಜಿಸದೇ ಇರುವವರನ್ನು ಪಾವನವಮಾಡರು.

ತಾತ್ಪರ್ಯ:– ಲೋಕದಲ್ಲಿ ಅಗ್ನಿ, ಪಾರ್ವತಿ ಪರಮೇಶ್ವರರು, ಸೂರ್ಯ, ಚಂದ್ರ, ನಕ್ಷತ್ರ ಸಮೂಹಗಳು, ನವಗ್ರಹಗಳು, ಭೂಮಿ, ಗಂಗಾ ಮೊದಲಾದ ತೀರ್ಥಗಳು, ಮತ್ತು ವಾಯು, ಆಕಾಶ ಮೊದಲಾದ ಪಂಚಭೂತಗಳು, ತನ್ಮಾತ್ರಾ ಗುಣಗಳು,

ಜ್ಞಾನೇಂದ್ರಿಯ, ಕರ್ಮೇಂದ್ರಿಯ ಮನಸ್ಸು ಮೊದಲಾದ ಇಂದ್ರಿಯಗಳು, ಇವುಗಳಿಗೆ ಅಭಿಮಾನಿ ದೇವತೆಗಳು, ಭಗವದ್ಭಕ್ತರಾದ ಜ್ಞಾನಿಗಳು ಇವರೆಲ್ಲರೂ ಪರಮಾತ್ಮನ ಅಧಿಷ್ಠಾನ ಭೂತರೆಂದು ತಿಳಿದು ಆಯಾ ಅಧಿಷ್ಠಾನದಲ್ಲಿ ಪೂಜಿಸಿದರೆ, ಅವರ ಅಂತರ್ಯಾಮಿ ಪರಮಾತ್ಮನು ಪ್ರಸನ್ನನಾಗಿ ದೇವತೆ ಮೊದಲಾದವರು ಇವನನ್ನು ಪವಿತ್ರನನ್ನಾಗಿ ಮಾಡುವರು. ಅವರುಗಳಲ್ಲಿ ಅಧಿಷ್ಠಾನವನ್ನು ತಿಳಿಯದೆ, ಅವರನ್ನು ಪೂಜಿಸುವದು ಅವರಂತರ್ಯಾಮಿಯಾದ ಪರಮಾತ್ಮನ ಪೂಜೆಯೆಂದು ಭಾವಿಸದೆ, ಬರೇ ದೇವತಾ ಪೂಜೆ ಎಂದು ಭಾವಿಸಿದರೆ ಮೇಲೆ ಹೇಳಿದ ಯಾವ ದೇವತೆಗಳೂ ಇವನನ್ನು ಪಾವನವನ್ನಾಗಿ ಮಾಡುವದಿಲ್ಲ.

ಭಗವದ್ಭಕ್ತರನ್ನು ಪರಮಾತ್ಮನ ಅಧಿಷ್ಠಾನವೆಂದು ತಿಳಿದು ಪೂಜಿಸಿದರೆ ಇವನು ಪಾವನನಾಗುವನೆಂದು ಹೇಳುತ್ತಾರೆ.

ಕೆಂಡ ಕಾಣದೆ ಮುಟ್ಟಿದರು ಸರಿ
ಕಂಡು ಮುಟ್ಟಲು ದಹಿಸದಿಪ್ಪದೆ
ಪುಂಡರೀಕ ದಳಾಯತಾಕ್ಷನ ವಿಮಲಪದಪದ್ಮ ॥
ಬಂಡುಣಿಗಳೆಂದೆನಿಪ ಭಕ್ತರ
ಹಿಂಡುನೋಡಿದಮಾತ್ರದಲಿ ತನು
ದಿಂಡುಗೆಡಹಿದ ನರನ ಪಾವನಮಾಳ್ಪರಾಕ್ಷಣದಿ ॥ ೧೨ ॥

ಪದ್ಯಾರ್ಥ:– ಕೆಂಡ=ಬೆಂಕಿಯ ಕೆಂಡವನ್ನು, ಕಾಣದೆ ಮುಟ್ಟಿದರೂ ಸರಿ= ಇದನ್ನು ನಾವು ಮುಟ್ಟಿದರೆ ನಮ್ಮನ್ನು ಸುಟ್ಟು ಬಿಡವದೆಂಬ ಜ್ಞಾನವು ನಮಗಿಲ್ಲದೆ ಮುಟ್ಟಿದರೂ ಸರೆ, ಕಂಡು ಮುಟ್ಟಲು=ಅದರ ಯೋಗ್ಯತೆಯನ್ನು ತಿಳಿದು ಮುಟ್ಟಿದರೂ ಸರೆ, ದಹಿಸದಿಪ್ಪದೆ=ಸುಡದೇ ಇರುವುದೆ, ಪುಂಡರೀಕ ದಳಾಯತಾಕ್ಷನ=ಕಮಲ ದಳದಂತೆ ವಿಶಾಲವಾದ ನೇತ್ರಗಳುಳ್ಳ ಶ್ರೀಪರಮಾತ್ಮನ, ವಿಮಲ=ನಿರ್ದೋಷವಾದ, ಪದಪದ್ಮ=ಪಾದ ಪದ್ಮಗಳಲ್ಲಿ, ಬಂಡುಣಿಗಳೆಂದೆನಿಪ=ಭ್ರಮರವೆಂದೆನಿಸುವ, ಭಕ್ತರ, ಹಿಂಡು=ಸಮೂಹವನ್ನು, ನೋಡಿದ ಮಾತ್ರದಲ್ಲಿ, ತನುದಿಂಡು=ಶರೀರವೆಂಬ ದಂಡವನ್ನು, ಕೆಡಹಿದ=ಕೆಳಗೆ ಹಾಕಿದ, ಅಂದರೆ ದಂಡದಂತೆ ಸಾಷ್ಟಾಂಗ ನಮಸ್ಕಾರ ಮಾಡಿದ, ನರನ=ಮನುಷ್ಯನನ್ನು ಆಕ್ಷಣದಿ, ಪಾವನ ಮಾಳ್ಪರು.

ತಾತ್ಪರ್ಯ:– ಬೆಂಕಿಯ ಕೆಂಡವೆಂದು ನಾವು ತಿಳಿದು ಮುಟ್ಟಿದರೂ, ತಿಳಿಯದೇ ಮುಟ್ಟಿದರೂ, ಸಹ ಅದು ಹೇಗೆ ಸುಟ್ಟೇ ಸುಡುವುದೋ, ಹಾಗೆ ಪರಮಾತ್ಮನ ಪಾದ ಕಮಲದಲ್ಲಿ ಭ್ರಮರದಂತೆ ಅಂದರೆ ಭ್ರಮರವು ಅವಿಚ್ಛಿನ್ನವಾಗಿ ಕಮಲದ ಮಕರಂದವನ್ನು ಸ್ವೀಕರಿಸುವಂತೆ ಯಾರು ಸರ್ವದಾ ಪರಮಾತ್ಮನ ಪಾದಧ್ಯಾನ ನಿರುತರಾಗಿರುವರೋ, ಅಂತಹ ಭಕ್ತರ ಗುಂಪುಗಳ ದರ್ಶನ ಮಾತ್ರದಿಂದ ಇವನ ಪಾಪಗಳೆಲ್ಲವೂ ಪರಿಹಾರವಾಗುವುವು. ನೋಡುವವನಿಗೆ ಆ ಬ್ರಾಹ್ಮಣರ ಮಹಾತ್ಮ್ಯ ಜ್ಞಾನವಿದ್ದರೂ ಇಲ್ಲದಿದ್ದರೂ ಸಹ ಭಕ್ತರಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದರಿಂದ ಅವರು ತಕ್ಷಣದಲ್ಲೆ ಇವನನ್ನು ಪವಿತ್ರನನ್ನಾಗಿ ಮಾಡಿ ಇವನನ್ನು ಕೃತಾರ್ಥನನ್ನಾಗಿ ಮಾಡುವರು. ಇದೇ ವಿಷಯ ಮೋಕ್ಷ ಧರ್ಮದಲ್ಲಿ 'ವಿಪ್ರೌಘ ದರ್ಶನಾ ತ್ಕ್ಷಿಪ್ರಂ ಕ್ಷೀಯಂತೇ ಪಾಪರಾಶಯಃ॥ ವಂದನಾನ್ಮಂಗಳಾವಾಪ್ತಿ ರರ್ಚನಾದಚ್ಯುತಂ ಪದಂ' ಬ್ರಾಹ್ಮಣರ ಗುಂಪನ್ನು ನೋಡೋಣ ಮಾತ್ರದಿಂದ ಇವನ ಪಾಪರಾಶಿಗಳೆಲ್ಲವು ಕ್ಷಯವಾಗುವವು. ನಮಸ್ಕಾರ ಮಾಡಲು ಮಂಗಳ ಪ್ರಾಪ್ತಿಯಾಗುವುದು. ಪೂಜಿಸಿದರೆ ಪರಮಾತ್ಮನು ಪ್ರೀತನಾಗಿ ತನ್ನ ಪದವಿಯನ್ನು ಕೊಡುವನು ಎಂದು ಹೇಳಿರುವರು. ಬೆಂಕಿಯನ್ನು ಮುಟ್ಟಿದವನು, ಇಲ್ಲಿ ಬೆಂಕಿ ಇದೆ ಎಂದು ತಿಳಿಯದಿದ್ದರೂ ಆ ಬೆಂಕಿಯು ತನ್ನ ಶಕ್ತಿಯನ್ನು ತೋರಿಸೇ ತೋರಿಸುವುದು. ಅದರಂತೆ ಇವರು ಬ್ರಾಹ್ಮಣೋತ್ತಮರೆಂದು ತಿಳಿದುಕೊಳ್ಳದೇ ಅವರನ್ನು ಕಂಡರೂ ಅವರು ಇವನಿಗೆ ಉಳ್ಳೆಯ ಉಪದೇಶವನ್ನು ಕೊಟ್ಟು ಉದ್ಧರಿಸುವರು. ದಶಮ ಸ್ಕಂಧ ೪೭ ನೆಯ ಅಧ್ಯಾಯದಲ್ಲಿ, 'ನಹ್ಯಮ್ಮಯಾನಿ ತೀರ್ಥಾನಿ ನದೇವಾ ಮೃಚ್ಛಿಲಾಮಯಾಃ॥ ತೇಪುನಂತ್ಯುರು ಕಾಲೇನ ದರ್ಶನಾದೇವ ಸಾಧವಃ' ಗಂಗಾ ಮೊದಲಾದ ತೀರ್ಥಗಳು ಸ್ನಾನಾದಿಗಳಿಂದ ಪವಿತ್ರರನ್ನಾಗಿ ಮಾಡುವದಿಲ್ಲವೆಂತಿಲ್ಲ. ಮಣ್ಣಿನಿಂದಲೂ, ಶಿಲೆಯಿಂದಲೂ, ಮಾಡಲ್ಪಟ್ಟ ಪ್ರತಿಮೆಗಳು ತಮ್ಮ ದರ್ಶನ ಪೂಜಾದಿಗಳಿಂದ ಪವಿತ್ರರನ್ನಾಗಿ ಮಾಡುವದಿಲ್ಲವೆಂತಿಲ್ಲ. ಮಾಡುವವು. ಆದರೆ ದೊಡ್ಡವರ ಸಹವಾಸದಿಂದ ಅವುಗಳ ಮಹಾತ್ಮ್ಯ ಜ್ಞಾನವನ್ನು ತಿಳಿದು ಅವುಗಳಲ್ಲಿ ಗೋಳಕಾದಿಗಳನ್ನು ತಿಳಿದು ಚಿಂತಿಸಿದರೆ ಆಗ ಅವು ಪವಿತ್ರರನ್ನಾಗಿ ಮಾಡುವವು. ಸಾಧುಗಳು ಹಾಗಲ್ಲ. ಅವರನ್ನು ನೋಡುತ್ತಲೇ ಜ್ಞಾನೋಪದೇಶವನ್ನು ಮಾಡಿ ಪವಿತ್ರರನ್ನಾಗಿ ಮಾಡುವರು. ಎಂದು ಹೇಳಿರುವರು. ಬ್ರಾಹ್ಮಣರಿಗೆ ಇಷ್ಟು ಮಹಿಮೆಯನ್ನು ಹೇಳುವುದರಿಂದ ದೇವತೆಗಳಿಗಿಂತಲೂ ಬ್ರಾಹ್ಮಣರು ಉತ್ತಮರೇ ಎಂಬ ಶಂಕೆಯು ಬರಬಹುದು. ಈ ವಿಷಯದಲ್ಲಿ ಏಕಾದಶ ಸ್ಕಂಧ ೨ನೆಯ ಅಧ್ಯಾಯದಲ್ಲಿ ನಾರದರನ್ನು ಕುರಿತು ವಸುದೇವನು ಹೇಳುವ ಮಾತು:– 'ಭೂತಾನಾಂ ದೇವಚರಿತಂ ದುಃಖಾಯಚ ಸುಖಾಯಚ॥ ಸುಖಾಯೈವಹಿ ಸಾಧೂನಾಂ ತ್ವಾದೃಶಾಮಚ್ಯುತಾತ್ಮನಾಂ॥ ಭಜಂತಿಯೇ ಯಥಾ

ದೇವಾ್ ದೇವಾ ಅಪಿ ತಥೈವತಾ್॥ ಛಾಯೇವ ಕರ್ಮ ಸಚಿವಾಃಸಾಧವೋ ದೀನವತ್ಸಲಾಃ' ಪ್ರಾಣಿಗಳಿಗೆ ದೇವತೆಗಳು ಸುಖಕ್ಕೂ ದುಃಖಕ್ಕೂ ಸಹ ಕಾರಣರಾಗುವರು. ಪರಮಾತ್ಮನಲ್ಲಿ ಮನಸ್ಸನ್ನು ಸರ್ವದಾ ನಿಲ್ಲಿಸಿದ ನಿಮ್ಮಂತಹಾ ಸಾಧುಗಳು ಸುಖಕ್ಕೆ ಮಾತ್ರವೇ ಕಾರಣರಾಗುವಿರಿ, ಅದು ಹೇಗೆಂದರೆ ದೇವತೆಗಳನ್ನು ಯಾರು ಯಾರು ಹೇಗೆ ಹೇಗೆ ಭಜಿಸುವರೋ ಆ ಭಜನೆಯನ್ನನುಸರಿಸಿ ಅವರಿಗೆ ಸುಖವನ್ನೋ ದುಃಖವನ್ನೋ ಕೊಡುವರು. ಅವರು ಮುಖ್ಯವಾಗಿ ಕರ್ಮಕ್ಕೆ ಮಂತ್ರಿಯಂತೆ ಇದ್ದು ಮಾಡಿದ ಕರ್ಮಕ್ಕೆ ತಕ್ಕ ಫಲವನ್ನು ಕೊಡುವರು. ಇದರ ತಾತ್ಪರ್ಯವೇನೆಂದರೆ ದೇವತೆಗಳು ಸಾತ್ವಿಕಾದಿ ತ್ರಿವಿಧ ಜೀವರ ಯೋಗ್ಯತೆಯನ್ನು ತಿಳಿದು ಸಾತ್ವಿಕರಿಗೆ ತಮ್ಮಲ್ಲಿ ಭಕ್ತಿಯನ್ನು ಹುಟ್ಟಿಸಿ, ತಮ್ಮ ಪೂಜೆಯನ್ನು ತಾರತಮ್ಯ ಪ್ರಕಾರ ತೆಗೆದುಕೊಂಡು ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸುವಂತೆ ಮಾಡಿ ಮುಕ್ತಿ ಸಾಧನವನ್ನು ಮಾಡಿಸುವರು. ರಾಜಸರಲ್ಲಿ ಮಿಶ್ರ ಬುದ್ಧಿಯನ್ನು ಹುಟ್ಟಿಸಿ ಮಿಶ್ರ ಫಲವನ್ನು ಕೊಡುವರು. ತಾಮಸರಿಗೆ ತಮ್ಮಲ್ಲಿ ದ್ವೇಷವನ್ನು ಹುಟ್ಟಿಸಿ ಪರಮಾತ್ಮನಲ್ಲೂ ದ್ವೇಷವನ್ನು ಮಾಡಿಸಿ ತಮಸ್ಸಾಧನವನ್ನು ಮಾಡಿಸುವರು. ಎಂಬ ತಾತ್ಪರ್ಯ (ಈ ಅರ್ಥವು ವಿಜಯಧ್ವಜೀಯ ವ್ಯಾಖ್ಯಾನವನ್ನನುಸರಿಸಿ ಬರೆಯಲ್ಪಟ್ಟಿದೆ) ಸಾಧುಗಳು ಹಾಗಲ್ಲ, ಕರುಣಾಳುಗಳು, ತಮ್ಮನ್ನು ಯಾವನು ನೋಡುತ್ತಾನೆಯೋ, ಅವನು ಎಂತಹವನೇ ಆಗಲಿ ಅವನಿಗೆ ಸದುಪದೇಶವನ್ನು ಮಾಡುವರು. ಎಂದು ಹೇಳಿರುವರು. ಈ ಮಾತಿನಿಂದ ದೇವತೆಗಳಿಗಿಂತಲೂ ಋಷಿಗಳು (ಬ್ರಾಹ್ಮಣರು) ಉತ್ತಮರೆಂದು ತಿಳಿಯಬಾರದು. ದೇವತೆಗಳು ಭಗವದಾಜ್ಞಾ ಪ್ರಕಾರ ಯೋಗ್ಯತಾನುಸಾರವಾಗಿ ಫಲ ಕೊಡುವವರಾದುದರಿಂದ ಅವರು ಶ್ರೇಷ್ಠರೇ, ಋಷಿಗಳು, ಮಕ್ಕಳು ಅಯೋಗ್ಯರಾಗಲಿ ಯೋಗ್ಯರಾಗಲಿ, ಅವರಲ್ಲಿ ತಂದೆ ತಾಯಿಗಳು ಹೇಗೆ ವಾತ್ಸಲ್ಯವುಳ್ಳವರಾಗಿರುವರೋ ಹಾಗೆ ಜನರು ಕಷ್ಟಪಡುವುದನ್ನು ನೋಡಲಾರದೆ ಅವರಿಗೆ ಒಳ್ಳೆಯ ದಾರಿಯನ್ನೇ ತೋರಿಸುವರು. ಆದರೂ ದೇವತೆಗಳಿಗಿಂತಲೂ ಋಷಿಗಳು ತಾರತಮ್ಯದಲ್ಲಿ ಕಮ್ಮಿಯೇ. ಇಷ್ಟಾದರೂ ಇವರ ಉಪದೇಶವು ತಮೋಯೋಗ್ಯರಿಗೆ ರುಚಿಸುವುದೇನು? ಇಲ್ಲ. ಇವರ ಕೃತ್ಯವೆಷ್ಟೋ ಅಷ್ಟು ಮಾಡುತ್ತಾರೆ. ಅವರು ಯೋಗ್ಯರಾದರೆ ಮಾತ್ರವೇ ಗ್ರಹಿಸುತ್ತಾರೆ, ಅಯೋಗ್ಯರಾದರೆ ಇವರನ್ನು ತಿರಸ್ಕರಿಸಿ ಶಾಪಾದಿಗಳನ್ನು ಪಡೆಯುತ್ತಾರೆ. ಅದಂತಿರಲಿ! ಪ್ರಕೃತ, ಸಾಧುಗಳ ಸಂದರ್ಶನದಿಂದಲೇ ಯೋಗ್ಯರಿಗೆ ಜ್ಞಾನೋದಯವಾಗಿ ಪರಮಾತ್ಮನನ್ನು ಭಜಿಸುವ ಬುದ್ಧಿಯು ಹುಟ್ಟುವುದು. ಆದ್ದರಿಂದಲೇ ಭಕ್ತರಿಗೆ ನಮಸ್ಕಾರ ಮಾಡಿದರೂ ಕಡೆಗೆ ಅವರ ಗುಂಪನ್ನು ಕಂಡರೂ ಸಹ ಪಾಪ ಪರಿಹಾರವಾಗುವದೆಂದು ಹೇಳಿರುವರು.

ಆದ್ದರಿಂದ ದುರ್ಜನರ ಸಹವಾಸವನ್ನು ಬಿಟ್ಟು ಸಜ್ಜನರ ಸಹವಾಸವನ್ನು ಮಾಡುತ್ತಾ ಸರ್ವತ್ರ ಪರಮಾತ್ಮನನ್ನು ಚಿಂತಿಸಬೇಕೆಂದು ಹೇಳುತ್ತಾರೆ.

ಈನಿಮಿತ್ತ ಪುನಃಪುನಃ ಸು
ಜ್ಞಾನಿಗಳ ಸಹವಾಸ ಮಾಡು ಕು
ಮಾನವರ ಕೂಡಾಡದಿರುಲೌಕಿಕಕೆ ಮರುಳಾಗಿ ॥
ವೈನತೇಯಾಂಸಗನ ಸರ್ವ
ಸ್ಥಾನದಲಿ ತನ್ನಾಮರೂಪವ
ಧೇನಿಸುತ ಸಂಚರಿಸು ಇತರಾಲೋಚನೆಯ ಬಿಟ್ಟು ॥ ೧೩ ॥

ಪದ್ಯಾರ್ಥ:– ಈ ನಿಮಿತ್ತ=ಮೇಲೆ ಹೇಳಿದ ಕಾರಣಗಳಿಂದ, ಪುನಃ ಪುನಃ=ಮತ್ತೂ ಮತ್ತೂ, ಸುಜ್ಞಾನಿಗಳ ಸಹವಾಸಮಾಡು; ಲೌಕಿಕಕೆ ಮರುಳಾಗಿ=ಲೋಕದಲ್ಲಿ ಇವರು ಹಣವಂತರೆಂದು ಭಾವಿಸಿ, ಸರ್ವದಾ ಹೆಂಡರು ಮಕ್ಕಳೆಂದು ಕೇವಲ ಸಂಸಾರದಲ್ಲಿ ಲೋಲುಪರಾಗಿ, ಪರಮಾತ್ಮನೇ ಇಲ್ಲವೆಂದು ತಿಳಿದುಕೊಂಡಿರುವ ಜನರ ಧನ ಮೊದಲಾದವುಗಳಿಗೆ ಮರುಳಾಗಿ, ಕುಮಾನವರ=ಭಗವದ್ವೇಷವನ್ನು, ಭಕ್ತರ ದ್ವೇಷವನ್ನು ಮಾಡುತ್ತಿರುವ ಕುಚ್ಛಿತ ಮನುಷ್ಯರ, ಕೂಡ, ಆಡದಿರು=ವ್ಯವಹಾರವನ್ನು ಮಾಡದಿರು. ವೈನತೇಯಾಂಸಗನ= ಗರುಡನ ಹೆಗಲ ಮೇಲೆ ಶೋಭಿಸುವ ಶ್ರೀಹರಿಯನ್ನು, ಸರ್ವಸ್ಥಾನದಲಿ, ತನ್ನಾಮರೂಪವ= ಕಂಡ ಕಂಡ ಪದಾರ್ಥಗಳಲ್ಲೆಲ್ಲಾ ಅದೇ ಆಕಾರದಿಂದಲೂ ಅದೇ ಹೆಸರಿನಿಂದಲೂ ಪರಮಾತ್ಮನಿರುವನೆಂದು ಭಾವಿಸಿ ಆಯಾ ನಾಮ ರೂಪಗಳ, ಧೇನಿಸುತ, ಇತರಾಲೋಚನೆಯನ್ನು ಬಿಟ್ಟು, ಸಂಚರಿಸು.

ತಾತ್ಪರ್ಯ:– ಮೇಲೆ ಹೇಳಿದ ಕಾರಣಗಳಿಂದ ಜ್ಞಾನಿಗಳ ಸಹವಾಸ ಮಾಡಿದರೆ ಜ್ಞಾನೋದಯವಾಗುವುದು; ಅಯೋಗ್ಯರ ಸಹವಾಸದಿಂದ ಕೇಡಾಗುವುದು. ಆದ್ದರಿಂದ ಭಗವದ್ಭಕ್ತರ ಸಹವಾಸವನ್ನು ಮಾಡು, ಐಶ್ವರ್ಯಾದಿಗಳಿಗೆ ಮರುಳಾಗಿ ಅಯೋಗ್ಯರಿಂದ ದ್ರವ್ಯಾಪೇಕ್ಷೆಗೋಸ್ಕರವೋ, ಅಥವಾ ಬೇರೆ ಯಾವ ಕಾರಣದಿಂದಲೇ ಅವರ ಸಹವಾಸವನ್ನು ಮಾಡಬೇಡ. ಪರಮಾತ್ಮನು ಎಲ್ಲಾ

ಸ್ಥಳಗಳಲ್ಲಿಯೂ ಇರುವನೆಂದು ತಿಳಿದು ಆಯಾ ಸ್ಥಳಗಳಲ್ಲಿ ಆಯಾ ನಾಮರೂಪಗಳನ್ನು ಧೇನಿಸುತ್ತ, ಇತರವಾದ ಗೃಹಕೃತ್ಯದಾಲೋಚನೆಯನ್ನು ಬಿಟ್ಟು ಸಂಚರಿಸು. ಸರ್ವದಾ ಗೃಹಕೃತ್ಯದ ಯೋಚನೆಯನ್ನೇ ಬಿಟ್ಟು ಬಿಟ್ಟರೆ ಹೆಂಡತಿ ಮಕ್ಕಳ ಗತಿಯೇನೆಂದು ಚಿಂತಿಸಬೇಕಾದುದಿಲ್ಲ. "ಅನನ್ಯಾಶ್ಚಿಂತಯಂತೋಮಾಂ ಯೇಜನಾಃ ಪರ್ಯುಪಾಸತೆ॥ ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ" ನನಗಿಂತಲೂ ರಕ್ಷಕನು ಮತ್ತೊಬ್ಬನಿಲ್ಲವೆಂದು ತಿಳಿದು ಯಾವ ಜನರು ನನ್ನನ್ನು ಉಪಾಸನೆಯನ್ನು ಮಾಡುತ್ತಿರುವರೋ ಅವರ ಯೋಗಕ್ಷೇಮವನ್ನು ನಾನು ವಹಿಸಿರುವೆನು. ಎಂದು ಗೀತೆಯಲ್ಲಿ ಶ್ರೀಕೃಷ್ಣನ ವಾಕ್ಯವಿರುವುದು. ಹೀಗಿರುವುದರಿಂದ ಸುಮ್ಮನೆ ಆಲೋಚನೆ ಮಾಡುತ್ತಿದ್ದರೂ ಏನೂ ಆಗುವಂತಿಲ್ಲ. ಪರಮಾತ್ಮನೇ ಗತಿಯೆಂದು ನಂಬಿಬಿಟ್ಟರೆ ನಮ್ಮ ಗೃಹಕೃತ್ಯವನ್ನು ಶ್ರೀಪರಮಾತ್ಮನೇ ವಹಿಸುವನೆಂದರ್ಥ.

ಆದ್ದರಿಂದ ಸ್ವತಂತ್ರ ಕರ್ತನಾನೆಂದು ಭಾವಿಸದೇ ಸಕಲಕ್ಕೂ ಸ್ವತಂತ್ರಕರ್ತ ಪರಮಾತ್ಮನಿರುವನೆಂದು ಭಾವಿಸಿ ಎಲ್ಲವನ್ನೂ ಪರಮಾತ್ಮನಿಗೇ ಸಮರ್ಪಿಸಬೇಕೆಂದು ಹೇಳುತ್ತಾರೆ.

ಈನಳಿನಜಾಂಡದೊಳು ಸರ್ವ
ಪ್ರಾಣಿಗಳೊಳಿದ್ದ ನವರತ ವಿ
ಜ್ಞಾನಮಯ ವ್ಯಾಪಾರಗಳ ಮಾಡುವನು ತಿಳಿಸದಲೆ ॥
ಏನುಕಾಣದೆ ಸಕಲಕರ್ಮಗ
ಳಾನೆ ಮಾಡುವೆನೆಂಬ ನರ ಕು
ಯೋನಿಯೈದುವ ಕರ್ತುಹರಿ ಎಂಬುವನೆ ಮುಕ್ತನಹ ॥ ೧೪ ॥

ಪದ್ಯಾರ್ಥ:–ಈ ನಳಿನಜಾಂಡದೊಳು=ಈ ಬ್ರಹ್ಮಾಂಡದೊಳಗೆ, ಸರ್ವ ಪ್ರಾಣಿಗಳೊಳು, ಇದ್ದು, ಅನವರತ=ಸರ್ವದಾ, ವಿಜ್ಞಾನಮಯ=ವಿಜ್ಞಾನ ಸ್ವರೂಪನಾದ ಶ್ರೀಹರಿಯು, ತಿಳಿಸದಲೆ=ಜೀವರಿಗೆ ತಾನು ಮಾಡಿದುದನ್ನು ತಿಳಿಸದಲೆ, ವ್ಯಾಪಾರಗಳ=ಕರ್ಮಗಳನ್ನು, ಮಾಡುವನು. ಏನು ಕಾಣದೆ=ಶ್ರೀಪರಮಾತ್ಮನೇ ಎಲ್ಲ ಕರ್ಮಗಳನ್ನೂ ತನ್ನಲ್ಲಿದ್ದು ಮಾಡಿಸುವನೆಂದು ಮನುಷ್ಯನು ಅರಿಯದೇ, ಸಕಲ ಕರ್ಮಗಳ, ಆನೆ ಮಾಡುವೆನೆಂಬ=ತಾನೇ ಮಾಡುತ್ತೇನೆಂಬ, ನರ=ಮನುಷ್ಯನು, ಕುಯೋನಿಯೈದುವ=ಕುಚ್ಛಿತವಾದ ಯೋನಿ ಅಂದರೆ ನಾಯಿ ನರಿ ಮೊದಲಾದ ಜನ್ಮಗಳನ್ನು ಹೊಂದುವನು. ಹರಿ=ಪರಮಾತ್ಮನು, ಕರ್ತು=ಸ್ವತಂತ್ರ ಕರ್ತ ಎಂದು ತಿಳಿದವನೇ, ಮುಕ್ತನಹ=ಜೀವನ್ಮುಕ್ತನೆನಿಸುವನು.

ತಾತ್ಪರ್ಯ:– ಈ ಬ್ರಹ್ಮಾಂಡದೊಳಗೆ ಸಕಲ ಪ್ರಾಣಿಗಳಲ್ಲಿಯೂ ಇದ್ದು ಶ್ರೀಪರಮಾತ್ಮನೇ ಸಕಲ ಕಾರ್ಯಗಳನ್ನು ಮಾಡುವನು. ಅಸ್ವತಂತ್ರನಾದ ಜೀವನು ಅವನು ಮಾಡಿಸಿದಂತೆ ಮಾಡುವನು. ಆದರೆ ತನ್ನೊಳಗಿದ್ದ ಪರಮಾತ್ಮನೇ ಮಾಡಿದನೆಂಬುವದು ಮಾತ್ರ ಯಾರಿಗೂ ಗೊತ್ತಾಗುವಂತಿಲ್ಲ. ಈ ರೀತಿಯಾಗಿ ಮನುಷ್ಯನು ಸ್ವತಂತ್ರದಿಂದ ತಾನೇ ಮಾಡಿದನೆಂಬ ಭ್ರಾಂತಿಯಿಂದ ಪಾಪಗಳಿಗೆ ಒಳಗಾಗಿ ನಾಯಿ ನರಿ ಮೊದಲಾದ ಕುಚ್ಛಿತ ಜನ್ಮಗಳನ್ನು ಎತ್ತುವನು. ಸಕಲಕ್ಕೂ ಪರಮಾತ್ಮನೇ ಕರ್ತಾ ಎಂದರಿತು ಮಾಡಿದ ಪುಣ್ಯ ಪಾಪಗಳನ್ನೆಲ್ಲಾ ಪರಮಾತ್ಮನಿಗೆ ಸಮರ್ಪಣೆ ಮಾಡಿದವನು ಜೀವನ್ಮುಕ್ತನೇ ಸರಿ.

ಭಗವನ್ಮಹಿಮೆಯನ್ನು ಬ್ರಹ್ಮಾದಿಗಳೂ ಸಹ ಸಾಕಲ್ಯೇನ ಅರಿಯರು; ಹಾಗಿರಲು ಮಿಕ್ಕಾದವರ ಪಾಡೇನು? ಆದ್ದರಿಂದ ನಾನು ಭಗವಂತನ ಸ್ವರೂಪವನ್ನು ಬಲ್ಲವನೆಂದು ಅಹಂಕಾರ ಪಡಬಾರದೆಂಬ ಭಾವನೆಯಿಂದ ಹೇಳುತ್ತಾರೆ:–

ಕಲಿಮಲಾಪಹಳೆನಿಸುತಿಹ ಬಾಂ
ಬೊಳೆಯೊಳಗೆ ಸಂಚರಿಸಿ ಬದುಕುವ
ಜಲಚರಪ್ರಾಣಿಗಳು ಬಲ್ಲವೆ ತೀರ್ಥಮಹಿಮೆಯನು ॥
ಹಲವುಬಗೆಯಲಿ ಹರಿಯ ಕರುಣಾ
ಬಲದಿ ಬಲ್ಲಿದರಾದ ಬ್ರಹ್ಮಾ
ನಿಲ ವಿಪೇಶಾದ್ಯಮರರರಿಯರನಂತನಮಲಗುಣ ॥ ೧೫ ॥

ಪದ್ಯಾರ್ಥ:– ಕಲಿಮಲಾಪಹಳೆನಿಸುತಿಹ=ಕಲಿಯುಗದ ಪಾಪಗಳನ್ನು ಪರಿಹರಿಸುವಳೆಂದು ಪ್ರಸಿದ್ಧಿಹೊಂದಿದ, ಬಾಂಬೊಳೆಯೊಳಗೆ=ಗಂಗೆಯೊಳಗೆ, ಸಂಚರಿಸಿ ಬದುಕುವ= ಜಲಚರ ಪ್ರಾಣಿಗಳು=ಮೀನು ಮೊಸಳೆ ಮೊದಲಾದವುಗಳು, ತೀರ್ಥ ಮಹಿಮೆಯನು, ಬಲ್ಲವೆ. ಹಲವು ಬಗೆಯಲಿ=ನಾನಾ ಪ್ರಕಾರದಿಂದಲೂ, ಹರಿಯ ಕರುಣಾಬಲದಿ, ಬಲ್ಲಿದರಾದ=ಪರಮಾತ್ಮನ ದಯಾ ಬಲದಿಂದ ತಿಳಿದಿರುವರಾದ, ಬ್ರಹ್ಮಾ=ಬ್ರಹ್ಮದೇವರು, ಅನಿಲ= ವಾಯು ದೇವರು, ವಿಪ=ಗರುಡ ದೇವರು, ಈಶಾದಿ=ರುದ್ರದೇವರು ಮೊದಲಾದ, ಅಮರರು =ದೇವತೆಗಳು, ಅನಂತನ=ಕೊನೆಯಿಲ್ಲದೆ ಮಹಿಮೆಯುಳ್ಳ ಶ್ರೀಹರಿಯ, ಅಮಲಗುಣ= ನಿರ್ದೋಷ ಗುಣಗಳನ್ನು, ಅರಿಯರು=ಸಾಕಲ್ಯವಾಗಿ ತಿಳಿಯಲಾರರು.

ತಾತ್ಪರ್ಯ:– ಕಲಿಯುಗದಲ್ಲಿರುವ ಪಾಪಿಗಳ ಪಾಪಗಳನ್ನು ಪರಿಹರಿಸುವ ಶಕ್ತಿಯುಳ್ಳ ಗಂಗೆಯೊಳಗೆ ಅನೇಕ ಮೀನು ಮೊಸಳೆ ಮೊದಲಾದ ಜಲಚರ ಪ್ರಾಣಿಗಳಿರುವವು. ಅವುಗಳಿಗೆ ಆ ಗಂಗೆಯ ಮಹಿಮೆಯು ಇಂತಹುದೆಂದು ಗೊತ್ತಾಗುವುದೆ? ಅದರಂತೆ ಅಪಾರ ಮಹಿಮೆಯುಳ್ಳ ಗುಣ ಸಮುದ್ರನಾದ ಪರಮಾತ್ಮನಲ್ಲಿ, ಸಮುದ್ರದಲ್ಲಿ ಉದಕ ಬಿಂದುಗಳು ಇರುವಂತೆ ಗುಣರಾಶಿಗಳು ಇರುವವು. ಅದರಲ್ಲಿನ ಒಂದು ಗುಣವನ್ನಾದರೂ ಜಲಚರ ಪ್ರಾಣಿಗಳಂತೆ ಇರುವ ಸಾಮಾನ್ಯ ಜನರು ತಿಳಿಯುವರೆ? ಇಲ್ಲ. ಭಗವದನುಗ್ರಹ ಬಲದಿಂದ ಸರ್ವಜ್ಞರೆಂದೆನಿಸಿದ ಬ್ರಹ್ಮ ವಾಯುಗಳೇ, ಸಾಕಲ್ಯೇನ ಭಗವನ್ಮಹಿಮೆಯನ್ನು ಅರಿಯರು. ತಮ್ಮ ಯೋಗ್ಯತಾನುಸಾರವಾಗಿ ಬಲ್ಲರೆಂಬ ತಾತ್ಪರ್ಯ. ಅವರೆಷ್ಟು ಬಲ್ಲರೋ ಅಷ್ಟು ಗರುಡ ರುದ್ರಾದಿಗಳು ತಿಳಿಯರು. ಹೀಗಿರಲು ಇನ್ನು ಸಾಕಲ್ಯೇನ ಬಲ್ಲವರಾರು? ಭಾಗವತ ದ್ವಿತೀಯ ಸ್ಕಂಧದಲ್ಲಿ, (೭ನೆಯ ಅಧ್ಯಾಯ ೪೦–೪೧–೪೨ ಶ್ಲೋಕಗಳು) 'ವಿಷ್ಣೋರ್ನು ವೀರ್ಯ ಗಣನಾಂ ಕತಮೋರ್ಹತೀಹಯಃ ಪಾರ್ಥಿವ್ಯಾನ್ಯಪಿ ಕವಿರ್ವಿಮಮೇರಜಾಂಸಿ॥ ಚಸ್ಕಂಭಯಃ ಸ್ವರಭಸಾ ಸ್ವಲಿತಂತ್ರಿ ಪೃಷ್ಟಂ ಯನ್ಮಾಂ ನಿಶಾಮ್ಯ ಸದನಾದುರುಕಂಪಮಾನಂ॥೪೦॥' (ಬ್ರಹ್ಮದೇವರು ನಾರದರಿಗೆ ಉಪದೇಶ ಮಾಡಿದುದು.) ಶ್ರೀಪರಮಾತ್ಮನು ವಾಮನಾವತಾರ ಮಾಡಿ ಬಲಿಚಕ್ರವರ್ತಿಯನ್ನು ಮೂರು ಹೆಜ್ಜೆ ಭೂಮಿಯನ್ನು ಬೇಡಿ, ತ್ರಿವಿಕ್ರಮ ರೂಪದಿಂದ ಭೂಮಿಯನ್ನು ಅಳೆಯುವಾಗ ಪರಮಾತ್ಮನ ಎಡದ ಪಾದವು ಸತ್ಯಲೋಕಕ್ಕೆ ತಗಲಿದ ಕಾಲದಲ್ಲಿ ಸತ್ಯಲೋಕವು ಸ್ಥಾನ ಭ್ರಷ್ಟವಾಗಿ ಬಿದ್ದು ಹೋಗುವಂತಾಯಿತು. ಆಗ ಬ್ರಹ್ಮದೇವರೂ ಸಹ ಅಜ್ಞಾನವಿಲ್ಲದಿದ್ದರೂ ಭಗವನ್ಮಹಿಮೆಯನ್ನು ತೋರಿಸುವುದಕ್ಕಾಗಿ ತಮಗೆ ನಾಶ ಸಂಭವಿಸುವದೋ ಎಂಬ ಭಯದಿಂದ ನಡುಗುತ್ತಿರುವಂತೆ ಕಂಡು ಬಂದರು. ಇದನ್ನು ತಿಳಿದು ಯಾವ ಪರಮಾತ್ಮನು 'ಉರುಕಂಪಮಾನಂ, ಮಾಂ, ತ್ರಿಪೃಷ್ಟಂಚ ಚಸ್ಕಂಭ' ಭಯದಿಂದ ನಡುಗುತ್ತಿದ್ದ ನನ್ನನ್ನು, ಕೆಳಗೆ ಬೀಳುತ್ತಿದ್ದ ಸತ್ಯಲೋಕವನ್ನು ಸಹ ಸ್ತಂಭಿಸಿ ನಿಲ್ಲಿಸಿದನೋ, ಅಂತಹಾ ವಿಷ್ಣುವಿನ ವೀರ್ಯಗಳನ್ನು ಗಣನ ಮಾಡಲು ಯಾರಿಗೆ ಸಾಧ್ಯ. ಯಾರಿಗೂ ಸಾಧ್ಯವಲ್ಲ. ಒಂದು ಕಾಲದಲ್ಲಿ ಆದಿ ಕವಿಯಾದ ಬ್ರಹ್ಮದೇವರು 'ಪಾರ್ಥಿವಾನಿ ರಜಾಂಸ್ಯಪಿ' ಭೂಮಿಯಲ್ಲಿರುವ ಧೂಳಿಗಳ ಪರಮಾಣುಗಳು ಇಷ್ಟೆಂದು ಗಣನೆ ಮಾಡಿದ್ದರು. ಅಂತಹಾ ಬ್ರಹ್ಮದೇವರಿಂದಲೇ ಭಗವದ್ಗುಣಗಳನ್ನು ವರ್ಣಿಸಲು ಆಗಲಿಲ್ಲವೆಂದಮೇಲೆ ಮಿಕ್ಕ ಯಾವ ಜ್ಞಾನಿಯಿಂದ ತಾನೆ ಸಾಧ್ಯವಾಗುವುದು? ಯಾರಿಂದಲೂ ಸಾಧ್ಯವಿಲ್ಲ॥೪೦॥ ಅದನ್ನೇ ವಿಸ್ತರಿಸುತ್ತಾರೆ:– 'ನಾಂತಂವಿದಾಮ್ಯಹಮೀಮುನಯಃ ಪ್ರಜೇಶಾ ಮಾಯಾಬಲಸ್ಯ ಪುರುಷಸ್ಯ ಕುತೋಪರೇಯೇ॥ ಗಾಯನ್ಗುಣಾನ್ದಶ ಶತಾನನ ಆದಿದೇವಃ ಶೇಷೋಽಧುನಾಪಿ ಸಮವಸ್ಯತಿ ನಾಸ್ಯಪಾರಂ॥೪೧॥ (ಬ್ರಹ್ಮವಾಕ್ಯ) ಎಲೈ ನಾರದನೆ! ಇಚ್ಛಾಶಕ್ತಿಯುಳ್ಳ ಮಹಾ ಪುರುಷನಾದ ಶ್ರೀಪರಮಾತ್ಮನ ಮಹಿಮೆಯನ್ನು, ನಾನೇ ಸಾಕಲ್ಯೇನ ಕಾಣೆನು. ಇಲ್ಲಿರುವ ಮರೀಚ್ಯಾದಿ ಋಷಿಗಳಾಗಲಿ, ಪರಮಾತ್ಮನ ಮಹಿಮೆಯನ್ನು ಕಾಣರು. ಹಾಗಿರಲು ಮಿಕ್ಕವರು ಕಾಣುವರೇ? ಇರಲಿ ಶೇಷದೇವರಿಗೆ ಸಹಸ್ರ ಮುಖಗಳಿರುವವು. ಆದ್ದರಿಂದ ಬ್ರಹ್ಮದೇವರಿಗಿಂತಲೂ ಅವರು ಹೆಚ್ಚಾಗಿ ಬಲ್ಲರೇ ಹೇಗೆ ಎಂಬ ಮಂದವಾದ ಶಂಕೆಯನ್ನು ಪರಿಹರಿಸುತ್ತಾ ಹೇಳುತ್ತಾರೆ:– ಸಹಸ್ರ ಮುಖವುಳ್ಳ ಶೇಷ ದೇವರು ತನ್ನ ಸಹಸ್ರ ಮುಖಗಳಿಂದ ಪರಮಾತ್ಮನನ್ನು ಸ್ತುತಿಸುತ್ತಿದ್ದರೂ ಈಗಲೂ ಭಗವನ್ಮಹಿಮೆಯ ಪಾರವನ್ನು ಕಾಣಲಿಲ್ಲ. ಮುಂದೆ ಕಾಣುವುದೂ ಇಲ್ಲ.॥೪೧॥ ಪರಮಾತ್ಮನ ಮಹಿಮೆಯನ್ನು ಯಾರೂ ಕಾಣದ ಮೇಲೆ ಅವನ ಮಹಿಮೆ ತಿಳಿದರೇನೇ ಪುರುಷಾರ್ಥಪ್ರಾಪ್ತಿಯು, ಮಹಿಮೆಯನ್ನು ಕಾಣದ ಮೇಲೆ ಯಾರಿಗೂ ಪುರುಷಾರ್ಥ ಸಿದ್ಧಿಯು ಇಲ್ಲವೊ ಎಂಬ ಶಂಕೆಯನ್ನು ಪರಿಹರಿಸುತ್ತಾ, ಭಗವಂತನ ಅನುಗ್ರಹ ಉಳ್ಳವರಿಗೆ ಎಲ್ಲವೂ ಸುಲಭವೆಂದು ಹೇಳುತ್ತಾರೆ:–

"ಏಷಾಂಸ ಏವ ಭಗವಾನ್ ದಯಯೇದನಂತಃ ಸರ್ವಾತ್ಮನಾಶ್ರಿತಪದೋ ಯದಿ ನಿರ್ವ್ಯಲೀಕಂ॥ ತೇವೈವಿದಂತ್ಯತಿ ತರಂತಿಚ ದೇವಮಾಯಾಂ ನೈಷಾಂ ಮಮಾಹಮಿತಿಧೀಃ ಶ್ವಸೃಗಾಳಭಕ್ಷ್ಯೇ॥೪೨॥" ಶ್ರೀಪರಮಾತ್ಮನು ತಾನಾಗಿ ಯಾರಲ್ಲಿ ದಯೆಯನ್ನು ಮಾಡುವನೋ ಅವರು ಪರಮಾತ್ಮನ ಮಾಯೆಯನು ದಾಟಿ ತಮ್ಮ ಯೋಗ್ಯತಾನುಸಾರವಾಗಿ ಪರಮಾತ್ಮನನ್ನು ತಿಳಿಯುವರು. ಹಾಗಾದರೆ ಪರಮಾತ್ಮನು ಕೆಲವರಲ್ಲಿ ದಯೆಯನ್ನು ತೋರಿಸುವನು, ಕೆಲವರಲ್ಲಿ ಇಲ್ಲವೆಂದಾಯಿತು, ಇದರಿಂದ ಪರಮಾತ್ಮನಿಗೆ ವೈಷಮ್ಯವಿದ್ದಂತಾಯಿತು. ಅಂದರೆ, ಹೇಳುತ್ತಾರೆ:– 'ಸರ್ವಾತ್ಮನಾ ಶ್ರಿತಪದೊಯದಿ ನಿರ್ವ್ಯಲೀಕಂ' ಕಪಟವಿಲ್ಲದೆ ಸರ್ವಪ್ರಕಾರದಿಂದಲೂ ತನ್ನ ಪಾದಾರವಿಂದವನ್ನೇ ನಂಬಿರುವವರು ಯಾರೊ ಅವರಲ್ಲಿ ದಯೆಯನ್ನು ಮಾಡುವನು. ಹೀಗೆ ಹೇಳಿದುದರಿಂದ ಅವರವರ ಯೋಗ್ಯತಾನುಸಾರ ದ್ವೇಷಿಗಳಿಗೆ ದ್ವೇಷಫಲ, ಭಕ್ತರಿಗೆ ಭಕ್ತಿ ಫಲವನ್ನು ಕೊಡುವವನಾದುದರಿಂದ ಪರಮಾತ್ಮನಿಗೆ ವೈಷಮ್ಯವಿಲ್ಲವೆಂದು

ತಾತ್ಪರ್ಯ:– ತನ್ನನ್ನು ಸರ್ವಪ್ರಕಾರ ನಂಬಿದವರಲ್ಲಿ ದಯೆ ಮಾಡುವನೆಂದರು. ಯಾರಲ್ಲಿ ದಯೆ ಮಾಡುವದಿಲ್ಲವೆಂದರೆ, ನಾಯಿ ನರಿಗಳಿಗೆ ಆಹಾರ ಭೂತವಾದ ಈ ದೇಹದಲ್ಲಿ ನಾನು ನನ್ನದು ಎಂಬ ಬುದ್ಧಿಯು ಯಾರಿಗೆ ಸ್ಥಿರವಾಗಿರುವುದೋ ಅವರಲ್ಲಿ ಮಾತ್ರ ಪರಮಾತ್ಮನು ದಯೆಮಾಡನು ಎಂದು ಹೇಳಿರುವರು. ಈ ಮೂರು ಶ್ಲೋಕಗಳ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ವಿವರಿಸಿರುವರೆಂದು ತಿಳಿಯಬೇಕು.

ಶ್ರೀಪರಮಾತ್ಮನು ತನ್ನ ಮಾಯೆಯಿಂದ ಜನರನ್ನು ಮೋಹಗೊಳಿಸುವನೆಂದು ಹೇಳುತ್ತಾರೆ:–

ಶ್ರೀಲಕುಮಿವಲ್ಲಭನು ಹೃತ್ಕೀ
ಲಾಲಜದೊಳಿದ್ದಖಿಳಚೇತನ
ಜಾಲವನು ಮೋಹಿಸುವ ತ್ರಿಗುಣದಿ ಬದ್ಧರನ ಮಾಡಿ ॥
ಸ್ಥೂಲಕರ್ಮದಿರತರ ಮಾಡಿ ಸು
ಲೀಲೆಗಳ ತಿಳಿಸದಲೆ ಭವದಿಕು
ಲಾಲಚಕ್ರದತೆರದಿ ತಿರುಗಿಸುತಿಹನು ಮಾನವರ ॥ ೧೬ ॥

ಪದ್ಯಾರ್ಥ:– ಶ್ರೀಲಕುಮಿ ವಲ್ಲಭನು=ಲಕ್ಷ್ಮೀಪತಿಯು, ಹೃತ್ಕೀಲಾಲಜದೊಳು= ಹೃದಯ ಕಮಲದೊಳಗೆ, (ಕೀಲಾಲವೆಂದರೆ ನೀರು, ಜ ಅಂದರೆ ಅದರಲ್ಲಿ ಹುಟ್ಟಿದುದು ಕಮಲವೆಂದರ್ಥ.) ಇದ್ದು, ಅಖಿಳಚೇತನಜಾಲವನು= ಸಕಲ ಜೀವ ಸಮೂಹವನ್ನು, ತ್ರಿಗುಣದಿ=ಸತ್ವ ರಜಸ್ತಮೋಗುಣಗಳಿಂದ, ಬದ್ಧರನಮಾಡಿ=ಕಟ್ಟಲ್ಪಟ್ಟವರನ್ನಾಗಿ ಮಾಡಿ, ಮೋಹಿಸುವನು. ಸ್ಥೂಲಕರ್ಮದಿ ರತರಮಾಡಿ=ಸ್ಥೂಲವಾದ ಕರ್ಮಗಳಲ್ಲಿ ಆಸಕ್ತರನ್ನಾಗಿ ಮಾಡಿ, ಸುಲೀಲೆಗಳ ತಿಳಿಸದಲೆ=ತನ್ನ ಉತ್ತಮವಾದ ಮಹಿಮೆಯುಳ್ಳ ಆಟಗಳನ್ನು ಜನರಿಗೆ ತಿಳಿಸದೆ, ಮಾನವರ=ಮನುಷ್ಯರನ್ನು, ಭವದಿ=ಸಂಸಾರದಲ್ಲಿ, ಕುಲಾಲಚಕ್ರದತೆರದಿ=ಕುಂಬಾರನ ಚಕ್ರದಂತೆ, ತಿರುಗಿಸುತಿಹನು.

ತಾತ್ಪರ್ಯ:– ಶ್ರೀಲಕ್ಷ್ಮೀಪತಿಯು, ಸಕಲ ಜನರ ಹೃದಯ ಕಮಲದಲ್ಲಿ ವಾಸವಾಗಿದ್ದು ಸಕಲ ಜೀವ ಸಮೂಹವನ್ನು ತ್ರಿಗುಣಬದ್ಧರನ್ನಾಗಿ ಮಾಡಿ ಮೋಹಿಸುವನೆಂದು ಹೇಳಿರುವರು. ಇದನ್ನು ನೋಡಿದರೆ ಪರಮಾತ್ಮನೇ ಜೀವರನ್ನು ಮೂರು ಗುಣಗಳಿಂದ ಬದ್ಧರನ್ನಾಗಿ ಮಾಡಿದನೆಂದು ಅರ್ಥವಾಗುವದು. ಹಾಗೆ ಹೇಳಲಿಕ್ಕಿಲ್ಲ. ಏಕೆಂದರೆ ಮಹಾಭಾರತ ತಾತ್ಪರ್ಯ ನಿರ್ಣಯ ಮೊದಲನೆಯ ಅಧ್ಯಾಯದಲ್ಲಿ 'ದೃಷ್ಟ್ವಾಸ ಚೇತನಗರ್ಣಾ ಜಠರೇ–ಶಯನಾ ನಾನಂದ ಮಾತ್ರ ವಪುಷಃ ಸೃತಿ ವಿಪ್ರಮುಕ್ತಾ್ರ॥ ಧ್ಯಾನಂ ಗತಾ ಸ್ಸೃತಿಗತಾಂಶ್ಚ ಸುಷುಪ್ತಿ ಸಂಸ್ಥಾ್ರ ಬ್ರಹ್ಮಾದಿಕಾ್ರ ಕಲಿಪರಾ್ರ ಮನುಜಾಂ ಸ್ತಥೈಕ್ಷತ್' ಎಂಬೀ ಶ್ಲೋಕದಿಂದ, ಕೇವಲ ಆನಂದ ಸ್ವರೂಪರಾದ ಮುಕ್ತರನ್ನು, ಸೃಷ್ಟಿಯೋಗ್ಯರಾದವರಲ್ಲಿ ಧ್ಯಾನಾಸಕ್ತರು, ನಿತ್ಯಸಂಸಾರಿಗಳು ಸುಷುಪ್ತಿಯಲ್ಲಿರುವವರನ್ನು ಅಂದರೆ ಬ್ರಹ್ಮದೇವರು ಮೊದಲು ಸಾತ್ವಿಕರು, ಕಲಿ ಮೊದಲಾದ ತಾಮಸರು, ಮನುಷ್ಯರಾದ ರಾಜಸರು. ಹೀಗೆ ಅನಾದಿ ಕಾಲದಿಂದಲೂ ಮೂರು ಗುಣಗಳಿಂದ ಬದ್ಧರಾದ ಜೀವರನ್ನು ತನ್ನ ಉದರದಲ್ಲಿ ನೋಡಿದನೆಂದು ಸಿದ್ಧವಾಗುವುದು. ಇದೇ ವಿಷಯವನ್ನು ವಿಷ್ಣು ರಹಸ್ಯದಲ್ಲಿ ಸ್ಪಷ್ಟಮಾಡಿರುವರು, ಹೇಗೆಂದರೆ:– ವಿಷ್ಣು ರಹಸ್ಯ ೨ನೇ ಅಧ್ಯಾಯದಲ್ಲಿ 'ಕಲ್ಪಯಿತ್ವಾಖಿಳಾನ್ಸ್ವಾಜ್ಞಾ ಜ್ಜೀವರಾಶೀರ್ವ್ಯಲೋಕಯಂ॥೨೪॥ ಕತಿಚಿತ್ಪುರುಷಾಕಾರಃ ಕತಿಚಿದ್ಧಯರೂಪಿಣಃ॥ ಸಿಂಹ ವ್ಯಾಘ್ರ ಮೃಗಾದೀನಾಂ ಗಜಗೋಜಾ ವಿಪಕ್ಷಿಣಾಂ॥೩೫॥ ವೃಕ್ಷಗುಲ್ಮಲತಾದೀನಾಂಮಾಕಾರಂ ಬಿಭ್ರತೋಪರೆ॥ ಅಪರೇ ಸದೃಶಾಕಾರಾ ಝಷಮೀನಾದಿ ಯಾದಸಾಂ॥೩೬॥ ಸ್ವರೂಪೇಣೈವ ಯೇಜೀವಾ ಸ್ತಾದೃಶಾನಂತ ಸಂಜ್ಞಕಾಃ॥ ಗುಣೈರನೇಕ ಸಂಖ್ಯಾಕೈಃ ಪ್ರತ್ಯೇಕಮಪಿಚಾನ್ವಿತಾಃ॥೩೭॥ ಸಾತ್ವಿಕಾ ಶ್ವೇತರೂಪಾಸ್ತು ಶ್ಯಾಮಾಸ್ತತ್ರೈವ ತಾಮಸಾಃ॥ ತತ್ರಾಪಿ ತಾರತಮ್ಯೇನ ಶ್ವೇತಶ್ವೇತ ತರಾದಿಕಂ॥೩೮॥ ಯಥಾಯೋಗ್ಯತಯಾಸರ್ವೇರಾಜಸಾ ಶಬಲಾಸ್ಥಥಾ॥ ತತ್ತದಾಕಾರ ಸದೃಶೈರ್ಲಿಂಗದೇಹೈರನಾದಿಭಿಃ॥ ೩೯॥ ಕಂಚುಕೈರಿವ ಸಂಛನ್ನಾಸ್ತತ್ತದ್ವರ್ಣೈಃ ಪೃಥಕ್ ಪೃಥಕ್' ಬ್ರಹ್ಮದೇವರಿಗೆ ಪರಮಾತ್ಮನು ಹೇಳುವುದು. ಮಹತ್ತತ್ವಾದಿಗಳನ್ನು ಸೃಷ್ಟಿಮಾಡಿದ ಮೇಲೆ ಜೀವರಾಶಿಗಳನ್ನು ನೋಡಿದೆನು. ಅದರಲ್ಲಿ ಸ್ವರೂಪದಿಂದಲೇ ಕೆಲವರು ಪುರುಷಾಕಾರರಾಗಿಯೂ, ಕೆಲವು ಜೀವರು ಕುದುರೆಯ ರೂಪ. ಮತ್ತೆ ಕೆಲವರು ಸಿಂಹ, ಹುಲಿ, ಜಿಂಕೆ ಮೊದಲಾದ ಮೃಗರೂಪಗಳಾಗಿಯೂ, ಮತ್ತೆ ಕೆಲವರು ಆನೆಗಳು, ಗೋವುಗಳು, ಮೇಕೆಗಳು, ಕುರಿಗಳು, ಪಕ್ಷಿಗಳ ರೂಪರಾಗಿಯೂ, ಮತ್ತೆ ಕೆಲವರು ವೃಕ್ಷಗಳು, ಹೊದರುಗಳು, ಬಳ್ಳಿಗಳ ರೂಪ ಉಳ್ಳವರಾಗಿಯೂ, ಮತ್ತೆ ಕಲವರು ಮೀನ, ಕೂರ್ಮ ಮೊದಲಾದ ಜಲಜಂತುಗಳ ಆಕಾರ ಉಳ್ಳವರಾಗಿಯೂ ಇದ್ದರು. ಇವರೆಲ್ಲರೂ ಸ್ವರೂಪದಿಂದಲೆ ಹೀಗೆ ಇರುತ್ತಿದ್ದರು. ಇಂತಹ ಜೀವರು ಅಪರಿಮಿತರಾಗಿದ್ದರು. ಒಬ್ಬೊಬ್ಬ ಜೀವರು ಗುಣವು ಪ್ರತ್ಯೇಕ ಪ್ರತ್ಯೇಕವಾಗಿ ಅನೇಕ ಸಂಖ್ಯಾಕವಾದ ಗುಣಗಳಿಂದ ಕೂಡಿದ್ದರು. ಈ ಜೀವರು ಸ್ವಭಾವಿಕವಾಗಿ ಮೂರು ಗುಣಗಳಿಂದ ಬದ್ಧರಾಗಿ ಸಾತ್ವಿಕರು, ರಾಜಸರು ತಾಮಸರೆಂದು ಎಲ್ಲ ಜೀವರಾಶಿಗಳಲ್ಲಿಯೂ ಈ ಮೂರು ಭೇದಗಳಿದ್ದವು. ಈ ಮೂರು ಗುಣಗಳನ್ನು ಅವರ ವರ್ಣಗಳೇ ತೋರಿಸುತ್ತಿದ್ದವು. ಸಾತ್ವಿಕರು ಶುಕ್ಲವರ್ಣರಾಗಿದ್ದರು.

ತಾಮಸರೆಲ್ಲರೂ ಕಪ್ಪುಬಣ್ಣ ಉಳ್ಳವರಾಗಿದ್ದರು. ರಾಜಸರು ಕೆಂಪು. ಈ ಸಾತ್ವಿಕರಲ್ಲಿ ಕೆಲವರು ಸಾತ್ವಿಕ ಸಾತ್ವಕರು, ಕೆಲವರು ಸಾತ್ವಿಕ ರಾಜಸರು, ಇನ್ನು ಕೆಲವರು ಸಾತ್ವಿಕ ತಾಮಸರು, ರಾಜಸರಲ್ಲಿ ರಾಜಸ ಸಾತ್ವಿಕರು, ರಾಜಸ ರಾಜಸರು, ರಾಜಸ ತಾಮಸರು, ಇದರಂತೆ ತಾಮಸರಲ್ಲಿಯೂ ತಾಮಸ ಸಾತ್ವಿಕರು, ತಾಮಸ ರಾಜಸರು, ತಾಮಸ ತಾಮಸರು. ಇವುಗಳಲ್ಲಿ ಒಂದೊಕ್ಕೊಂದಕ್ಕೆ ಪ್ರಭೇದಗಳುಂಟು. ಇವುಗಳು ಮಿಶ್ರಬಣ್ಣಗಳಿಂದ ತೋರುತ್ತಿದ್ದವು. ಶುದ್ಧ ಬಿಳಪು. ಬಿಳುಪು ಕೆಂಪು ಮಿಶ್ರ. ಬಿಳುಪು ಕಪ್ಪುಮಿಶ್ರ. ಮತ್ತು ಶುದ್ಧ ಕೆಂಪು. ಕೆಂಪು ಬಿಳುಪು, ಕೆಂಪು ಕಪ್ಪು ಮಿಶ್ರವಾದುದು. ಕಪ್ಪಿನಲ್ಲೂ ಶುದ್ಧಕಪ್ಪು, ಕಪ್ಪುಬಿಳುಪು, ಕಪ್ಪುಕೆಂಪು ಮಿಶ್ರವಾದುದು. ಹೀಗಾಗಿ ಆ ಜೀವರ ಸ್ವರೂಪಗಳು ಅವರು ತಾಮಸ ರಾಜಸ ಸಾತ್ವಿಕರೆಂಬುದನ್ನು ವ್ಯಕ್ತಿ ಮಾಡುತ್ತಿದ್ದವು.

ಆ ಜೀವರು ಸ್ವರೂಪ ದೇಹದ ಮೇಲೆ ಕವಚಗಳು ಹಾಕಿದಂತೆ ಅವೇ ಬಣ್ಣಗಳಿಂದಲೂ ಅವೇ ಆಕಾರಗಳಿಂದ ಕೂಡಿದ ಲಿಂಗ ಶರೀರಗಳ ಆವರಣದಿಂದ ಮುಚ್ಚಲ್ಪಟ್ಟಿದ್ದರು ಎಂದು ಬ್ರಹ್ಮದೇವರಿಗೆ ಪರಮಾತ್ಮನು ಹೇಳಿರುವನು. ಇತ್ಯಾದಿ ಪ್ರಮಾಣಗಳಿಂದ ಅನಾದಿ ಕಾಲದಿಂದಲೂ ಜೀವರು ತ್ರಿಗುಣಬದ್ಧರೆಂದು ಸಿದ್ಧವಾಗುವುದು. ಹೀಗಿರಲು ದಾಸರಾಯರು "ತ್ರಿಗುಣದಿ ಬದ್ಧರನ ಮಾಡಿ" ಎಂಬ ವಾಕ್ಯದಿಂದ ಪರಮಾತ್ಮನು ಜೀವರನ್ನು ತನ್ನ ಇಚ್ಛೆಯಿಂದಲೇ ಕೆಲವರನ್ನು ಸಾತ್ವಿಕರನ್ನಾಗಿಯೂ, ಕೆಲವರನ್ನು ರಾಜಸರನ್ನಾಗಿಯೂ, ಕೆಲವರನ್ನು ತಾಮಸರನ್ನಾಗಿಯೂ ಮಾಡಿದನೆಂದು ಅರ್ಥವು ತೋರುವುದು. ಈ ಅರ್ಥವು ಸಿದ್ಧಾಂತ ವಿರುದ್ಧವಾಗುವುದರಿಂದ ಇದರರ್ಥ ಹಾಗಲ್ಲ. ಅನಾದಿ ಕಾಲದಿಂದಲೂ ಜೀವರು ತ್ರಿಗುಣ ಬದ್ಧರಾದರೂ, ಜೀವಾಚ್ಛಾದಿಕ ಪರಮಾಚ್ಛಾದಿಕ ಎಂಬ ದುಷ್ಟ ಪ್ರಕೃತಿಯ ಆವರಣದಿಂದ ಮುಚ್ಚಲ್ಪಟ್ಟು, ಸಾತ್ವಿಕರೆಂತಲೂ, ರಾಜಸರೆಂತಲೂ, ತಾಮಸರೆಂತಲೂ ಕರೆಸಿಕೊಂಡರು. ಜೀವನ ಸ್ವರೂಪವು ಜೀವರಿಗೆ ಕಾಣುವುದಿಲ್ಲ. ಅಂತಹಾ ಜೀವರಿಗೆ ಅವರವರ ಯೋಗ್ಯತಾನುಸಾರವಾದ ಕರ್ಮಗಳನ್ನು ಮಾಡಿಸಿ ಫಲವನ್ನು ಕೊಡುವುದಕ್ಕಾಗಿ ಸಾತ್ವಿಕರಿಗೆ ಪರಮಾತ್ಮನಲ್ಲಿ ಭಕ್ತಿ ಮೊದಲಾದವುಗಳನ್ನು ವೃದ್ಧಿಮಾಡಿಸುವುದಕ್ಕಾಗಿ ಸಾತ್ವಿಕ ದೇಹವಾದ ದೇವತಾ ಶರೀರವನ್ನು, ರಾಜಸರಿಗೆ ಮನುಷ್ಯ ಶರೀರವನ್ನು, ತಾಮಸರಿಗೆ ದೈತ್ಯ ಶರೀರವನ್ನು ಕೊಡಿಸಿ ಅವರವರ ಯೋಗ್ಯತಾನುಸಾರ ಕರ್ಮಗಳನ್ನು ಮಾಡಿಸುವನು. ಎಂದು ಅರ್ಥವೇ ಹೊರತು ಜೀವರನ್ನೇ ಸಾತ್ವಿಕಾದಿ ಗುಣಯುಕ್ತರನ್ನಾಗಿ ಮಾಡಿಸಿದನೆಂದರ್ಥವಲ್ಲ. ಪರಮಾತ್ಮನು ಮಾಡಿಸುವ ಕರ್ಮಗಳನ್ನು ಜೀವನು ಭಗವನ್ಮಾಯೆಯಿಂದ ಮೋಹಿತನಾಗಿ ತಾನು ಮಾಡಿದೆನೆಂದು ತಿಳಿದುಕೊಳ್ಳುವನು. ಎಲ್ಲರಲ್ಲಿಯೂ ಪರಮಾತ್ಮನಿದ್ದು ಕರ್ಮವನ್ನು ಮಾಡಿಸುವದಾದರೆ ಇದನ್ನು ಯಾರಾದರೂ ತಿಳಿಯದೇ ಇರುವರೇ, ಜ್ಞಾನಿಗಳು ಜ್ಞಾನ ಸಮಾಧಿಗಳಿಂದ ಭಗವತ್ಸ್ವರೂಪವನ್ನು ತಿಳಿಯುವರು. ಅಜ್ಞಾನಿಗಳು ಅರಿಯುವುದಿಲ್ಲ. ಇದ್ದದ್ದೇ ನಿಜವಾದರೆ ಕೆಲವರು ನೋಡುವದೇನು! ಕೆಲವರು ಕಾಣದೇ ಇರುವದೇನು? ಜೀವ ಭಿನ್ನ ಪರಮಾತ್ಮನಿದ್ದ ಮೇಲೆ ಸ್ಪಷ್ಟವಾಗಿ ಏಕೆ ಕಾಣುವುದಿಲ್ಲ. ಅಂದರೆ ಭಾಗವತ ಸಪ್ತಮ ಸ್ಕಂಧ ಮೊದಲನೆಯ ಅಧ್ಯಾಯ ೬ನೆಯ ಶ್ಲೋಕದಲ್ಲಿ "ನಿರ್ಗುಣೋಪಿ ಹ್ಯಜೋವ್ಯಕ್ತಃ" ಎಂದು ಇರುವುದು. ಇದರಲ್ಲಿರುವ ಅವ್ಯಕ್ತ ಶಬ್ದಕ್ಕೆ ವ್ಯಾಖ್ಯಾನದಲ್ಲಿ "ತರ್ಹಿಕುತೋ ವಿವಿಚ್ಯನಜ್ಞಾಯತೇ ಇತ್ಯತೋ ವ್ಯಕ್ತ ಇತಿ" ಇದರರ್ಥ ಹಾಗಾದರೆ (ಜೀವಭಿನ್ನ ಪರಮಾತ್ಮನೇ ಸರ್ವರಲ್ಲೂ ಇದ್ದು ಕರ್ಮಗಳನ್ನು ಮಾಡಿಸುತ್ತಾ ಬಾಧ್ಯನೂ ಬಾಧಕನೂ ತಾನೇ ಆದರೆ ಎಂದು ಪೂರ್ವ ಶ್ಲೋಕದ ಮೇಲೆ ಆಕ್ಷೇಪ) ಜೀವ ಭಿನ್ನನಾಗಿ ಪರಮಾತ್ಮನೇಕೆ ಕಾಣುವುದಿಲ್ಲ? ಅಂದರೆ ಅದಕ್ಕೆ ಸಮಾಧಾನ ಅವ್ಯಯ ಎಂದು ಹೇಳಿದರು. ಇದರಿಂದ ಏನು ಹೇಳಿದಂತಾಯಿತು ಅಂದರೆ, "ದಧಿಸ್ಥ ಘೃತವತ್ಕಾಷ್ಟೆ ವನ್ಹಿವಚ್ಚ ಜನಾರ್ದನಃ । ದೇಹೇಂದ್ರಿಯಾಸು ಜೀವೇಭ್ಯೋ ವಿವಿಚ್ಚ ಜ್ಞಾಯತೇ ನತು." ಮೊಸರಿನ ಒಳಗೆ ತುಪ್ಪವಿದೆ. ಎಂದು ನಾವು ತಿಳಿದಿರುವೆವು. ಮೊಸರು ನೋಡಿದ ಮಾತ್ರದಿಂದ ತುಪ್ಪವು ಕಾಣುವುದೇ? ಅದನ್ನು ಕಡೆದು ಬೆಣ್ಣೆ ತೆಗೆದು ಅದನ್ನು ಕಾಯಿಸಿದರೆ ಮಾತ್ರವೇ ತುಪ್ಪವು ಕಾಣುವುದು. ಅದರಂತೆ ಕಾಷ್ಟದಲ್ಲಿ ಬೆಂಕಿ ಇರುವುದು. ಕಾಷ್ಟವನ್ನು ನೋಡಿದರೆ ಬೆಂಕಿ ಕಾಣುವುದೇ ಇಲ್ಲ. ಕಾಷ್ಟದಿಂದ ಕಾಷ್ಟವನ್ನು ಮಥನಮಾಡಿದರೆ ಕಾಷ್ಟದಲ್ಲಿ ಅಗ್ನಿಯು ಕಾಣುವುದು. ಹಾಗೆ ಪರಮಾತ್ಮನು ಜೀವರೊಳಗಿದ್ದರೂ ಎಲ್ಲರಿಗೂ ಕಾಣುವುದಿಲ್ಲ. ಮೊಸರು ಕಡೆದು ಬೆಣ್ಣೆ ತೆಗೆದು ಕಾಯಿಸಿದಂತೆ ಯೋಗಾರೂಢರಾಗಿ ಜ್ಞಾನವೆಂಬ ಮೊಸರನ್ನು ಕಡೆದು ಪರಮಾತ್ಮನ ಮಹಿಮೆ ಎಂಬ ಬೆಣ್ಣೆಯನ್ನು ತೆಗೆಯಬೇಕು. ಹರಿಸರ್ವೋತ್ತಮ ಇತ್ಯಾದಿ ಗುರೂಪದೇಶ ಜ್ಞಾನವು ಮೊಸರಿನ ಹಾಗೆ ಇರುವುದು. ಅದರಲ್ಲಿ ಭಗವನ್ಮಹಿಮೆಯು ಶೇರಿಕ್ಕೊಂಡಿರುವುದು. ಅದನ್ನು ಮಥನ ಮಾಡಿ ತಿಳಿಯಬೇಕು. ಅಂದರೆ ಸಮಾಧಿಯಿಂದ ಭಗವದ್ಧ್ಯಾನ ಮಾಡಿ ಭಗವದನುಗ್ರಹದಿಂದ ಜೀವಭಿನ್ನನಾದ ಪರಮಾತ್ಮನನ್ನು ಕಾಣಬೇಕು. ಇದನ್ನು ಜ್ಞಾನಿಗಳು ಕಾಣುವರು. ಅಜ್ಞಾನಿಗಳು ಕಾಣುವದಿಲ್ಲವೆಂಬ ತಾತ್ಪರ್ಯ. ಕುಂಬಾರ ಚಕ್ರದಂತೆ ಸಂಸಾರದಲ್ಲಿ ತಿರಿಗಿಸುವನೆಂದು ಹೇಳಿರುವರು, ಕುಂಬಾರ ಚಕ್ರದಂತೆ ಎಂಬ ಉಪಮಾನವು, ಚಕ್ರದ ಮೇಲೆ ಒಂದು ಬಿಳಿಯ ಚುಕ್ಕೆಯನ್ನೂ, ಮತ್ತೊಂದು ಕರೆಯ ಚುಕ್ಕೆಯನ್ನೂ ಇಟ್ಟು ಚಕ್ರವನ್ನು ತಿರಿಗಿಸಿದರೆ ಬಿಳಿಯ ಚುಕ್ಕೆಯಾದ ಮೇಲೆ ಕರಿಯ ಚುಕ್ಕೆ, ಮತ್ತು ಮತ್ತು ಬಿಳುಪು, ಕಪ್ಪು ಹೇಗೆ ಬರುತ್ತಲೇ ಇರುವವೋ ಹಾಗೇ ಹುಟ್ಟುವಿಕೆ, ಬೆಳೆಯುವಿಕೆ, ಸಾಯುವಿಕೆ, ಮಧ್ಯದಲ್ಲಿ ಸುಖವಾದ ಮೇಲೆ ದುಃಖ, ದುಖವಾದ ಮೇಲೆ ಮತ್ತೆ ಸುಖ "ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ॥ ಚಕ್ರವತ್ಪರಿವರ್ತಂತೇ" ಎಂಬ ಪ್ರಮಾಣದಂತೆ ಚಕ್ರದಂತೆ ತಿರುಗುತ್ತಲೇ ಇರುವುದೆಂಬ ಭಾವ. ಈ ವಿಷಯದಲ್ಲಿಯೆ ಕುಂಬಾರ ಚಕ್ರದ ಉಪಮಾನವೆಂದು ತಿಳಿಯಬೇಕು.

ಮೇಲಿನ ಎರಡು ಪದ್ಯಗಳಲ್ಲಿ ಭಗವನ್ಮಹಿಮೆಯನ್ನು ಬ್ರಹ್ಮಾದಿಗಳೇ ಅರಿಯರು. ಪರಮಾತ್ಮನು ಸರ್ವರೊಳಗಿದ್ದು ಸ್ಥೂಲ ಕರ್ಮಗಳನ್ನು ಮಾಡಿಸುತ್ತಿದ್ದರೂ ಯಾರಿಗೂ ಪರಮಾತ್ಮನ ವ್ಯಾಪಾರವಿದೆಂದು ತಿಳಿಯಲು ಸಾಧ್ಯವಿಲ್ಲವೆಂದು ಹೇಳಿದರು. ಈಗ ಎರಡು ಪದ್ಯಗಳಿಂದ ಭಗವಂತನನ್ನು ತಿಳಿಯುವವರಾರು? ಪರಮಾತ್ಮನು ತ್ರಿವಿಧ ಜೀವರಲ್ಲಿ, ಯಾರ್ಯಾರಿಗೆ ಯಾವ ಯಾವ ಫಲವನ್ನು ಕೊಡುವನೆಂಬುವುದನ್ನು ಹೇಳುತ್ತಾರೆ:–

ವೇದಶಾಸ್ತ್ರ ವಿಚಾರಗೈದು ನಿ
ಷೇಧಕರ್ಮವ ತೊರದು ನಿತ್ಯದಿ
ಸಾಧುಕರ್ಮವ ಮಾಳ್ಪರಿಗೆ ಸ್ವರ್ಗದಲಿ ಸುಖವೀವ ॥
ಐದಿಸುವ ಪಾಪಿಗಳ ನಿರಯವ
ಖೇದಮೋದ ಮನುಷ್ಯರಿಗೆ ದು
ರ್ವಾದಿಗಳಿಗಂಧತಮದಿ ಮಹದುಃಖಗಳನುಣಿಪ ॥ ೧೭ ॥

ಪದ್ಯಾರ್ಥ:–ವೇದಶಾಸ್ತ್ರವಿಚಾರಗೈದು=ವೇದ ಶಾಸ್ತ್ರಗಳನ್ನು ಚೆನ್ನಾಗಿ ಓದಿ ಅದರ ಸಾರವನ್ನು ತಿಳಿದು, ನಿಷೇಧ ಕರ್ಮವ ತೊರೆದು=ವೇದಗಳಲ್ಲಿಯೂ, ಧರ್ಮಶಾಸ್ತ್ರಗಳಲ್ಲಿಯೂ ಯಾವ ಕರ್ಮಗಳನ್ನು ಮಾಡಬಾರದೆಂದು ನಿಷೇಧ ಮಾಡಿರುವರೋ ಆ ಕರ್ಮಗಳನ್ನು ಬಿಟ್ಟು, ನಿತ್ಯದಿ, ಸಾಧುಕರ್ಮವ ಮಾಳ್ಪರಿಗೆ=ಶಾಸ್ತ್ರಗಳಲ್ಲಿ ಮಾಡಬೇಕೆಂದು ವಿಧಿಸಿರುವ ಕರ್ಮಗಳನ್ನು ಮಾಡುವವರಿಗೆ (ಭಗವತ್ಪ್ರೀತಿಗೋಸ್ಕರ ನಿಷ್ಕಾಮುಕರಾಗಿ ಮಾಡದೆ ವಿಧಿ ಇರುವುದರಿಂದ ಮಾಡುತ್ತೇವೆಂದು ಇಷ್ಟೇ ತಿಳಿದು ಮಾಡುವವರಿಗೆ) ಸ್ವರ್ಗದಲಿ ಸುಖವೀವ, ಪಾಪಿಗಳ=ಪಾಪಿಗಳನ್ನು, ನಿರಯವ= ನರಕವನ್ನು, ಐದಿಸುವ=ಹೊಂದಿಸುವನು, ಮನುಷ್ಯರಿಗೆ ಖೇದಮೋದ=ದುಃಖ ಸುಖ ಮಿಶ್ರವನ್ನು ಕೊಡುವನು, ದುರ್ವಾದಿಗಳಿಗೆ= ಮಿಥ್ಯಾವಾದಿಗಳಿಗೆ, ಅನ್ಯಥಾ ಜ್ಞಾನಿಗಳು, ಇಂತಹವರಿಗೆ ಅಂಧಂತಮದಿ=ಅಂಧಂತಮಸ್ಸಿನಲ್ಲಿ, ಮಹದುಃಖಗಳನು, ಉಣಿಪ=ಉಣಿಸುವನು.

ತಾತ್ಪರ್ಯ:– ಈ ಪದ್ಯದಿಂದ ರಾಜಸರು ತಾಮಸರು ಇವರಿಗಾಗುವ ಗತಿಯನ್ನು ಹೇಳುತ್ತಾರೆ:– ರಾಜಸ ಸಾತ್ವಿಕರು ವೇದಶಾಸ್ತ್ರಗಳನ್ನೋದಿ ತತ್ವಾರ್ಥಗಳನ್ನು ತಿಳಿದು ವಿಧಿಯನ್ನು ಮಾಡಬೇಕು, ನಿಷೇಧವನ್ನು ಬಿಡಬೇಕೆಂದು ತಿಳಿದುಕೊಂಡು ಅದರಂತೆ ದುಷ್ಕರ್ಮಗಳನ್ನು ಬಿಟ್ಟು ಸತ್ಕರ್ಮಾನುಷ್ಠಾನ ಮಾಡುತ್ತಿದ್ದರೂ, ಸಕಲ ಕರ್ತಾ ಪರಮಾತ್ಮನು ಎಂದು, ಸರ್ವ ಸಮರ್ಪಣೆಯನ್ನು ಪರಮಾತ್ಮನಿಗೇ ಮಾಡಬೇಕು ಎಂಬ ಜ್ಞಾನವಿಲ್ಲದೆ ಸತ್ಕರ್ಮಾನುಷ್ಠಾನ ಮಾತ್ರ ಮಾಡುತ್ತಿರುವರು. ಇವರಿಗೆ ನಶ್ವರವಾದ ಸ್ವರ್ಗ ಫಲವೇ ಪ್ರಾಪ್ತಿಯು. ರಾಜಸ ತಾಮಸರು ಪಾಪಗಳನ್ನಾಚರಿಸುವರು. ಇಂತಹ ಸಾಮಾನ್ಯಪಾಪಿಗಳಿಗೆ ನಶ್ವರವಾದ ನರಕ ದುಃಖವು ಪ್ರಾಪ್ತವಾಗುವುದು. ರಾಜಸ ರಾಜಸರು ಮನುಷ್ಯರು. ಇವರು ಸುಖ ದುಃಖ ಮಿಶ್ರವಾದ ಫಲವನ್ನೇ ಹೊಂದುವರು. ಅಂತು ಪ್ರಾಯಶಃ ತ್ರಿವಿಧರಾದ ರಾಜಸರಿಗೂ ಸುಖ ದುಃಖ ಮಿಶ್ರವಾದ ಫಲವೇ ಹೊರತು ಶಾಶ್ವತವಾದ ಸುಖವೇ ಆಗಲಿ, ಶಾಶ್ವತವಾದ ದುಃಖವೇ ಆಗಲಿ ಇಲ್ಲವೆಂಬ ತಾತ್ಪರ್ಯ. ಮಿಥ್ಯಾವಾದಿಗಳು, ಅನ್ಯಥಾ ಜ್ಞಾನಿಗಳು ಇವರೆಲ್ಲರೂ ತಾಮಸ ಜೀವರೆಂದು ತಿಳಿಯಬೇಕು. ಇವರಿಗೆ ಶಾಶ್ವತ ದುಃಖಕರವಾದ ಅಂಧಂತಮಸ್ಸೇ ಪ್ರಾಪ್ತವಾಗುವುದು.

ಅವತಾರಿಕೆ:– ನಿಷ್ಕಾಮ ಭಕ್ತಿಯಿಂದ ಅಪ್ರಾಕೃತ ಸ್ವರೂಪನಾದ ಪರಮಾತ್ಮನನ್ನು ಭಜಿಸಿದವರಿಗೆ ಮುಕ್ತಿ ದೊರೆಯುವುದೆಂದು ಹೇಳುತ್ತಾರೆ:–

ನಿರ್ಗುಣೋಪಾಸಕಗೆ ಗುಣಸಂ
ಸರ್ಗದೋಷಗಳೀಯದಲಪ
ವರ್ಗದಲಿ ಸುಖವಿತ್ತು ಪಾಲಿಪನು ಕೃಪಾಸಾಂದ್ರ ॥
ದುರ್ಗಮನು ಎಂದೆನಿಪ ತ್ರೈವಿ
ದ್ಯರ್ಗೆ ತ್ರಿಗುಣಾತೀತ ಸಂತತ
ಸ್ವರ್ಗ ಭೂ ನರಕದಲಿ ಸಂಚಾರವನೆ ಮಾಡಿಸುವ ॥ ೧೮ ॥

ಪದ್ಯಾರ್ಥ:– ನಿರ್ಗುಣೋಪಾಸಕರಿಗೆ=ಶ್ರೀಹರಿಯು ಪ್ರಾಕೃತ ಗುಣಸಂಬಂಧವಿಲ್ಲದವನೆಂದು ತಿಳಿದು ಉಪಾಸನೆ ಮಾಡುವವನಿಗೆ, ಗುಣಸಂಸರ್ಗದೋಷಗಳ=ಉಪಾಸಕ ಜೀವನಿಗಿರುವ ಗುಣಸಂಬಂಧ ಕೃತ ಅಜ್ಞಾನ ದೋಷಗಳನ್ನು, ಈಯದಲೆ= ಕೊಡದಲೆ (ಪರಿಹರಿಸಿ) ಕೃಪಾಸಾಂದ್ರ=ದಯಾಳುವಾದ ಶ್ರೀಹರಿಯು, ಅಪವರ್ಗದಲಿ=ಮುಕ್ತಿಯಲ್ಲಿ, ಸುಖವಿತ್ತು ಪಾಲಿಪನು. ತ್ರೈವಿದ್ಯರ್ಗೆ=ತ್ರಿವಿದ್ಯ, ಋಗ್, ಯಜುಸ್ಸಾಮ ಎಂಬ ಮೂರು ವೇದಗಳನ್ನು ಪಠಿಸಿ ಸ್ಥೂಲ ರೀತಿಯಿಂದ ತೋರುವ ಅರ್ಥವನ್ನು

ಪರಮಾರ್ಥವೆಂದು ತಿಳಿದು ಸ್ವರ್ಗಾದಿ ನಶ್ವರ ಫಲಗಳೇ ವೇದೋಕ್ತಗಳೆಂತಲೂ, ಅವುಗಳನ್ನು ಕೊಡುವ ನಾನಾ ದೇವತೆಗಳನ್ನು ಪೂಜಿಸುವುದೇ ಧರ್ಮವೆಂತಲೂ, ವೇದಗಳಿಗೆ ಬೇರೆ ತಾತ್ಪರ್ಯವಿಲ್ಲವೆಂತಲೂ ಭಾವಿಸಿ ವೇದೋಕ್ತ ಸ್ಥೂಲಕರ್ಮಗಳನ್ನು ಅನುಷ್ಠಿಸುವವರು ತ್ರೈವಿದ್ಯರು. ಅಂತಹವರಿಗೆ ಶ್ರೀಮನ್ನಾರಾಯಣನು ದುರ್ಗಮನು=ಸುಲಭನಲ್ಲ, ಎಂದೆನಿಪ, ಸಂತತ=ಯಾವಾಗಲು ತ್ರಿಗುಣಾತೀತ= ಸ್ವಯಂ ತಾನು ಈ ಮೂರು ಗುಣಗಳ ಸಂಬಂಧವಿಲ್ಲದವನು. ಅತ್ರೈವಿದ್ಯರ್ಗೆ=ತ್ರಿಗುಣ ಕಾರ್ಯಗಳಿಗಿರುವ ಸ್ವರ್ಗ ಭೂಮಿ ನರಕಸ್ಥಾನಗಳಲ್ಲಿನ ಸುಖದುಃಖ ಭೋಗಗಳನ್ನು ಉಣಿಸುತಿಪ್ಪನು, ಅವರವರ ಅನುಷ್ಠಾನ ಭೇದಗಳನ್ನನುಸರಿಸಿ, ಸ್ವರ್ಗ ಭೂ ನರಕದಲಿ ಸಂಚಾರವನೆ ಮಾಡಿಸುವ.

ತಾತ್ಪರ್ಯ:– ಈ ತ್ರೈವಿದ್ಯರುಗಳಲ್ಲಿ ಕೆಲವರು ಸತ್ವಭಾಗ ಅಧಿಕವಾಗುಳ್ಳವರು. ಕೆಲವರು ರಜೋಭಾಗ ಅಧಿಕಭಾಗವುಳ್ಳವರು. ಮತ್ತು ಕೆಲವರು ತಮೋಭಾಗ ಅಧಿಕವಾಗುಳ್ಳವರು. ಹೀಗೆ ಅಧಿಕಾಂಶವಾದ ಸತ್ವಾದಿ ಗುಣಗಳನ್ನು ಅನುಸರಿಸಿ ವಿವಿಧ ದೇವತೆಗಳನ್ನು ಪೂಜಿಸುವ ಕಾರಣ ಸ್ವರ್ಗ ಭೂಮಿ ನರಕಗಳಲ್ಲಿ ಫಲಾನುಭವ ಬರುವುದು. ಸಾತ್ವಿಕ ಮೊದಲಾದ ಮೂವರು ಹೊರತು ತ್ರಿಗುಣಾತೀತರು (ನಿರ್ಗುಣರು) ಎಂದು ಬೇರೆ ಇರುವರು. ಸಾತ್ವಿಕರು ಮುಕ್ತಿಯೋಗ್ಯರು. ಆದರೆ ಅವರಿಗೆ ಇಷ್ಟು ಕಲ್ಪಸಾಧನವೆಂತಲೂ, ಕೆಲವರಿಗೆ ಇಷ್ಟು ಜನ್ಮಗಳು ಸಾಧನವಾಗಬೇಕೆಂತಲೂ, ತ್ರಿವಿಧರಿಗೂ ನಿಯಮವುಂಟು. ಅದರಲ್ಲಿ ಸಾತ್ವಿಕರು ತಮ್ಮ ಸಾಧನವಾಗುವವರೆಗೂ ಸತ್ವಗುಣಸಂಬಂಧದಲ್ಲಿರುವರು. ಸಾಧನಪೂರ್ತಿಯಾದ ಕೂಡಲೆ ಅವರೆ ನಿರ್ಗುಣರು (ಗುಣಾತೀತರು) ಆಗುವರು. ಸತ್ವಗುಣ ಸಂಬಂಧವಿರುವವರೆಗೂ ಸ್ವರ್ಗಸುಖವನ್ನೋ, ರಾಜ್ಯವನ್ನೋ, ಭೋಗವನ್ನೋ ಅಪೇಕ್ಷಿಸುವರು. ನಿರ್ಗುಣರಾದ ಮೇಲೆ "ಸಾಲೋಕ್ಯ ಸಾರ್ಷ್ಟಿ ಸಾಮೀಪ್ಯ ಸಾರೂಪ್ಯೈಕತ್ವಮಿತ್ಯುತದೀಯಮಾನಂನಗೃಹ್ಣಂತಿ ವಿನಾಮತ್ಸೇವನಂಜನಾಃ॥" ಸಾಲೋಕ್ಯಾದಿ ೫ ವಿಧ ಮುಕ್ತಿಯನ್ನೂ ಸಹ ಬೇಡರು ಎಂದು ಪರಮಾತ್ಮನೇ ಹೇಳಿರುವನು. ಈ ಜ್ಞಾನವು ಗುಣಾತೀತರಿಗೆ ಮಾತ್ರ ಹುಟ್ಟುವುದು. ಇದೇ ಅರ್ಥವನ್ನೇ ದಾಸರಾಯರು ಈ ಪದ್ಯದಿಂದ ಹೇಳಿರುತ್ತಾರೆ. ಮೇಲೆ ಹೇಳಿದಂತೆ ತ್ರಿಗುಣಾತೀತರಾದ ಸಾಧನ ಪೂರ್ತಿಯಾದ ಸಾತ್ವಿಕರಿಗೆ ಗುಣಸಂಬಂಧ ದೋಷಗಳೆಂದರೆ, ಸ್ವರ್ಗಕ್ಕೆ ಹೋಗಿ ಕೆಲವು ಕಾಲ ಸುಖಾನುಭವ ಮಾಡಿ ಮತ್ತು ಭೂಮಿಯಲ್ಲಿ ಹುಟ್ಟುವುದು. ಅಲ್ಲಿಯೂ ಅನಿತ್ಯ ಸುಖವನ್ನನುಭವಿಸುವುದು; ಇವೇ ಮೊದಲಾದ ದೋಷಗಳನ್ನುಂಟು ಮಾಡಿಸದೆ ಮುಕ್ತಿಯನ್ನು ಕೊಟ್ಟು ಉದ್ಧರಿಸುವನು. ಇದಲ್ಲದೆ ಇನ್ನು ಸಾಧನ ಪೂರ್ತಿಯಾಗದಿರುವ ಸಾತ್ವಿಕರು ಕೆಲವು ಕಾಲ ಸಾಧನೆ ಪೂರ್ತಿಮಾಡಿಕೊಳ್ಳಲು ಅವರ ಸುಖಗಳೆಲ್ಲವನ್ನೂ ಸ್ವರ್ಗದಲ್ಲಿಯೇ ಅನುಭವಿಸುವರು. ಮಧ್ಯಮ ಭಕ್ತರಾದ ಮನುಷ್ಯೋತ್ತಮರು "ವಿಷ್ಣೋಸ್ತುಮಧ್ಯಮೋಭಕ್ತೋ ನಿರಯಂನೈವ ಗಚ್ಛತಿ" ಎಂಬ ಏಕಾದಶ ಸ್ಕಂಧದ ತಾತ್ಪರ್ಯಾನುಸಾರವಾಗಿ ಎಂದಿಗೂ ನರಕಕ್ಕೆ ಹೋಗುವುದಿಲ್ಲ. ಭೂಮಿಯಲ್ಲಿಯೇ ಸುಖವನ್ನು ಅನುಭವಿಸುವರು. ಕಾಲಾಂತರದಲ್ಲಿ ಇವರಿಗೂ ಮುಕ್ತಿಯಾಗುವುದು. ರಾಜಸರು ಭೂಮಿಯಲ್ಲಿ ದುಃಖಮಿಶ್ರವಾದ ಸುಖವನ್ನೇ ಅನುಭವಿಸುತ್ತಿರುವರು. ತಾಮಸರು ಪ್ರಾಯಶಃ ನರಕ ವಾಸಿಗಳು. ಕೆಲವು ಕಾಲ ಭೂಮಿಯಲ್ಲಿ ದುಃಖ, ಕೆಲವು ಕಾಲ ಸುಖ ಹೀಗೆ ಅನುಭವಿಸುತ್ತಾ ಇರುವರು. ಸಾತ್ವಿಕರಲ್ಲಿ ನಿರ್ಗುಣರು ಹೇಗೆ ಉತ್ತಮರೋ ಹಾಗೆ ತಾಮಸರಲ್ಲಿ ನಿರ್ಗುಣೋಪಾಸನೆ ಎಂದರೆ ಪರಮಾತ್ಮನು ನಿರ್ಗುಣನು, ನಿರಾಕಾರನು ಎಂದು ಉಪಾಸನೆಯನ್ನು ಮಾಡುವವರೆಂದು ಅರ್ಥ. ಈ ಉಪಾಸನೆಯನ್ನು ಮಾಡಬಾರದೆಂದು ಶ್ರೀಮದಾಚಾರ್ಯರು ಖಂಡಿಸಿರುವರು. ಇದರಲ್ಲಿಯೂ ಅನ್ಯಥೋಪಾಸಕರಿಗೆ ಅಂಧಂತಮಸ್ಸೇ ಪ್ರಾಪ್ತಿ ಎಂದು ಹೇಳಿರುವರು. ಅನ್ಯಥೋಪಾಸಕರೆಂದರೆ ನಾನೇ ಬ್ರಹ್ಮನೆಂದು ಉಪಾಸನೆ ಮಾಡುವವರೆಂದರ್ಥ. ಇದೇ ತಮಸ್ಸಿಗೆ ಸಾಧನವು.

ಅವತಾರಿಕೆ:– ಈ ತ್ರಿವಿಧ ಜೀವರಲ್ಲಿ ಪರಮಾತ್ಮನಿರುವುದರಿಂದ ಪರಮಾತ್ಮನಿಗೂ ಸುಖದುಃಖ ಲೇಪಗಳುಂಟೋ ಏನೋ ಎಂಬ ಮಂದಬುದ್ಧಿಗಳ ಶಂಕೆಯನ್ನು ಈ ಮುಂದಿನ ಪದ್ಯದಿಂದ ಪರಿಹರಿಸುತ್ತಾರೆ.

ಮೂವರೊಳಗಿದ್ದರು ಸರಿಯೆ ಸುಖ
ನೋವುಗಳು ಸಂಬಂಧವಾಗವು
ಪಾವನಕೆ ಪಾವನ ಪರಾತ್ಪರ ಪೂರ್ಣ ಸುಖವನಧಿ ॥
ಈವನರುಹಭವಾಂಡದೊಳು ಸ್ವಕ
ಳೇವರ ತದಾಕಾರಮಾಡಿ ಪ
ರಾವರೇಶ ಚರಾಚರಾತ್ಮಕ ಲೋಕಗಳ ಪೊರೆವ ॥ ೧೯ ॥

ಪದ್ಯಾರ್ಥ:–ಮೂವರೊಳಗೆ=ಸಾತ್ವಿಕ ರಾಜಸ ತಾಮಸ ಜೀವರೊಳಗೆ, ಇದ್ದರು ಸರಿಯೆ ಸುಖನೋವುಗಳು= ಸುಖದುಃಖಗಳು, ಸಂಬಂಧವಾಗವು=ಪರಮಾತ್ಮನಿಗೆ ಲೇಪವಾಗವು, ಪಾವನಕೆ ಪಾವನ=ಏಕೆಂದರೆ ಆತನು ಪರಮ ಪವಿತ್ರಗಳೆಂಬ ವಸ್ತುಗಳಿಗೂ ಪವಿತ್ರತೆಯನ್ನು ಕೊಡುವವನು, ಪರಾತ್ಪರ,=ಜಗತ್ತಿಗೆ ಉತ್ತಮರೆಂಬ ರಮಾ ಬ್ರಹ್ಮಾದಿಗಳಿಗಿಂತ ಅತಿ ಉತ್ತಮನು, ಪೂರ್ಣ

ಸುಖವನಧಿ=ಪೂರ್ಣಸುಖ ಸಮುದ್ರನು, ಈ ವನರುಹಭವಾಂಡದೊಳು=ವನರುಹ=ಕಮಲ, ಅದರಲ್ಲಿ ಭವ=ಉತ್ಪನ್ನರಾದವರು ಬ್ರಹ್ಮ, ಅಂಡವೆಂದರೆ=ಆ ಹೆಸರುಳ್ಳ ಬ್ರಹ್ಮಾಂಡದೊಳಗೆ ಸ್ವಕಳೇವರ, ತದಾಕಾರ ಮಾಡಿ=ತನ್ನ ಶರೀರವೆಂದೆನಿಸುವ ಜಗತ್ತನ್ನು ತತ್ತದಾಕಾರದಿಂದ (ನಾನಾ ರೂಪಗಳಿಂದ) ಸೃಜಿಸಿ, ಪರಾವರೇಶ= ಉತ್ತಮರಾದ ರಮಾ ಮೊದಲು ಅಲ್ಪರಾದ ತೃಣಜೀವ ಪರಿಯಂತ ಸರ್ವರಿಗೂ ನಿಯಾಮಕನಾದ, ಚರಾಚರಾತ್ಮಕ=ಜಂಗಮ ಸ್ಥಾವರಗಳಲ್ಲಿ ಅಂತರ್ಯಾಮಿಯಾಗಿದ್ದು ಲೋಕಗಳ, ಪೊರೆವ=ಕಾಯುವನು.

ತಾತ್ಪರ್ಯ:– ಶ್ರೀಪರಮಾತ್ಮನು ಬ್ರಹ್ಮಾದಿ ಸ್ಥಾವರಾಂತವಾದ ಸಕಲ ಪ್ರಾಣಿಗಳಿಗೂ ಸ್ವಾಮಿಯು; ಪೂರ್ಣ ಸುಖಸಮುದ್ರನು. ಜಲಧಿಯೆಂದು ಸಮುದ್ರನಿಗೆ ಹೆಸರುಂಟು. ವನಧಿ ಎಂದರೂ ಅದೇ ಅರ್ಥ. ಹೇಗೆಂದರೆ:– "ವನಂಭಾಸ್ಯಪ್ಸ್ಕಾನನೇ" ಎಂಬ ಕೋಶದಿಂದ ವನ ಶಬ್ದವು ಅಗ್ನಿ ಮೊದಲಾದವುಗಳಿಂದ ಹುಟ್ಟುವ ಪ್ರಕಾಶದಲ್ಲಿಯೂ, ನೀರಿನಲ್ಲೂ, ವನದಲ್ಲೂ ಬರುವುದು. ಆದ್ದರಿಂದ ಪೂರ್ಣ ಸುಖವನಧಿ ಅಂದರೆ ಪೂರ್ಣ ಸುಖಜಲಧಿ ಎಂದೇ ಅರ್ಥವನ್ನು ತಿಳಿಯಬೇಕು. ವನರುಹ ಭವಾಂಡವೆಂಬ ಶಬ್ದಕ್ಕೂ ಇದೇ ಅರ್ಥ. ಕಮಲಭವ ಅಂದರೆ ಕಮಲದಿಂದ ಹುಟ್ಟಿದವರು ಬ್ರಹ್ಮ. ಆ ಹೆಸರುಳ್ಳ ಅಂಡ ಅಂದರೆ ಬ್ರಹ್ಮಾಂಡವೆಂದರ್ಥ. ಇಂತಹ ಬ್ರಹ್ಮಾಂಡದಲ್ಲಿ ಸ್ಥಾವರ ಜಂಗಮ ಪ್ರಾಣಿಗಳ ಆಕಾರಗಳನ್ನು ತಾನು ಧರಿಸಿ ಸಕಲರಲ್ಲಿಯು ಇದ್ದು ಎಲ್ಲರನ್ನೂ ರಕ್ಷಿಸುವನು.

ಅವತಾರಿಕೆ:– ಆದ್ದರಿಂದ ಮನುಷ್ಯನು ತನ್ನ ಸ್ವತಂತ್ರ ಕರ್ತೃತ್ವಾಭಿಮಾನವನ್ನು ಬಿಟ್ಟು ಪರಮಾತ್ಮನೇ ಸರ್ವ ಕರ್ತೃವೆಂದು ನಿಶ್ಚಯಿಸಿ ಧ್ಯಾನಿಸಿದರೆ ಸರ್ವಪ್ರಕಾರದಿಂದಲೂ ಅವನನು ರಕ್ಷಿಸುವನೆಂದು ಹೇಳುತ್ತಾರೆ:–

ಅನಿಮಿತ್ತ ನಿರಂತರಸ್ವಾ
ಧೀನಕರ್ತೃತ್ವವನು ಮರದೇ
ನುಮಾಡುವುದೆಲ್ಲ ಹರಿ ಒಳಹೊರಗೆ ನೆಲಸಿದ್ದು ॥
ತಾನೆ ಮಾಡುವನೆಂದರಿದು ಮ
ದ್ದಾನೆಯಂದದಿ ಸಂಚರಿಸು ಪವ
ಮಾನವಂದಿತ ಒಂದರಕ್ಷಣ ಬಿಟ್ಟಗಲನಿನ್ನ ॥ ೨೦ ॥

ಪದ್ಯಾರ್ಥ:–ಅನಿಮಿತ್ತ=ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ, ನಿರಂತರ= ನಿತ್ಯದಲ್ಲಿಯೂ, ಸ್ವಾಧೀನ ಕರ್ತೃತ್ವವನು ಮರೆದು=ಸ್ವತಂತ್ರ ಕರ್ತೃತ್ವವನ್ನು ಮರೆತು, ಏನೇನು ಮಾಡುವದೆಲ್ಲ=ಮಾಡುವ ಎಲ್ಲಾ ಕಾರ್ಯಗಳನ್ನೂ, ಹರಿ ಒಳಹೊರಗೆ ನೆಲಸಿದ್ದು=ಹರಿಯೇ ಮಾಡುವನೆಂದು, ಅರಿದು=ತಿಳಿದು, ಮದ್ದಾನೆಯಂದದಿ=ಭಯವಿಲ್ಲದೆ ಹರ್ಷದಿಂದ, ಸಂಚರಿಸು, ಪವಮಾನವಂದಿತ=ಮುಖ್ಯಪ್ರಾಣರಿಂದ ಪೂಜಿತನಾಗಿ ಅವರಲ್ಲಿ ನೆಲಸಿರುವ ಶ್ರೀಹರಿಯು ನಿನ್ನ ಒಂದರಕ್ಷಣ ಬಿಟ್ಟಗಲ=ಎಡಬಿಡದೆ ರಕ್ಷಿಸುವನೆಂದರ್ಥ.

ತಾತ್ಪರ್ಯ:– ಪವಮಾನವಂದಿತ ಎಂಬ ವಿಶೇಷಣದಿಂದ ಪರಮಾತ್ಮನು ಎಲ್ಲರಲ್ಲಿಯೂ ಮುಖ್ಯ ಪ್ರಾಣಾಂತರ್ಯಾಮಿಯಾಗಿದ್ದು ಅವರ ದ್ವಾರ ಸಕಲ ವ್ಯಾಪಾರವನ್ನು ಮಾಡಿಸುವನೆಂದು ತಿಳಿದು ಭಜಿಸುವುದು ಅವಶ್ಯಕವೆಂದು ಸೂಚಿಸುತ್ತಾರೆ.

ಅವತಾರಿಕೆ:– ಮೇಲೆ ಹೇಳಿದಂತೆ ನಾವು ಮಾಡುವ ಸಕಲ ಕ್ರಿಯೆಗಳೂ ನಮ್ಮ ಹೃದ್ಗತನಾದ ಬಿಂಬರೂಪಿಯ ಕರ್ತೃಕವೆಂದು ಆ ಪರಮಾತ್ಮನನ್ನು ಭಜಿಸದೆ ಬಾಹ್ಯ ಪೂಜಾ ಏನು ಮಾಡಿದರೂ ಫಲವಿಲ್ಲವೆಂದು ಹೇಳುತ್ತಾರೆ.

ಹಲವು ಕರ್ಮವ ಮಾಡಿ ದೇಹವ
ಬಳಲಿಸದೆ ದಿನದಿನದಿ ಹೃದಯಾs
ಮಲ ಸದನದಿ ವಿರಾಜಿಸುವ ಹರಿಮೂರ್ತಿಯನೆ ಭಜಿಸು ॥
ತಿಳಿಯದೀ ಪೂಜಾಪ್ರಕರಣವ
ಫಲಸುಪುಷ್ಪಾಗ್ನ್ಯೋದಕ ಶ್ರೀ
ತುಳಸಿದಳವರ್ಪಿಸಲು ಒಪ್ಪನು ವಾಸುದೇವಸದಾ ॥ ೨೧ ॥

ಪದ್ಯಾರ್ಥ:– ಹಲವು ಕರ್ಮವ=ನಾನಾ ವಿಧವಾದ ವ್ರತೋಪವಾಸ ನಿಯಮಾದಿ ಕರ್ಮಗಳನ್ನು ಮಾಡಿ, ದೇಹವ ಬಳಲಿಸದೆ=ದೇಹಕ್ಕೆ ಆಯಾಸವನ್ನು ಕೊಟ್ಟು ನೋಯಿಸದೆ, ದಿನದಿನದಿ=ನಿತ್ಯದಲ್ಲಿಯೂ, ಹೃದಯಾಮಲಸದನದಿ=ಹೃದಯಕಮಲವೆಂಬ ನಿರ್ಮಲವಾದ ಮನೆಯಲ್ಲಿ, ವಿರಾಜಿಸುವ=ಪ್ರಕಾಶಿಸುವ ಹರಿಮೂರ್ತಿಯನೆ=ಭಗವದ್ರೂಪಗಳನ್ನು ಗುರುಗಳು ಪೇಳಿದಂತೆ ತಿಳಿದು

ಭಜಿಸು, ಈ ಪೂಜಾಪ್ರಕರಣವ ತಿಳಿಯದೆ=ಈ ರೀತಿಯಲ್ಲಿ ಪೂಜಿಸುವುದನ್ನು ಅರಿಯದೆ ಫಲ, ಸುಪುಷ್ಪ, ಅರ್ಘ್ಯೋದಕ, ಶ್ರೀ ತುಳಸಿದಳಗಳಿಂದ, ಸದಾ= ಹಗಲಿರುಳು, ಫಲ ಸುಪುಷ್ಪಾದಿಗಳಿಂದ, ಅರ್ಪಿಸಲು, ವಾಸುದೇವನು, ಒಪ್ಪನು=ಅದನ್ನು ಪೂಜೆ ಎಂದು ವಾಸುದೇವನು ಕೈಕೊಳ್ಳನು.

ತಾತ್ಪರ್ಯ:– ನಾನಾ ವಿಧವಾದ ವ್ರತಗಳು, ಉಪವಾಸಗಳನ್ನು ಮಾಡಿ ದೇಹವನ್ನು ಶುಷ್ಕ ಮಾಡಿ ಮುಕ್ತಿಗೆ ಸಾಧನಭೂತವಾದ ಈ ಶರೀರವನ್ನು ಕೆಡಿಸಿಕೊಳ್ಳುವುದರಿಂದ ಫಲವಿಲ್ಲ. ನಿನ್ನ ಹೃದಯಕಮಲ ಮಂದಿರದಲ್ಲಿ ಶೋಭಿಸುವ ಬಿಂಬ ಮೂರ್ತಿಯಾದ ಶ್ರೀಹರಿಯೇ ಸರ್ವಕರ್ತನೆಂದು ತಿಳಿದು ಸರ್ವಸಮರ್ಪಣೆಯಿಂದ ಭಜಿಸು; ಇದೇ ಭಗವತ್ಪೂಜೆಯು. ಈ ಪೂಜಾಪ್ರಕರಣವನ್ನು ತಿಳಿಯದೆ ಬರೇ ಹುವ್ವು, ತುಳಸಿ, ಗಂಧ, ಮೊದಲಾದ ಬಾಹ್ಯ ಪೂಜೆಯಿಂದ ಪರಮಾತ್ಮನು ಪ್ರೀತನಾಗುವುದಿಲ್ಲ. ಈವಾಕ್ಯದಿಂದ ಬಾಹ್ಯಪೂಜಾ ಮಾಡಬಾರದೆಂಬ ಅಭಿಪ್ರಾಯವಲ್ಲ. ಯಾವ ಕಾರ್ಯವನ್ನು ಮಾಡಿದರೂ ಪರಮಾತ್ಮನೇ ಕರ್ತಾ ಎಂಬ ಜ್ಞಾನವಿಲ್ಲದೆ ನಾನು ಪೂಜೆ ಮಾಡಿದೆನು; ಹುವ್ವು, ತುಳಸಿ ತಂದು ಲಕ್ಷಾರ್ಚನೆ ಮಾಡಿದೆನು, ವಿಷ್ಣುಪಂಚಕೋಪವಾಸ ಮಾಡಿರುತ್ತೇನೆ. ಭೀಷ್ಮಪಂಚಕ ಮಾಡಿರುತ್ತೇನೆಂದು ಸ್ವತಂತ್ರಕರ್ತೃತ್ವದಿಂದಾ ಮಾಡಿದುದಾಗಿ ಭಾವಿಸಿದರೆ ಮಾಡಿದುದೆಲ್ಲವೂ ನಿಷ್ಫಲವೇ ಹೊರತು ಭಗವತ್ಪ್ರೀತಿ ಆಗುವುದಿಲ್ಲ.

ಅವತಾರಿಕೆ:–ಈ ಪಂಚಭೂತಿಕ ಶರೀರದಲ್ಲಿನ ಪಂಚಭೂತಗಳಲ್ಲಿಯೂ ಅನಿರುದ್ಧಾದಿ ೫ ರೂಪಗಳಿಂದ ಪರಮಾತ್ಮನಿರುವನೆಂದು ಹೇಳುತ್ತಾರೆ.

ಧರಣಿ(ಯಲ್ಲಿ) ನಾರಾಯಣನು ಉದಕದಿ
ತುರಿಯನಾಮಕ ನಗ್ನಿಯೊಳುಸಂ
ಕರ್ಷಣಾಹ್ವಯ ವಾಯುಗ ಪ್ರದ್ಯುಮ್ನನನಿರುದ್ಧ ॥
ಇರುತಿಹನಾಕಾಶದೊಳು ಮೂ
ರೆರಡುರೂಪವ ಧರಿಸಿ ಭೂತಗ
ಕರೆಸುವನು ತನ್ನಾಮರೂಪದಿ ಪ್ರಜರಸಂತೈಪ ॥ ೨೨ ॥

ಪದ್ಯಾರ್ಥ:– ಧರಣಿ=ಪೃಥ್ವೀತತ್ವದಲ್ಲಿ ನಾರಾಯಣನು, ಉದಕದಿ=ಅಪ್ಪು ತತ್ವದಲ್ಲಿ, ತುರಿಯನಾಮಕನು= ವಾಸುದೇವಮೂರ್ತಿಯು, ಅಗ್ನಿಯೊಳು=ತೇಜಸ್ತತ್ವದಲ್ಲಿ ಸಂಕರ್ಷಣಾಹ್ವಯ=ಸಂಕರ್ಷಣ ನಾಮಕನು, ವಾಯುಗ=ವಾಯುತತ್ವದಲ್ಲಿ, ಇರುವವನು, ಪ್ರದ್ಯುಮ್ನನು, ಆಕಾಶದೊಳು, ಅನಿರುದ್ಧ ಇರುತಿಹನು, ಮೂರೆರಡುರೂಪವ=ಹೀಗೆ ೩+೨=೫ ರೂಪಗಳನ್ನು ಸ್ವೀಕರಿಸಿ, ಭೂತಗ=ಪಂಚಭೂತಗಳಲ್ಲಿ, ತನ್ನಾಮರೂಪದಿ= ಆಯಾರೂಪದಿಂದಿದ್ದು, ಆಯಾಹೆಸರಿಂದ ಕರೆಸುವನು. ಧರಣಿ, ಉದಕ, ಅನಲ, ಆಕಾಶ ಎಂಬ ನಾಮಗಳಿಂದಲೇ ಕರೆಸಿಕೊಂಡು, ಪ್ರಜರ ಸಂತೈಪ.

ತಾತ್ಪರ್ಯ:–ಪರಮಾತ್ಮನ ಈ ವಿಭೂತಿಯನ್ನು ತಿಳಿದ ಜನರನ್ನು ವಿಶೇಷ ಕರುಣದಿಂದ ರಕ್ಷಿಸುವನು.

ಅವತಾರಿಕೆ:– ಮೇಘಾದಿ ೫ ರಲ್ಲಿ ನಾರಾಯಣಾದಿ ೫ ರೂಪಗಳನ್ನು ತಿಳಿಯಬೇಕೆಂದು ಹೇಳುತ್ತಾರೆ.

ಘನಗತನು ತಾನಾಗಿ ನಾರಾಯ
ಣನು ತನ್ನಾಮದಲಿ ಕರೆಸುವ
ವನದಗರ್ಭೋದಕದಿನೆಲಸಿಹ ವಾಸುದೇವಾಖ್ಯ ॥
ಧ್ವನಿಸಿಡಿಲುಸಂಕರ್ಷಣನು ಮಿಂ
ಚಿನೊಳು ಶ್ರೀಪ್ರದ್ಯುಮ್ನವೃಷ್ಟಿಯ
ಹನಿಗಳೊಳಗನಿರುದ್ಧನಿಪ್ಪನು ವರ್ಷನೆಂದೆನಿಸಿ ॥ ೨೩ ॥

ಪದ್ಯಾರ್ಥ:– ನಾರಾಯಣನು, ಘನಗತನು ತಾನಾಗಿ=ಮೇಘದೊಳಗೆ ತಾನಿದ್ದು, ತನ್ನಾಮದಲಿ=ಮೇಘವೆಂಬ ಹೆಸರಿನಿಂದ, ಕರೆಸುವ=ಕರೆಸಿಕೊಳ್ಳುವನು, ವನದ ಗರ್ಭೋದಕದಿ =ಮೇಘದಲ್ಲಿರುವ ನೀರಿನಲ್ಲಿ, (ವನದ=ಉದಕಪ್ರದ ನಾಮದಿ=ಮೇಘದಲ್ಲಿರುವ

ಉದಕದಲ್ಲಿ ಇರುವವನು ವಾಸುದೇವನು) ವನಜನಾಮಕನಾಗಿ ಮೇಘದಲ್ಲಿರುವ ಉದಕದಲ್ಲಿ, ವಾಸು ದೇವಾಖ್ಯ= ವಾಸುದೇವನೆಂಬ ಹೆಸರುಳ್ಳ ಶ್ರೀಹರಿಯು, ನೆಲಸಿಹ=ವಾಸವಾಗಿರುವನು, ಧ್ವನಿ ಸಿಡಿಲು=ಸಿಡಿಲು ಗುಡುಗುಗಳಲ್ಲಿ ಸಂಕರ್ಷಣನು, ಮಿಂಚಿನೊಳು, ಶ್ರೀಪ್ರದ್ಯುಮ್ನ, ವೃಷ್ಟಿಯ ಹನಿಗಳೊಳಗೆ=ಮಳೆ ಹನಿಗಳೊಳಗೆ ವರ್ಷವೆಂದೆನಿಸಿ, ಅನಿರುದ್ಧನು, ಇಪ್ಪನು=ಇರುವನು.

ತಾತ್ಪರ್ಯ:– ಮೇಘದಲ್ಲಿ ನಾರಾಯಣನು, ಮೇಘಗರ್ಭದಲ್ಲಿರುವ ಉದಕದಲ್ಲಿ ವಾಸುದೇವನು, ಗುಡುಗು ಸಿಡಿಲುಗಳಲ್ಲಿ ಸಂಕರ್ಷಣನು, ಮಿಂಚಿನೊಳಗೆ ಪ್ರದ್ಯುಮ್ನನು, ಮಳೆಯ ಹನಿಗಳಲ್ಲಿ ಅನಿರುದ್ಧನು, ಹೀಗೆ ೫ ರೂಪಗಳಿಂದ ಮೇಘ ಮಿಂಚು ಮೊದಲಾದವುಗಳಲ್ಲಿ ಮೇಘಾದಿ ರೂಪಗಳಿಂದಲೂ ಅದೇ ಹೆಸರಿನಿಂದಲೂ ಶ್ರೀಹರಿಯು ವಾಸವಾಗಿರುವನು.

ಅವತಾರಿಕೆ:– ಈ ರೀತಿಯಲ್ಲಿ ಪರಮಾತ್ಮನು ನಮ್ಮ ಒಳಗೂ ಹೊರಗೂ ಇದ್ದು ಸಂರಕ್ಷಿಸುವುದನ್ನು ಅರಿಯದೆ ಮಂದಮತಿಗಳು ಸ್ವಕರ್ತೃತ್ವಾಭಿಮಾನದಿಂದ ವೃಥಾ ಕೆಡುತ್ತಿದ್ದಾರೆಂದು ಹೇಳುತ್ತಾರೆ:–

ಗೃಹ ಕುಟುಂಬ ಧನಾದಿಗಳ ಸಂ
ನ್ನಹಗಳುಳ್ಳವರಾಗಿ ವಿಹಿತಾ
ವಿಹಿತ ಧರ್ಮ ಸುಕರ್ಮಗಳ ತಿಳಿಯದಲೆ ನಿತ್ಯದಲಿ ॥
ಅಹರಮೈಥುನ ನಿದ್ರೆಗೊಳಗಾ
ಗಿಹರು ಸರ್ವಪ್ರಾಣಿಗಳು ಹೃ
ದ್ಗುಹ ನಿವಾಸಿಯನರಿಯದಲೆ ಭವದೊಳಗೆ ತೊಳಲುವರು ॥ ೨೪ ॥

ಪದ್ಯಾರ್ಥ:–ಗೃಹ ಕುಟುಂಬ ಧನಾದಿಗಳ=ಮನೆ, ಹೆಂಡತಿ, ಮಕ್ಕಳು ಮೊದಲಾದವರು, ದ್ರವ್ಯಾದಿಗಳು, ಇವುಗಳ, ಸನ್ನಹಗಳುಳ್ಳವರಾಗಿ=ಇವುಗಳನ್ನು ಸಂಪಾದಿಸುವುದರಲ್ಲಿ ನಿರತರಾಗಿ, ವಿಹಿತ=ಮಾಡಬೇಕಾದ, ಅವಿಹಿತ=ಮಾಡಬಾರದ, ಧರ್ಮಸುಕರ್ಮಗಳ, ತಿಳಿಯದಲೆ, ನಿತ್ಯದಲಿ, ಅಹರ=ಆಹಾರ, ಮೈಥುನ, ನಿದ್ರೆಗೆ, ಒಳಗಾಗಿ, ಸರ್ವಪ್ರಾಣಿಗಳು ಇಹರು=ಇರುವರು. ಹೃದ್ಗುಹನಿವಾಸಿಯನು=ತಮ್ಮ ಹೃದಯಾಕಾಶದಲ್ಲಿ ವಾಸಮಾಡುತ್ತಿರುವ ಶ್ರೀಬಿಂಬಮೂರ್ತಿ ಪರಮಾತ್ಮನನ್ನು, ಅರಿಯದಲೆ, ಭವದೊಳಗೆ=ಸಂಸಾರದಲ್ಲಿ, ತೊಳಲುವರು=ತಲ್ಲಣಿಸುವರು.

ತಾತ್ಪರ್ಯ:– ಹೆಂಡತಿ, ಮಕ್ಕಳು, ಮನೆ, ಬಾಗಿಲು, ಆಸ್ತಿ ಮೊದಲಾದವುಗಳನ್ನು ಸಂಪಾದಿಸುವುದಕ್ಕೆ ಬೇಕಾದ ಸನ್ನಾಹಗಳನ್ನು ಮಾಡುತ್ತ ಅದರಲ್ಲೇ ಮೈಮರೆತು ಧರ್ಮ ವಿಷಯದಲ್ಲಾಗಲಿ, ಕರ್ಮಗಳಲ್ಲೇ ಆಗಲಿ ವಿಹಿತವಾದುದು ಯಾವುದು, ಅವಿಹಿತವಾದುದು ಯಾವುದು ಎಂಬುದನ್ನೇ ಮರೆತು ಸರ್ವ ಪ್ರಾಣಿಗಳು ಬೇಕಾದ ಆಹಾರಗಳನ್ನು ತಿಂದು ಸ್ತ್ರೀಯಾದಿ ಭೋಗಗಳನ್ನನುಭವಿಸಿ ಸುಖನಿದ್ರೆಯಲ್ಲಾಸಕ್ತರಾಗಿರುವರು. ಇವು ಲೋಕದಲ್ಲಿ ಎಲ್ಲರಿಗೂ ಸಾಮಾನ್ಯ. ಆದರೆ ಹೃತ್ಕಮಲನಿವಾಸಿಯಾದ ಬಿಂಬರೂಪಿ ಪರಮಾತ್ಮನ ಕ್ರಿಯಾವಿಶೇಷವನ್ನರಿತು ಸರ್ವತ್ರ ಗತ ಬಿಂಬರೂಪವನ್ನು ಏಕೀಭಾವದಿಂದ ಉಪಾಸನೆ ಮಾಡುವವರು ಮಾತ್ರ ವಿರಳ. ಆದ್ದರಿಂದಲೆ ಜನರು ಸಂಸಾರದಲ್ಲಿ ನಾನಾಪ್ರಕಾರವಾಗಿ ಕಷ್ಟಗಳನ್ನು ಅನುಭವಿಸುತ್ತಿರುವರು.

ಅವತಾರಿಕೆ:–ಪರಮಾತ್ಮನು ಗೋಜಾದಿ ರೂಪಗಳಿಂದ ಅಡವಿಯಲ್ಲಿಯೂ, ಬೆಟ್ಟಗಳಲ್ಲಿಯೂ ಹುಟ್ಟಿದ ಮೃಗಗಳನ್ನು ರಕ್ಷಿಸುವನೆಂದು ಹೇಳುತ್ತಾರೆ:–

ಜಡಜಸಂಭವ ಖಗ ಫಣಿಪ ಕೆಂ
ಜಡೆಯರಿಂದೊಡಗೂಡಿ ರಾಜಿಸು
ತಡವಿಯೊಳಗಿಪ್ಪನು ಸದಾಗೋಜಾದ್ರಿಜನು ಎನಿಸಿ ॥
ಉಡುಪನಿಂದಭಿವೃದ್ಧಿಗಳ ತಾ
ಕೊಡುತ ಪಕ್ಷಿ ಮೃಗಾಹಿಗಳ ಕಾ
ರೊಡಲ ಕಾವನು ತತ್ತದಾಹ್ವಯನಾಗಿ ಜೀವರನ ॥ ೨೫ ॥

ಪದ್ಯಾರ್ಥ:–ಜಡಜಸಂಭವ=ಬ್ರಹ್ಮದೇವರು, ಖಗ=ಗರುಡ ದೇವರು, ಫಣಿಪ=ಶೇಷದೇವರು, ಕೆಂಜಿಡೆಯವರಿಂದ=ಕೆಂಜಿಡೆಯ=ರುದ್ರದೇವರು ಇವರಿಂದೊಡಗೂಡಿ, ರಾಜಿಸುತ=ಶೋಭಿಸುತ, ಸದಾ, ಗೋಜನು, ಅದ್ರಿಜನು, ಎನಿಸಿ, ಅಡವಿಯೊಳಗೆ, ಇಪ್ಪನು, ತಾ=ತಾನು, ಉಡುಪನಿಂದ=ಚಂದ್ರನಿಂದ, ಅಭಿವೃದ್ಧಿಗಳ ಕೊಡುತ, ಪಕ್ಷಿ, ಮೃಗ, ಅಹಿಗಳ=ಸರ್ಪಗಳ, ಜೀವರನ, ತತ್ತದಾಹ್ವಯನಾಗಿ=ಆಯಾ ಹೆಸರುಗಳಿಂದ, ಕಾರೊಡಲ= ಕೃಷ್ಣವರ್ಣನಾದ ಶ್ರೀಪರಮಾತ್ಮನು, ಕಾವನು=ಸಂರಕ್ಷಿಸುವನು.

ತಾತ್ಪರ್ಯ:– ಅಡವಿಯಲ್ಲಿಯೂ, ಪರ್ವತಗಳಲ್ಲಿಯೂ ಸನ್ನಿಹಿತನಾದ ಪರಮಾತ್ಮನನ್ನು ವೇದೋಕ್ತ ಗೋಜ ಅದ್ರಿಜಾ ಎಂಬ ನಾಮಗಳಿಂದ ಧ್ಯಾನಿಸುವುದು ವಿಶೇಷ.

ಅವತಾರಿಕೆ:=ಸರ್ವತ್ರ ಜಲದಲ್ಲಿಯೂ, ಸ್ಥಳದಲ್ಲಿಯೂ, ಅಡವಿಯಲ್ಲಿಯೂ, ಆಕಾಶದಲ್ಲಿಯೂ ಪರಮಾತ್ಮನಿದ್ದು ರಕ್ಷಿಸುವನೆಂದು ಹೇಳುತ್ತಾರೆ:–

ಅಪರಿಮಿತ ಸನ್ಮಹಿಮ ನರಹರಿ
ವಿಪಿನದೊಳು ಸಂತೈಸುವನು ಕಾ
ಶ್ಯಪಿಯನಳದವ ಸ್ಥಳಗಳಲಿ ಸರ್ವತ್ರ ಕೇಶವನು ॥
ಖಪತಿ ಗಗನದಿ ಜಲಗಳಲಿ ಮಹಾ
ಶಫರನಾಮಕ ಭಕ್ತರನ ನಿ
ಷ್ಕಪಟದಿಂದಲಿ ಸಲಹುವನು ಕರುಣಾಳು ದಿನದಿನದಿ ॥ ೨೬ ॥

ಪದ್ಯಾರ್ಥ:–ಅಪರಿಮಿತಸನ್ಮಹಿಮ=ಪರಿಮಿತಿಇಲ್ಲದ ಸಚ್ಚರಿತ್ರೆ ಉಳ್ಳ, ನರಹರಿ =ನರಸಿಂಹರೂಪಿ ಶ್ರೀಹರಿಯು, ವಿಪಿನದೊಳು=ಅಡವಿಯಲ್ಲಿ ಸಂತೈಸುವನು, ಶ್ರೀಪರಮಾತ್ಮನು ಅಡವಿಯಲ್ಲಿ ಶ್ರೀನರಸಿಂಹರೂಪದಿಂದ, ಧ್ಯಾನಿಸಲು ರಕ್ಷಿಸುವನು, ಕಾಶ್ಯಪಿಯನು= ಭೂಮಿಯನ್ನು, ಅಳೆದವನು. ಮೂರು ಹೆಜ್ಜೆಗಳಿಂದ ಅಳೆದ ವಾಮನಮೂರ್ತಿಯು, ಸ್ಥಳ–ಗಳಲ್ಲೂ, ಕೇಶವನು, ಸರ್ವತ್ರದಲ್ಲೂ, ಖಪತಿ=ಖಪತಿನಾಮಕ ತ್ರಿವಿಕ್ರಮ, ಗಗನದಿ=ಆಕಾಶ–ದಲ್ಲೂ, ಜಲಗಳಲಿ, ಮಹಾಶಫರನಾಮಕ, ಪೂಜ್ಯನಾದ ಮತ್ಸ್ಯನಾದ ಶ್ರೀಹರಿಯು, ದಿನದಿನದಿ, ನಿಷ್ಕಪಟದಿಂದಲಿ=ನಿರ್ವ್ಯಾಜದಿಂದ ಭಕ್ತರನು ಸಲಹುವನು.

ತಾತ್ಪರ್ಯ:– ಭಾಗವತ ಷಷ್ಠ ಸ್ಕಂಧದಲ್ಲಿರುವ ನಾರಾಯಣವರ್ಮದಲ್ಲಿ "ದುರ್ಗೇಷ್ವಟವ್ಯಾಜಿ ಮಖಾದಿಷುಪ್ರಭುಃ ಪಾಯಾನ್ನೃಸಿಂಹೋಸುರಯೂಥಪಾರಿಃ" ದುರ್ಗಗಳಲ್ಲೂ, ಅಡವಿಗಳಲ್ಲೂ, ಯುದ್ಧರಂಗದಲ್ಲಿಯೂ ಪ್ರಭುವಾದ ನರಸಿಂಹನು ಪಾಲಿಸಲಿ ಎಂದು ಹೇಳಿರುವರು. "ಸ್ಥಳೇಚಮಾಯಾ ವಟು ವಾಮನೋವ್ಯಾತ್" ಎಂಬ ಭಾಗವತ ವಾಕ್ಯಾನುಸಾರ ಭೂಮಿಯನ್ನಳೆದ ವಾಮನರೂಪಿ ಪರಮಾತ್ಮನು ಸ್ಥಳಗಳಲ್ಲಿ ಪಾಲಿಪನು. ಸರ್ವತ್ರ ಕೇಶವನು ರಕ್ಷಿಸುವನು, ಮೂರಡಿ ಭೂಮಿಯನ್ನು ಬೇಡಿ ತ್ರಿವಿಕ್ರಮ ರೂಪದಿಂದ ಅಳೆದು ಸ್ವರ್ಗವನ್ನು ಇಂದ್ರನಿಗೆ ಇತ್ತುದರಿಂದ ತ್ರಿವಿಕ್ರಮರೂಪಕ್ಕೆ ಖಪತಿ ಎಂದು ನಾಮಾಂತರ, ಮೂರು ಹೆಜ್ಜೆಯಿಂದ ಅಳೆದ ಪ್ರಯುಕ್ತ ತ್ರಿವಿಕ್ರಮ ಎಂತಲೂ, ಪ್ರಪಂಚವನ್ನೆಲ್ಲಾ ವ್ಯಾಪಿಸಿದ ಪ್ರಯುಕ್ತ ವಿಶ್ವರೂಪಿಯೆಂತಲೂ, ಅವಕಾಶವುಳ್ಳ ಎಲ್ಲಾ ಸ್ಥಳಗಳನ್ನು ೨ ಹೆಜ್ಜೆಗಳಿಂದ ತಾನು ಆಕ್ರಮಿಸಿ "ನವೈತೃತೀಯಸ್ಯ ತದೀಯಮಣ್ವಪಿ" ಮೂರನೆ ಹೆಜ್ಜೆಗೆ ಅಣುಮಾತ್ರವೂ ಸ್ಥಳವಿಲ್ಲದೆ ವ್ಯಾಪಿಸಿದ್ದರಿಂದ ಖಪತಿ ಎಂದರೆ ಆಕಾಶಕ್ಕೆ ಪತಿ ಎಂತಲೂ ಅರ್ಥ. ಈ ಮೂರು ಹೆಸರು ತ್ರಿವಿಕ್ರಮಮೂರ್ತಿಗೆ ಎಂದು ತಿಳಿಯಬೇಕು. "ತ್ರಿವಿಕ್ರಮಃ ಖೇವತು ವಿಶ್ವರೂಪಃ" ಆದ್ದರಿಂದಲೇ ನಾರಾಯಣವರ್ಮದಲ್ಲಿ ವಿಶ್ವರೂಪಿಯಾದ ತ್ರಿವಿಕ್ರಮನು ಆಕಾಶದಲ್ಲಿ ರಕ್ಷಿಸಲಿ ಎಂದು ಹೇಳಿರುವರು. "ಜಲೇಷುಮಾಂರಕ್ಷತು ಮತ್ಸ್ಯಮೂರ್ತಿಃ" ಎಂಬ ವಾಕ್ಯಾನುಸಾರವಾಗಿ ಜಲದಲ್ಲಿ ಮತ್ಸ್ಯಮೂರ್ತಿಯು ಇದ್ದು ರಕ್ಷಿಪ, ಇಂತಹ ರೂಪಗಳನ್ನು ಧರಿಸಿ ಪರಮ ದಯಾಳುವಾದ ಸ್ವಾಮಿಯು ಭಕ್ತರನ್ನು ಸರ್ವಪ್ರಕಾರ ರಕ್ಷಿಸುವನು.

ಅವತಾರಿಕೆ:– ಸಾರ ಶುಭ ಮೊದಲಾದ ಆರು ರಸಗಳನ್ನು ಕಾರಣಾದಿ ಗತ ಭಗವದ್ರೂಪಗಳಿಗೆ ಅರ್ಪಿಸಿ ಸುಖವನ್ನು ಹೊಂದಿರೆಂಬ ರಹಸ್ಯವನ್ನು ಸಚ್ಛಿಷ್ಯರಿಗೆ ಉಪದೇಶ ಮಾಡುತ್ತಾರೆ:–

ಕಾರಣಾಂತರ್ಯಾಮಿ ಸ್ಥೂಲವ
ತಾರವ್ಯಾಪ್ತಾಂಶಾದಿ ರೂಪಕೆ
ಸಾರ ಶುಭ ಪ್ರವಿವಿಕ್ತಾನಂದ ಸ್ಥೂಲ ನಿಸ್ಸಾರ ॥

ಆರು ರಸಗಳನರ್ಪಿಸಲ್ಪರಿ
ಗೀ ರಹಸ್ಯವ ಪೇಳದೆ ಸದಾ
ಪಾರಮಹಿಮನ ರೂಪಗಳ ನೆನನೆನದು ಸುಖಿಸುತಿರು ॥ ೨೭ ॥

ಪದ್ಯಾರ್ಥ:– ಕಾರಣ=ಕಾರಣರೂಪ, ಅಂತರ್ಯಾಮಿ=ಅಂತರ್ಯಾಮಿರೂಪ ಸ್ಥೂಲ=ವಿರಾಟ್‌ರೂಪ, ಅವತಾರ=ಅವತಾರ ರೂಪ, ವ್ಯಾಪ್ತ=ವ್ಯಾಪ್ತರೂಪ, ಅಂಶಾದಿರೂಪಕೆ =ಅಂಶ ಮೊದಲಾದ ಆರು ರೂಪಗಳಿಗೆ, ಸಾರ, ಶುಭ, ಪ್ರವಿವಿಕ್ತ, ಆನಂದ, ಸ್ಥೂಲ, ನಿಸ್ಸಾರ ಎಂಬ, ಆರು ರಸಗಳನು, ಅರ್ಪಿಸು, ಈ ರಹಸ್ಯವ, ಅಲ್ಪರಿಗೆ, ಪೇಳದೆ, ಸದಾ, ಅಪಾರಮಹಿಮನ, ರೂಪ ಗುಣಗಳ ನೆನೆದು, ಸುಖಿಸುತಿರು.

ತಾತ್ಪರ್ಯ:– ಭಗವದ್ರೂಪಗಳಲ್ಲಿ ಕಾರಣರೂಪ, ಅಂತರ್ಯಾಮಿ ರೂಪ, ಸ್ಥೂಲರೂಪ, ಅವತಾರರೂಪ, ವ್ಯಾಪ್ತರೂಪ, ಅಂಶರೂಪಗಳೆಂದು ಆರು ವಿಧಗಳುಂಟು. ಇದರಂತೆ ರಸಗಳಲ್ಲಿಯೂ, ಸಾರರಸ, ಶುಭರಸ, ಪ್ರವಿವಿಕ್ತರಸ, ಆನಂದರಸ, ಸ್ಥೂಲರಸ, ನಿಸ್ಸಾರಗಳೆಂದು ಆರು ವಿಧಗಳುಂಟು. ಕಾರಣ ರೂಪವೆಂದರೆ ಕಾರ್ಯವಾದ ಒಂದೊಂದು ಪದಾರ್ಥಕ್ಕೂ ಕರ್ತಾಕಾರಣ ಇವೆರಡೂ ಇರುವುವು. ಘಟವೆಂಬವದು ಕಾರ್ಯ. ಇದಕ್ಕೆ ಕಾರಣವು ಮೃತ್ತಿಕೆ (ಮಣ್ಣು); ಕುಂಬಾರನು ಕರ್ತ. ಮಕ್ಕಳು ಕಾರ್ಯಭೂತರು. ತಂದೆಯು ಕರ್ತಾ; ರೇತಸ್ಸು ಕಾರಣ. ಇದರಂತೆ ಜಗತ್ತು ಕಾರ್ಯ; ತ್ರಿಗುಣಾತ್ಮಕಳಾದ ಪ್ರಕೃತಿಯು ಕಾರಣ; ಕರ್ತಾ ಪರಮಾತ್ಮನು. ಹೀಗೆ ಆದಿಸೃಷ್ಟಿ ಮೊದಲು, ಸ್ಥಿತಿ, ಸಂಹಾರ ಮೊದಲಾದ ಎಲ್ಲಾ ವಿಷಯಗಳಲ್ಲೂ ಕಾರ್ಯ, ಕಾರಣ, ಕರ್ತಾ, ಎಂಬ ಮೂರು ಉಂಟು. ಇವುಗಳಲ್ಲಿ ಸೃಷ್ಟಿಗೆ ಕಾರಣಳು ಪ್ರಕೃತಿ. ಹೀಗೆ ಒಂದೊಂದು ಕಾರಣ ವಸ್ತುವಿನಲ್ಲಿಯೂ ಇರುವ ಭಗವದ್ರೂಪಗಳಿಗೆ ಕಾರಣ ರೂಪವೆಂದು ಹೆಸರು. ಎಲ್ಲಾ ಕಾರಣ ರೂಪಗಳನ್ನು ತೆಗೆದುಕೊಂಡು ಒಂದೊಂದಕ್ಕೂ ರಸಗಳನ್ನು ಭಾಗಿಸುವದೆಂದರೆ ಗ್ರಂಥ ವಿಸ್ತಾರವಾಗುವುದು. ಆದ್ದರಿಂದ ಮುಖ್ಯ ಜಗತ್ಸೃಷ್ಟಿಗೂ, ಸ್ಥಿತಿಗೂ, ಸಂಹಾರಕ್ಕೂ ಸಹ ಕಾರಣ ಸ್ವರೂಪಳಾದ ಪ್ರಕೃತಿ, ಪರಮಾತ್ಮನೇ ಪ್ರಕೃತಿಯಲ್ಲಿದ್ದು ಪ್ರಾಕೃತ ಗುಣಗಳನ್ನು ಉಪಾದಾನವಾಗಿ ಸ್ವೀಕರಿಸಿ, ಸೃಷ್ಟಿ, ಸ್ಥಿತಿ ಲಯಗಳನ್ನು ಮಾಡುವನು. ಆದ್ದರಿಂದ ಪ್ರಕೃತ್ಯಾದಿಗಳಲ್ಲಿ ಇರುವ ಭಗವದ್ರೂಪಗಳಿಗೆ ಕಾರಣ ರೂಪಗಳೆಂದು ಹೆಸರು. ಇವುಗಳಿಗೆ ಸಾರರಸವನ್ನರ್ಪಿಸಬೇಕು. ಸಾರರಸವೆಂದರೆ ಪರಮಾತ್ಮನು ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧ ಜೀವರನ್ನು ಸೃಷ್ಟಿಸಿ, ಅವರುಗಳು ಭೋಗಿಸುವುದಕ್ಕಾಗಿ ಸಾತ್ವಿಕ, ರಾಜಸ, ತಾಮಸ ಪದಾರ್ಥಗಳನ್ನು ಸೃಷ್ಟಿಸಿರುವನು. ಅಂದರೆ ಮಧುರವಾದ ಪದಾರ್ಥಗಳು ತುಪ್ಪ, ಹಾಲು, ಮೊದಲಾದ ಗವ್ಯಗಳು ಸಾತ್ವಿಕಗಳು. ರಾಜಸವೆಂದರೆ ತೊಗರಿ, ಕಡ್ಲೆ, ಮೆಣಸಿನಕಾಯಿ ಮೊದಲಾದವು. ಒಳ್ಳೆಗಡ್ಡೆ, ಬದನೇಕಾಯಿ ಮೊದಲಾದವು ತಾಮಸ ಪದಾರ್ಥಗಳು. ಹೀಗೆ ವಿಭಾಗಮಾಡಿ ಸೃಷ್ಟಿಸಿರುವನು. ಇವುಗಳಲ್ಲಿ ಸಾರವೆಂದರೆ ಸಾತ್ವಿಕ ಪದಾರ್ಥಗಳ ರಸವನ್ನೇ ತ್ರಿಗುಣರೂಪಕಾರಣನಾಗಿರುವ ಭಗವದ್ರೂಪಕ್ಕೆ ಸಮರ್ಪಿಸಬೇಕೆಂದರ್ಥ. ಅಂತರ್ಯಾಮಿ ಅಂದರೆ ಬ್ರಹ್ಮಾದಿ ಸಕಲ ಪ್ರಾಣಿಗಳ ಅಂತರ್ಯಾಮಿ ರೂಪ. ಈ ರೂಪಕ್ಕೆ ಶುಭ ರಸವನ್ನರ್ಪಿಸಬೇಕು. ಶುಭವೆಂದರೆ ಮಂಗಳಕರವಾದ ಪದಾರ್ಥವೆಂದರ್ಥ. ಅಂತರ್ಯಾಮಿಯಾದ ಭಗವಂತನಿಗೆ ನಾವು ನೋಡುವುದು, ಕೇಳುವುದು, ಭುಂಜಿಸುವುದು, ಭೋಗಿಸುವುದು ಮೊದಲಾದವುಗಳಲ್ಲಿ ಇದು ಒಳ್ಳೆಯದು, ಇದು ಮಂಗಳವಸ್ತು ಎಂದು ನಮಗೆ ಯಾವುದು ತೋರುವುದೊ ತಕ್ಷಣ ಅವುಗಳನ್ನು ಸಮರ್ಪಿಸಬೇಕು. ಸ್ಥೂಲರೂಪ ಬ್ರಹ್ಮಾಂಡವೇ ಶರೀರವಾಗುಳ್ಳ ವಿರಾಟ್‌ರೂಪ. ಈ ರೂಪಕ್ಕೆ ಪ್ರವಿವಿಕ್ತ ರಸವನ್ನು ಸಮರ್ಪಿಸಬೇಕು. ಪ್ರವಿವಿಕ್ತವೆಂದರೆ ಬಹಳ ಏಕಾಂತವೆಂದರ್ಥ. ಮುಖ್ಯ ಜನಸಂಚಾರವಿಲ್ಲದ ಪ್ರದೇಶವೆಂಬ ತಾತ್ಪರ್ಯ. ಪ್ರಪಂಚದಲ್ಲಿ ಇಂತಹ ಏಕಾಂತವಾದ ಸ್ಥಳಗಳಲ್ಲಿ ಅನೇಕ ಪುಣ್ಯಕರವಾದ ತೀರ್ಥಗಳು, ಕ್ಷೇತ್ರಗಳು ಇರುವುವು. ಯಾತ್ರಾದಿಗಳನ್ನು ಮಾಡುತ್ತಿರುವಾಗ ನದೀ ಕ್ಷೇತ್ರಗಳಲ್ಲಿ ನಾವು ಮಾಡುವ ಪುಣ್ಯಕರ್ಮಗಳು, ನಮಗಾಗುವ ಆನಂದಗಳು ಇವುಗಳನ್ನು ವಿರಾಟ್‌ರೂಪಿಯಾದ ಪರಮಾತ್ಮನಿಗರ್ಪಿಸಬೇಕೆಂಬ ತಾತ್ಪರ್ಯ. ಅವತಾರ ರೂಪಗಳು ರಾಮಕೃಷ್ಣಾದಿಗಳು. ಈ ರೂಪಗಳಿಗೆ ನಾವು ಭೋಜನ, ಪಾನ, ನಿದ್ರೆ, ಭೋಗಗಳಿಂದ ಅನುಭವಿಸುವ ಆನಂದವನ್ನು ಅರ್ಪಿಸಬೇಕೆಂಬ ಭಾವ. ವ್ಯಾಪ್ತ ರೂಪವೆಂದರೆ ಬ್ರಹ್ಮಾಂಡದೊಳಗೂ ಹೊರಗೂ ಚೇತನಾ ಚೇತನಾತ್ಮಕವಾದ ಸಕಲ ಪ್ರಪಂಚದೊಳಗೂ ವ್ಯಾಪಿಸಿಕ್ಕೊಂಡಿರುವ ರೂಪ. ಈ ರೂಪಕ್ಕೆ ಸ್ಥೂಲ ರಸವೆಂದರೆ, ನಮ್ಮ ಸ್ಥೂಲದೃಷ್ಟಿಗೆ ಯಾವುದು ಸಾರವೆಂದು ಕಾಣುವುದೊ ಅಂದರೆ, (ವೃಕ್ಷಗಳಿಗೆ=ಸಸ್ಯಗಳಿಗೆ) ಉದಕವೇ ಸಾರಭೂತವು; ಈ ಉದಕವನ್ನು ಹಾಕುವಾಗ ವೃಕ್ಷಾದಿಗಳಲ್ಲಿ ವ್ಯಾಪಿಸಿಕೊಂಡಿರುವ ಪರಮಾತ್ಮನಿಗೆ ಇದು ಪ್ರೀತಿಯಾಗಲಿ ಎಂದು ಒಪ್ಪಿಸಬೇಕು. ಹೀಗೆ ಒಂದೊಂದು ವಸ್ತುಗತ ಭಗವದ್ರೂಪಕ್ಕೂ ಅದಕ್ಕೆ ಸಾರವೆಂದು ತೋರುವ ರಸವೆಂದು ಸಮರ್ಪಿಸಬೇಕೆಂದು ಅರ್ಥ. ಅಂಶರೂಪವೆಂದರೆ "ಮಮೈವಾಂಶೋಜೀವಲೋಕೆ ಜೀವಭೂತಃ ಸನಾತನಃ" ಎಂಬ ಗೀತಾವಾಕ್ಯದಿಂದ ಸಕಲ ಜೀವರಾಶಿಗಳೂ ಭಗವಂತನ ಅಂಶರೂಪವೆಂದು ತಿಳಿಯಬೇಕು. ಈ ಸ್ಥಳದಲ್ಲಿ ಅಂಶವೆಂದರೆ ಪ್ರತಿಬಿಂಬನೆಂದರ್ಥ. ಇಂತಹ ಪ್ರತಿಬಿಂಬರಾದ ಜೀವರಲ್ಲೂ ತದಾಕಾರ ತದ್ರೂಪನಾಗಿ ಪರಮಾತ್ಮನು ಇರುವನು. ಅಂತರ್ಯಾಮಿ ರೂಪವನ್ನು ಹೇಳುವಾಗ ದೇವ ಮನುಷ್ಯಾದಿಗಳನ್ನು ಹೇಳಿದಂತಾಯಿತು. ಇಲ್ಲಿ ಪಶು ಮೊದಲಾದ ಜೀವರನ್ನು ತೆಗೆದುಕೊಳ್ಳಬೇಕು. ಈ ರೂಪಗಳಿಗೆ ನಮಗೆ ಯಾವದು ನಿಸ್ಸಾರವೆಂದು ತೋರುವುದೋ ಅಂತಹ ಹುಲ್ಲು ಮೊದಲಾದವುಗಳು ಆಹಾರವಾಗಿರುವುವು. ಪಶ್ವಾದಿ ರೂಪಿಯಾದ ಪರಮಾತ್ಮನಿಗೆ ಇಂತಹ ನಿಸ್ಸಾರವನ್ನು ಅರ್ಪಿಸಬೇಕು. "ಶುಭಂ ಪಿಬತ್ಯಸೋನಿತ್ಯಂ ನಾಶುಭಂಪಿಬತೇ ಹರಿಃ" ಎಂಬ ಪ್ರಮಾಣದಿಂದ ಪರಮಾತ್ಮನು

ಯಾವಾಗಲೂ ಸಾರವನ್ನೇ ಸ್ವೀಕರಿಸುವನೆಂದಿರುವುದು. ಹೀಗಿರಲು ನಿಸ್ಸಾರವನ್ನು ಏನೆಂದರ್ಪಿಸಬೇಕೆಂದರೆ, ಪಶು ಮೊದಲಾದವುಗಳಿಗೆ ಅವು ನಿಸ್ಸಾರವಾಗಿ ಕಾಣವು. ಸಾರವತ್ತಾಗಿ ಇರುವವು. ಆ ಪದಾರ್ಥಗಳು ನಮಗೆ ನಿಸ್ಸಾರ. ಅವುಗಳಲ್ಲೂ ನಿಸ್ಸಾರವೆಂದರೆ ನಿತರಾಂ ಸಾರವಾದುದು ಯಾವುದೋ ಅದನ್ನು ಸಮರ್ಪಿಸಬೇಕೆಂದರ್ಥ. ಇದು ಪರಮರಹಸ್ಯವಾದ ವಿಷಯ; ಇದನ್ನು ಅಯೋಗ್ಯರಿಗೆ ಹೇಳಬಾರದು, ನೀನು ಮಾತ್ರ ತಿಳಿದು ಮೇಲೆ ಹೇಳಿದ ಷಡ್ರೂಪಿಯಾದ ಪರಮಾತ್ಮನಿಗೆ ಷಡ್ರಸಗಳನ್ನರ್ಪಿಸುತ್ತಾ ಅಪಾರ ಮಹಿಮನಾದ ಪರಮಾತ್ಮನನ್ನು ಕೊಂಡಾಡುತ್ತಾ ಸುಖವಾಗಿರು ಎಂದು ದಾಸಾರ್ಯರು ಆಪ್ತ ಶಿಷ್ಯರನ್ನುದ್ದೇಶಿಸಿ ಹೇಳಿದರೆಂದು ಭಾವಿಸಬೇಕು.

ಅವತಾರಿಕೆ:– ಹೀಗೆ ಮೇಲೆ ಹೇಳಿದಂತೆ ಯಾವ ರೂಪಗಳಿಗೆ ಯಾವ ರಸವನ್ನು ಅರ್ಪಿಸಬೇಕೆಂಬ ವಿಷಯವನ್ನು ತಿಳಿಯದೆ ನಾವು ಸದಾಚಾರಸಂಪನ್ನರೆಂತಲೂ, ದೊಡ್ಡ ವಂಶದವರೆಂತಲೂ ಭಾವಿಸಿ ಪೂಜಿಸಲು ನಿಷ್ಫಲವೆಂದು ಹೇಳುತ್ತಾರೆ:–

ಜಲಗತೋಡುಪನ ವಿಮಲಬಿಂಬವ
ಮೆಲುವೆನೆಂದತಿಹರುಷದಿಂದಲಿ
ಜಲಚರಪ್ರಾಣಿಗಳು ನಿತ್ಯದಿ ಯತ್ನಗೈವಂತೆ ॥
ಹಲಧರಾನುಜ ಭೋಗ್ಯರಸಗಳ
ನೆಲೆಯನರಿಯದೆ ಪೂಜಿಸುತ ಹಂ
ಬಲಿಸುವರು ಪುರುಷಾರ್ಥಗಳ ಸತ್ಕುಲಜರಾವೆಂದು ॥ ೨೮ ॥

ಪದ್ಯಾರ್ಥ:–ಜಲಗತ=ನೀರೊಳಗೆ ಕಾಣುವ, ಉಡುಪನ=ಚಂದ್ರನ, ವಿಮಲಬಿಂಬವ=ನಿಷ್ಕಳಂಕವಾದ ಬಿಂಬವನ್ನು, ಮೆಲುವೆನೆಂದತಿಹರುಷದಿಂದಲಿ= ತಿನ್ನಬೇಕೆಂಬ ಸಂತೋಷದಿಂದ, ಜಲಚರಪ್ರಾಣಿಗಳು=ಮೀನು ಮೊದಲಾದವು, ನಿತ್ಯದಿ, ಯತ್ನಗೈವಂತೆ= ಯತ್ನಮಾಡುವಂತೆ, ಹಲಧರಾನುಜ=ಬಲರಾಮನ ತಮ್ಮನಾದ ಶ್ರೀಕೃಷ್ಣನಿಗೆ, ಭೋಗ್ಯರಸಗಳ= ಸಮ್ಮತವಾದ ರಸಗಳ, ನೆಲೆಯನು=ಸ್ವರೂಪವನ್ನು, ಅರಿಯದೆ=ತಿಳಿಯದೆ, ಆವು=ನಾವು, ಸತ್ಕುಲಜರೆಂದು=ದೊಡ್ಡ ವಂಶೀಕರು ಎಂದು ಭಾವಿಸಿ, ಪೂಜಿಸುತ=ಪರಮಾತ್ಮನ ಪ್ರತಿಮಾದಿಗಳನ್ನು ಪೂಜಿಸುತ್ತ, ಪುರುಷಾರ್ಥಗಳ=ಧರ್ಮಾರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥಗಳನ್ನು, ಹಂಬಲಿಸುವರು=ಬಹುವಿಧವಾಗಿ ಬೇಡುವರು.

ತಾತ್ಪರ್ಯ:– ಚಂದ್ರನ ಪ್ರತಿಬಿಂಬವು ಕೆರೆ ಮೊದಲಾದವುಗಳಲ್ಲಿ ಕಾಣುತ್ತಿರಲು, ಅಲ್ಲಿರವ ಜಲಚರ ಪ್ರಾಣಿಗಳು ಆ ಚಂದ್ರನ ಪ್ರತಿಬಿಂಬವನ್ನು ತಮಗೆ ಉತ್ತಮಾಹಾರವೆಂದು ಭಾವಿಸಿ ಅದನ್ನು ತಿನ್ನಬೇಕೆಂದು ಬಹಳ ಸಂತೋಷದಿಂದ ಪ್ರಯತ್ನ ಮಾಡುತ್ತವೆ. ಇದು ಎಂದಿಗೂ ಸಾಧ್ಯವಾಗತಕ್ಕದ್ದಲ್ಲ. ಹಾಗೆಯೇ ಎಲ್ಲಿಲ್ಲಿರುವ ಭಗವದ್ರೂಪಗಳಿಗೆ ಯಾವಯಾವ ರಸಗಳನ್ನು ಯಾವಯಾವ ರೀತಿಯಿಂದ ಅರ್ಪಿಸಬೇಕೆಂಬ ವಿಷಯವನ್ನರಿಯದೆ ತಾವು ಸತ್ಕುಲಪ್ರಸೂತರೆಂದು ತಿಳಿದು ಪ್ರತಿಮಾದಿಗಳನ್ನು ಆಡಂಬರದಿಂದ ಪೂಜಿಸಿ ಪುರುಷಾರ್ಥಗಳನ್ನು ಬೇಡುವವರ ಪಾಡು. ಜಲಚರಪ್ರಾಣಿಗಳು ನೀರೊಳಗಿರುವ ಚಂದ್ರನ ಪ್ರತಿಬಿಂಬವನ್ನುಂಡು ಹೊಟ್ಟೆ ತುಂಬಿಸಿಕೊಳ್ಳವ ಯೋಚನೆಯಿಂದ ಎಷ್ಟು ಫಲವನ್ನು ಕಾಣುವವೋ ಅಷ್ಟೇ ಫಲವು ಇದರಿಂದಲೂ ಆಗುವದೆಂಬ ಭಾವ.

ಅವತಾರಿಕೆ:– ಪರಮಾತ್ಮನು ಸಮಸ್ತ ಪ್ರಾಣಿಗಳಲ್ಲಿಯೂ ಇದ್ದು ಅವರವರ ಭೋಗ್ಯರಸಗಳ ಸಾರವನ್ನು ತಾನು ಗ್ರಹಿಸಿ, ಜೀವರ ಯೋಗ್ಯತಾನುಸಾರ ಅವರವರಿಗೆ ರಸಗಳನ್ನು ಕೊಡುವನೆಂದು ಹೇಳುತ್ತಾರೆ:–

ದೇವ ಋಷಿ ಗಂಧರ್ವ ಪಿತೃ ನರ
ದೇವ ಮಾನವ ದನುಜ ಗೋ ಖ
ರಾವಿ ಮೊದಲಾದಖಿಲ ಚೇತನಭೋಗ್ಯರಸಗಳನು ॥
ಯಾವದವಯವಗಳೊಳಗಿದ್ದು ರ
ಮಾವರನು ಸ್ವೀಕರಿಪ ಯಾವ
ಜ್ಜೀವಗಣಕೆ ಸ್ವಯೋಗ್ಯ ರಸಗಳನೀವನೆಂದೆಂದು ॥ ೨೯ ॥

ಪದ್ಯಾರ್ಥ:–ದೇವ=ದೇವತೆಗಳು, ಋಷಿ, ಗಂಧರ್ವ, ಪಿತೃ, ನರದೇವ= ಪ್ರಿಯವ್ರತ ಮೊದಲಾದ ಚಕ್ರವರ್ತಿಗಳು, ಮಾನವ=ಮನುಷ್ಯರು, ದನುಜರು=ದೈತ್ಯರು, ಗೋ=ಗೋವುಗಳು, ಅಜ=ಮೇಕೆಗಳು, ಖರ=ಕತ್ತೆಗಳು, ಆವಿ=ಕುರಿಗಳು, ಮೊದಲಾದ,

ಅಖಿಳ ಚೇತನ ಭೋಗ್ಯ ರಸಗಳನು=ಸಮಸ್ತ ಪ್ರಾಣಿಗಳು ಭೋಗಿಸುವ ಎಲ್ಲಾ ಪದಾರ್ಥಗಳ ಸಾರಗಳನ್ನು, ಯಾವದವಯವಗಳೊಳಗೆ=ಕಣ್ಣು ಕಿವಿ ಮೊದಲಾದ ಎಲ್ಲಾ ಅಂಗಗಳಲ್ಲೂ, ಇದ್ದು, ರಮಾವರನು=ಲಕ್ಷ್ಮೀಪತಿಯು, ಸ್ವೀಕರಿಪ=ಸ್ವೀಕರಿಸುವನು, ಯಾವಜ್ಜೀವಗಣಕೆ=ಎಲ್ಲಾ ಜೀವಗಣಗಳಿಗೂ, ಸ್ವಯೋಗ್ಯ ರಸಗಳ=ಅವರವರ ಯೋಗ್ಯತಾನುಸಾರವಾದ ರಸಗಳನ್ನು, ಎಂದೆಂದೂ=ಯಾವಾಗಲೂ, ಈವನು=ಕೊಡುವನು.

ತಾತ್ಪರ್ಯ:– ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು, ಮನುಷ್ಯರು, ದೈತ್ಯರು, ಗೋವುಗಳು, ಮೇಕೆಗಳು, ಕತ್ತೆಗಳು, ಕುರಿ ಮೊದಲಾದ ಸಕಲ ಪ್ರಾಣಿಗಳ ಭೋಗ್ಯ ವಸ್ತುಗಳೆಂದರೆ, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಮನಸ್ಸು ಮೊದಲಾದ ಅವಯವಗಳಿಂದ ಅನುಭವಿಸುವ ಎಲ್ಲ ವಸ್ತುಗಳೆಂದರ್ಥ. ಕಣ್ಣಿನಿಂದ ನೋಡಿ ಆನಂದಪಡುವುದು ಕೆಲವು; ಕಿವಿಯಿಂದ ಕೇಳಿ ಸುಖಪಡುವುದು; ಭುಂಜಿಸುವುದು ಮೊದಲಾದ ಎಲ್ಲ ಭೋಗ್ಯವಸ್ತುಗಳ ಸಾರವನ್ನೂ ಶ್ರೀಪರಮಾತ್ಮನು ತತ್ ಪ್ರಾಣಿಗಳ ತತ್ತದ್ದಂಗಗಳಲ್ಲಿದ್ದು ಆಯಾ ವಸ್ತುಗಳ ಸಾರವನ್ನು ಸ್ವೀಕರಿಸಿ, ಎಲ್ಲಾ ಜೀವಗಣಗಳಿಗೂ ಅವರವರ ಯೋಗ್ಯತಾನುಸಾರವಾಗಿ ಅವರವರಿಗೆ ರಸಗಳನ್ನು ಉಣಿಸುವನೆಂಬ ಭಾವ.

ಸರ್ವತ್ರ ಇರುವ ಭಗವದ್ರೂಪಗಳಲ್ಲಿ ಆಶಾದಿಗಳನ್ನು ಬಿಟ್ಟು ಪರಮಾತ್ಮನನ್ನು ಭಜಿಸಬೇಕೆಂದು ಹೇಳುತ್ತಾರೆ:–

ಒರಟುಬುದ್ಧಿಯಬಿಟ್ಟು ಲೌಕಿಕ
ಹರಟೆಗಳನೀಡಾಡಿ ಕಾಂಚನ
ಪರಟಿ ಲೋಷ್ಟಾದಿಗಳು ಸಮವೆಂದರಿದು ನಿತ್ಯದಲಿ ॥
ಪುರುಟಗರ್ಭಾಂಡೋದರನು ಸ
ತ್ಪುರುಟನೆಂದೆನಿಸೆಲ್ಲರೊಳಗಿ
ದ್ದುರುಟು ಕರ್ಮವ ಮಾಳ್ಪನೆಂದಡಿಗಡಿಗೆ ನೆನವುತಿರು ॥ ೩೦ ॥

ಪದ್ಯಾರ್ಥ:– ಒರಟುಬುದ್ಧಿಯ ಬಿಟ್ಟು=ಪ್ರತಿಮೆಗಳೇ ದೇವರು, ತಿರುಪತಿಯಲ್ಲೇ ಶ್ರೀನಿವಾಸನಿರುವನು, ಗಂಗಾದಿಗಳೇ ತೀರ್ಥಗಳು ಎಂಬಿವೇ ಮೊದಲಾದ ಒರಟು ಬುದ್ಧಿಯನ್ನು ಬಿಟ್ಟು, ಲೌಕಿಕ ಹರಟೆಗಳನು=ಬರೆ ಪ್ರಪಂಚ ಸಂಬಂಧವಾದ ಮಾತುಗಳನ್ನು, ಈಡಾಡಿ=ತ್ಯಜಿಸಿ, ಲೋಕ ಸಂಬಂಧವಾದ ಹರಟೆಯಲ್ಲೇ ಕಾಲವನ್ನು ಕಳೆವುದನ್ನು ಬಿಟ್ಟು ಕಾಂಚನ=ಬಂಗಾರ, ಪರಟಿ=ಚಿಪ್ಪು, ಲೋಷ್ಟಾದಿಗಳು=ಹೆಂಚು ಮೊದಲಾದವುಗಳು, ಸಮವೆಂದರಿದು=ಸಮವೆಂದು ತಿಳಿದು, ನಿತ್ಯದಲಿ, ಪುರುಟ ಗರ್ಭಾಂಡೋದರನು=ಪುರುಟಗರ್ಭ= ಹಿರಣ್ಯಗರ್ಭ, ಅಂದರೆ ಬ್ರಹ್ಮ ಎಂದರ್ಥ. ಅಂಡೋದರನು=ಆ ಹೆಸರಿನ ಅಂಡ ಅಂದರೆ ಬ್ರಹ್ಮಾಂಡವೆಂದರ್ಥ. ಬ್ರಹ್ಮಾಂಡವನ್ನು ತನ್ನ ಉದರದಲ್ಲಿಟ್ಟುಕೊಂಡಿರುವ ಶ್ರೀಹರಿಯು, ಸತ್ಪುರುಟನೆಂದೆನಿಸಿ=ಪುರುಷೋತ್ತಮನೆಂದೆನಿಸಿ, ಎಲ್ಲರೊಳಗಿದ್ದು, ಉರುಟಕರ್ಮವ=ಉರು= ಉತ್ಕೃಷ್ಟವಾದ ಕರ್ಮಗಳು, ಟ=ಟ ಪ್ರತ್ಯಯವು ಕುತ್ಸಿತ ಕರ್ಮಗಳನ್ನು ಸೂಚಿಸುವುದು. ಹೀಗೆ ಉತ್ತಮವಾದ ಕರ್ಮಗಳು, ನೀಚವಾದ ಕರ್ಮಗಳು ಇಂತಹ ಎಲ್ಲಾ ಕರ್ಮಗಳನ್ನು, ಮಾಳ್ಪನೆಂದು= ಮಾಡುವನೆಂದು, ಅಡಿಗಡಿಗೆ=ಹೆಜ್ಜೆಹೆಜ್ಜೆಗೂ (ಪ್ರತಿ ಕ್ಷಣದಲ್ಲೂ) ನೆನವುತಿರು =ಸ್ಮರಿಸುತ್ತಿರು.

ತಾತ್ಪರ್ಯ:– ಇಲ್ಲೇ ದೇವರು ಇದ್ದಾನೆ, ಅಲ್ಲೇನಿದೆ. ಪ್ರತಿಮೆಯೇ ದೇವರು. ಈ ದೇವರೇ ದೇವರು ಎಂಬಿವೇ ಮೊದಲಾದ ಒರಟು ಬುದ್ಧಿಯನ್ನು ಬಿಟ್ಟು, ಲೌಕಿಕ ಹರಟೆಗಳಲ್ಲೇ ಕಾಲವನ್ನು ಕಳೆಯದೇ ಬಂಗಾರ ಬೇಕು, ಬೆಳ್ಳಿ ಬೇಕು ಎಂಬ ದುರಾಶೆಯನ್ನು ಮಾಡದೇ ಇವೆಲ್ಲವೂ ನಶ್ವರವೆಂದು ತಿಳಿದು ಹೆಂಚು, ಕಲ್ಲು, ಚಿಪ್ಪು ಮೊದಲಾದವುಗಳಿಗೆ ಸಮವೆಂದು ಬಂಗಾರ ಮೊದಲಾದವುಗಳನ್ನೂ ಸಹ ತಿಳಿದು ಪರಮಾತ್ಮನನ್ನು ಭಜಿಸು! ಬ್ರಹ್ಮಾಂಡವನ್ನೇ ಉದರದಲ್ಲಿಟ್ಟುಕೊಂಡಿರುವ ಪರಮಾತ್ಮನು ಸರ್ವೋತ್ತಮನು; ಸರ್ವ ಪ್ರಾಣಿಗಳಲ್ಲೂ ಇದ್ದು ನೀಚೋಚ್ಚಭಾವದಿಂದ ಸಕಲ ಕರ್ಮಗಳನ್ನು ಮಾಡಿಸುವನು ಎಂದು ಭಾವಿಸಿ ಸರ್ವದಾ ಪರಮಾತ್ಮನನ್ನು ಸ್ಮರಿಸಬೇಕೆಂಬ ತಾತ್ಪರ್ಯ.

ಅವತಾರಿಕೆ:– ಪರಮಾತ್ಮನನ್ನು ಯಾವ ರೀತಿಯಿಂದ ಸ್ತೋತ್ರ ಮಾಡಿದರೂ ಪ್ರೀತನಾಗುವನೆಂದು ಹೇಳುತ್ತಾರೆ:–

ಭೂತಳದಿ ಜನರುಗಳು ಮರ್ಮದ
ಮಾತುಗಳನಾಡಿದರೆ ಸಹಿಸದೆ
ಘಾತಿಸುವರತಿಕೋಪದಿಂದಲಿ ಎಚ್ಚರಿಪತೆರದಿ ॥

ಮಾತುಳಾಂತಕ ಜಾರ ಹೇ ನವ
ನೀತಚೋರನೆ ಎನಲು ತನ್ನ ನಿ
ಕೇತನದೊಳಿಟ್ಟವರ ಸಂತೈಸುವನು ಕರುಣಾಳೂ ॥ ೩೧ ॥

ಪದ್ಯಾರ್ಥ:– ಭೂತಳದಿ=ಭೂಮಿಯಲ್ಲಿ, ಜನರುಗಳು, ಮರ್ಮದ ಮಾತುಗಳನಾಡಿದರೆ=ಮರ್ಮವನ್ನು ತಿಳಿದು ಮಾತನಾಡಿದರೆ, ಸಹಿಸದೆ, ಅತಿಕೋಪದಿಂದಲಿ, ಘಾತಿಸುವರು=ಶಿಕ್ಷಿಸುವರು, ಎಚ್ಚರಿಪತೆರದಿ=ಭಕ್ತ ಜನರು ಎಚ್ಚರಿಪ ತೆರದಿ=ಜ್ಞಾಪಕ ಕೊಡೋ ರೀತಿಯಾಗಿ, ಮಾತುಳಾಂತಕ=ಎಲೈ ಸೋದರಮಾವನನ್ನು ಕೊಂದವನೆ! ಜಾರ! ಹೇ! ನವನೀತ ಚೋರನೆ=ಬೆಣ್ಣೆಯನು ಕದ್ದವನೇ! ಎನಲು=ಎಂದು ಭಕ್ತಿಯಿಂದ ಸ್ಮರಿಸಿದರೆ, ಅವರ=ಅವರನ್ನು, ತನ್ನ ನಿಕೇತನದೊಳಿಟ್ಟು=ತನ್ನ ಮನೆಯಲ್ಲಿಟ್ಟು (ಮುಕ್ತಿಯಲ್ಲಿ ತನ್ನ ಲೋಕದಲ್ಲಿಟ್ಟು) ಕರುಣಾಳು=(ಕೃಪೆಯಿಂದ) ದಯಾಸಮುದ್ರನು ಸಂತೈಸುವನು.

ತಾತ್ಪರ್ಯ:– ಲೋಕದಲ್ಲಿ ಸಾಮಾನ್ಯವಾಗಿ ಯಾರಲ್ಲಾದರೂ ಸ್ವಲ್ಪ ಜಾರತ್ವ ಚೋರತ್ವಾದಿ ಅಪವಾದ ಇರುವುದನ್ನು ಎತ್ತಿ ಮರ್ಮೋದ್ಘಾಟನೆಯಾಗಿ ಮಾತನಾಡಿದರೆ ತಕ್ಷಣ ಅವರಿಗೆ ಬಹಳ ಶಿಟ್ಟು ಬಂದು ಮರ್ಮವನ್ನು ಎತ್ತಿ ಮಾತನಾಡಿದವನನ್ನು ಹೊಡೆಯುವರು. ಶ್ರೀಪರಮಾತ್ಮನು ಹಾಗಲ್ಲ. ಎಲೈ ಮಾತುಳಾಂತಕ! ಹೇ ಜಾರ! ನವನೀತ ಚೋರ ಎಂದು ಮರ್ಮವನ್ನೆತ್ತಿ ಸ್ಮರಿಸಿದರೆ, ಕೃಪೆಯಿಂದ ದಿವ್ಯವಾದ ಮುಕ್ತಿಯನ್ನು ಕೊಟ್ಟು ಸಂರಕ್ಷಿಸುವನು. ಆದ್ದರಿಂದಲೇ ಕರುಣಾಳು ಅಂದರು.

ಅವತಾರಿಕೆ:– ಇದು ಪರಮ ಗೋಪ್ಯವಾದ ಹರಿಕಥೆ ಎಂಬ ಉತ್ತಮವಾದ ಅಮೃತವು. ಆದ್ದರಿಂದ ಭಕ್ತರಿಗಲ್ಲದೆ ಅಭಕ್ತರಿಗೆ ಹೇಳಬಾರದೆಂದು ಹೇಳುತ್ತಾರೆ:–

ಹರಿಕಥಾಮೃತಸಾರವಿದು ಸಂ
ತರು ಸದಾ ಚಿತ್ತೈಸುವುದು ನಿ
ಷ್ಟುರಿಗಳಿಗೆ ಪಿಶುನರಿಗಯೋಗ್ಯರಿಗಿದನು ಪೇಳದಲೆ ॥
ನಿರುತ ಸದ್ಭಕ್ತಿಯಲಿ ಭಗವ
ಚ್ಚರಿತೆಗಳ ಕೊಂಡಾಡಿ ಹಿಗ್ಗುವ
ಪರಮಭಗವದ್ದಾಸರಿಗೆ ತಿಳಿಸುವುದು ಈ ರಹಸ್ಯ ॥ ೩೨ ॥

ಪದ್ಯಾರ್ಥ:– ಇದು ಹರಿಕಥೆ ಎಂಬ ಉತ್ತಮವಾದ ಅಮೃತವು. ಸಂತರು= ಸಜ್ಜನರು, ಸದಾ, ಚಿತ್ತೈಸುವುದು=ಚಿತ್ತದಲ್ಲಿ ಧರಿಸತಕ್ಕದ್ದು, ನಿಷ್ಟುರಿಗಳಿಗೆ=ಅಸೂಯಾಪರರಿಗೆ, ಪಿಶುನರಿಗೆ=ಇತರರಿಗೆ ಬೆನ್ನಿನಹಿಂದೆ ಕೆಡುಕನ್ನು ಮಾತನಾಡುವವರಿಗೆ, ಅಯೋಗ್ಯರಿಗೆ=ಹರಿ ಗುರು ದ್ವೇಷಿಗಳಿಗೆ, ಇದನು, ಪೇಳದಲೆ, ನಿರುತ=ಸರ್ವದಾ, ಸದ್ಭಕ್ತಿಯಲಿ, ಭಗವಚ್ಚರಿತೆಗಳ, ಕೊಂಡಾಡಿ, ಹಿಗ್ಗುವ, ಪರಮ ಭಗವದ್ದಾಸರಿಗೆ, ಈ ರಹಸ್ಯ=ಈ ಗುಟ್ಟಾದ ವಿಷಯಗಳನ್ನು, ತಿಳಿಸುವದು.

ತಾತ್ಪರ್ಯ:– ಈಗ ನಾವು ಹೇಳಿದುದೆಲ್ಲವೂ ಕೇವಲ ರಹಸ್ಯವಾದ ಹರಿಕಥೆ ಎಂಬ ಅಮೃತದ ಸಾರವು. ಇದಕ್ಕೆ ಅಧಿಕಾರಿಗಳು ಕೇವಲ ಸಜ್ಜನರೇ ಹೊರತು ಇತರರಲ್ಲ. ಆದುದರಿಂದ ಇದನ್ನು ಭಗವನ್ಮಹಿಮೆ ಕೇಳುವುದರಲ್ಲಿ ವಿಶ್ವಾಸವಿಲ್ಲದೆ ಆಕ್ಷೇಪವಾಗಿ ಮಾತಾಡುವವರಿಗೆ ಹೇಳಬಾರದು. ಪರಮಾತ್ಮನಲ್ಲಿ ದ್ವೇಷ ಮಾಡುವವರಿಗೂ, ಅನ್ಯಥೋಪಾಸನೆಯನ್ನು ಮಾಡುವ ತಮೋಯೋಗ್ಯರಿಗೂ ಹೇಳಬಾರದು. ಯಾರು ಕೇವಲ ಭಕ್ತಿಯಿಂದ ಭಗವಚ್ಚರಿತ್ರೆಗಳನ್ನು ಕೇಳಿ ಕೊಂಡಾಡಿ ಹಿಗ್ಗುವರೋ ಅಂತಹ ಭಗವದ್ದಾಸರಿಗೆ ಮಾತ್ರವೇ ಈ ರಹಸ್ಯವನ್ನು ಉಪದೇಶ ಮಾಡತಕ್ಕದ್ದು.

ಅವತಾರಿಕೆ:– ಸಂಧಿಯನ್ನು ಮುಗಿಸುತ್ತಾ ಈಶ್ವರ ಸಂಕಲ್ಪದಿಂದ ಏನು ಬಂದರೂ ಅಷ್ಟಕ್ಕೇ ಸಂತೋಷಪಟ್ಟು ಭಗವಂತನನ್ನು ಭಜಿಸಬೇಕೆಂಬ ಮುಖ್ಯ ವಿಷಯವನ್ನು ಹೇಳುತ್ತಾರೆ:–

ಸತ್ಯಸಂಕಲ್ಪನು ಸದಾ ಏ
ನಿತ್ತುದೆಪುರುಷಾರ್ಥವೆಂದರಿ
ದತ್ಯಧಿಕ ಸಂತೋಷದಲಿ ನೆನವುತ್ತ ಭುಂಜಿಪದು ॥

ನಿತ್ಯಸುಖಸಂಪೂರ್ಣ ಪರಮ ಸು
ಹೃತ್ತಮ ಜಗನ್ನಾಥವಿಟ್ಠಲ
ಬತ್ತಿಸಿ ಭವಾಂಬುಧಿಯ ಚಿತ್ಸುಖವ್ಯಕ್ತಿ ಕೊಡುತಿಪ್ಪ ॥ ೩೩ ॥

ಪದ್ಯಾರ್ಥ:–ಸತ್ಯಸಂಕಲ್ಪನು=ಶ್ರೀಪರಮಾತ್ಮನ ಯಾವ ಸಂಕಲ್ಪವೂ ಸುಜೀವರಿಗೆ ಹಿತವಾಗಿಯೇ ತೋರುವುದು. ಅಂತಹ ಸಂಕಲ್ಪಸ್ವರೂಪನಾಗಿರುವ ಪರಮಾತ್ಮನು ಜೀವರಿಗೆ ಯಾವ ದೇಶ, ಕಾಲ, ಅವಸ್ಥೆಗಳನ್ನು ಕೊಡುವನೋ ಅದೇ ಆತನಿತ್ತ ಪರಮ ಪುರುಷಾರ್ಥವೆಂದು ಅರಿತು ಪ್ರತಿಕ್ಷಣ ಅಧಿಕಾರಿ ಸಂತೋಷದಿಂದ ಆತನ ಮಹಿಮೆಯನ್ನು ಸ್ಮರಿಸುತ್ತ, ಆ ಅವಸ್ಥಾದಿಗಳನ್ನು ಭೋಗಿಸುವುದು ನಿಜ ಭಕ್ತರ ಧರ್ಮ. ಶ್ರೀಹರಿಯು, ಸದಾ, ಏನಿತ್ತುದೆ=ಯಾವುದು ಕೊಡುವನೋ ಅದೆ, ಪುರುಷಾರ್ಥವೆಂದು, ಅರಿದು=ತಿಳಿದು, ಅತ್ಯಧಿಕ ಸಂತೋಷದಲಿ, ನೆನವುತ್ತ=ಸ್ಮರಿಸುತ್ತ, ಭುಂಜಿಪದು=ಭೋಗಿಸ ತಕ್ಕದ್ದು, ನಿತ್ಯಸುಖಸಂಪೂರ್ಣ =ನಿತ್ಯ ಆನಂದಮಯವಾದ, ಪರಮ, ಸುಹೃತ್ತಮ=ಆಪತ್ತುಗಳನ್ನು ಪರಿಹರಿಸಿ ರಕ್ಷಿಪ ಉತ್ತಮ ಮಿತ್ರರೂಪಿಯಾಗಿ ಸದಾ ಬದಿಯಲ್ಲಿರುವ, ಜಗನ್ನಾಥವಿಟ್ಠಲ=ಜಗನ್ನಾಥದಾಸರಿಗೆ ಒಲಿದ ಶ್ರೀಪರಮಾತ್ಮನು, ಭವಾಂಬುಧಿಯ=ಈ ಸಂಸಾರ ಸಮುದ್ರವನ್ನು, ಬತ್ತಿಸಿ=ಸುಲಭದಿಂದ ದಾಟಿಸಿ ಕ್ರಮೇಣ ಚೇತನರಿಗೆ, ಚಿತ್ಸುಖ=ಸ್ವರೂಪ ಆನಂದ ಆವಿರ್ಭಾವವನ್ನು, ವ್ಯಕ್ತಿ=ಕೊಡುತಿಪ್ಪ.

ತಾತ್ಪರ್ಯ:– ಸತ್ಯಸಂಕಲ್ಪನೆಂದರೆ, ತನ್ನ ಮನಸ್ಸಿಗೆ ಮೊದಲು ಯಾವುದು ಬಂದಿರುವುದೋ ಅದನ್ನೇ ಸತ್ಯವಾಗಿ ನಡಿಸುವವನು. ಅದನ್ನು ಅನ್ಯಥಾ ಮಾಡಲು ಬ್ರಹ್ಮಾದಿಗಳಿಂದಲೂ ಆಗುವುದಿಲ್ಲ. ಆದ್ದರಿಂದಲೇ ಸತ್ಯಸಂಕಲ್ಪನೆಂದು ಪರಮಾತ್ಮನಿಗೇ ಹೆಸರು. "ಈಶಾವಾಸ್ಯಮಿದಂ ಸರ್ವಂ ಯಜ್ಜಗತ್ಯಾಂ ಜಗನ್ಮನಃ॥ ತೇನತ್ಯಕ್ತೇನ ಭುಂಜೀಥಾಃ" ಎಂಬ ಈಶಾವಾಸ್ಯೋಪನಿಷತ್ತಿನ ವಾಕ್ಯದಂತೆ, ಇಂತಹ ಸ್ವಾಮಿಯು ತನ್ನ ಸಂಕಲ್ಪಕ್ಕೆ ಬಂದುದನ್ನು ಸದಾ ನಮಗೆ ಕೊಡುವನು. ಆದ್ದರಿಂದ ನಮ್ಮ ಯೋಗ್ಯತಾನುಸಾರವಾಗಿ ಅವನು ಕೊಟ್ಟಿದುದೇ ಪುರುಷಾರ್ಥ. ಅಂದರೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ೪ ಪ್ರಕಾರಗಳುಂಟು. ದೇವರು ಕೊಟ್ಟುದೇ ನಮಗೆ ಪುರುಷಾರ್ಥವೆಂದು ಭಾವಿಸಿ ಇಲ್ಲದ ಪದಾರ್ಥಗಳಲ್ಲಿ ದುರಾಶೆಯನ್ನು ಬಿಡಬೇಕೆಂಬ ಭಾವ. "ಯದೃಚ್ಛಾಲಾಭತುಷ್ಟಸ್ಯ ತೇಜೋವಿಪ್ರಸ್ಯ ವರ್ಧತೆ" ಈಶ್ವರ ಪ್ರೇರಣೆಯಿಂದ ಲಬ್ಧವಾದುದರಲ್ಲಿ ಯಾವನು ಸಂತೋಷಪಡುತ್ತಿರುವನೋ ಅವನಿಗೆ ತೇಜಸ್ಸು ವೃದ್ಧಿಯಾಗುವುದು. "ಅಸಂತುಷ್ಟಃ ಸುಖಂವಿಪ್ರನಾಪ್ನೋತ್ಯಪಿ ಸುರೇಶ್ವರಃ" ಎಲೈ ಬ್ರಾಹ್ಮಣನೇ! ಅಸಂತುಷ್ಟನಾಗಿದ್ದರೆ ಅವನು ದೇವೇಂದ್ರನಾದರೂ ಸುಖವಿಲ್ಲ ಎಂದು ಭಾಗವತ ದಶಮ ಸ್ಕಂಧದಲ್ಲಿ ರುಕ್ಮಿಣಿದೇವಿಯು ಕಳುಹಿಸಿದ ಪತ್ರವನ್ನು ತೆಗೆದುಕೊಂಡು ಕೃಷ್ಣನಲ್ಲಿ ಬಂದಿದ್ದ ಬ್ರಾಹ್ಮಣನನ್ನು ನೋಡಿ ಶ್ರೀಕೃಷ್ಣನು ಹೇಳಿದ ಶ್ಲೋಕ. ಈ ರೀತಿಯಾಗಿ ಕೊಟ್ಟುದುದನ್ನು ಸಂತೋಷದಿಂದ ಭೋಗಿಸುತ್ತ, ಪರಮಾತ್ಮನನ್ನು ಭಜಿಸುತ್ತಿದ್ದರೆ ಪರಮ ಸಖನಾದ ಶ್ರೀಹರಿಯು ಸಂಸಾರವೆಂಬ ಸಮುದ್ರವನ್ನು ಒಣಗಿಸಿ (ಸಂಸಾರದಿಂದ ಮುಕ್ತನನ್ನಾಗಿ ಮಾಡಿ) ಮುಕ್ತಿಯಲ್ಲಿ ಸ್ವರೂಪಾನಂದವನ್ನು ವ್ಯಕ್ತಿಮಾಡಿ ಸಂರಕ್ಷಿಸುವನು.

ನಾಮಸ್ಮರಣೆ ಸಂಧಿ ಎಂಬ ೧೩ನೆಯ ಸಂಧಿಯ ವ್ಯಾಖ್ಯಾನವು ಮುಗಿದುದು

॥ ಶ್ರೀ ಕೃ ಷ್ಣಾ ರ್ಪ ಣ ಮ ಸ್ತು ॥